
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಚಿರಸ್ಮರಣೀಯ

'ಗೆಲಿಲಿಯೋ' ಪಾತ್ರದ

ಲೋಕನಾಥ್

ಇನ್ನು ನೆನಪು ಮಾತ್ರ

ಸಂಪುಟ 13 | ಸಂಚಿಕೆ 3 | ಜನವರಿ 14-20, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಮೇಲುಜಾತಿಗೆ
ಮೀಸಲಾತಿ:
ಅಪಾಯಕಾರಿ
ಗಿಮಿಕ್



ಕಾರ್ಮಿಕರು ಬಂದರು ದಾರಿ ಬಿಡಿ

20 ಕೋಟಿ ಕಾರ್ಮಿಕರ ಚಾರಿತ್ರಿಕ ಮುಷ್ಕರ

ಪ್ರಾಥಮಿಕ ಶಿಕ್ಷಣ,
ಇಂಗ್ಲಿಷ್ ಮಾಧ್ಯಮ, ರಾಷ್ಟ್ರೀಕರಣ



ಸಾಹಿತ್ಯ ಸಮ್ಮೇಳನದ ಸ್ವರೂಪ
ಮರು ಚಿಂತನೆ ಅಗತ್ಯ



ಬಾಂಗ್ಲಾ:
ಹಸಿನಾ ಹ್ಯಾಟ್ರಿಕ್



10% ಹೆಚ್ಚುವರಿ ಮೀಸಲಾತಿಯ ಕೇಂದ್ರ ಸಂಪುಟದ ತರಾತುರಿಯ ನಿರ್ಧಾರ ಚುನಾವಣಾ ಲಾಭಕ್ಕಾಗಿಯಷ್ಟೇ ಬಳಸುವ ಹುನ್ನಾರ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಸಾಮಾನ್ಯ ಪ್ರವರ್ಗದಲ್ಲಿನ ಆರ್ಥಿಕವಾಗಿ ದುರ್ಬಲವಾದ ವಿಭಾಗಗಳಿಗೆ 10 ಶೇ. ಮೀಸಲಾತಿ ನೀಡಲು ಕೇಂದ್ರ ಸಂಪುಟ ನಿರ್ಧರಿಸಿರುವುದು ಒಂದು ಚುನಾವಣಾ ಹೂಟ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಈ ನಿರ್ಧಾರ ಸಂಸತ್ತಿನ ಪ್ರಸಕ್ತ ಅಧಿವೇಶನ ಕೊನೆಗೊಳ್ಳಬೇಕಾಗಿರುವುದಕ್ಕಿಂತ ಒಂದು ದಿನ ಮೊದಲು ಮುಂಬರುವ ಸಾರ್ವತ್ರಿಕ ಚುನಾವಣೆಗಳ ಮೇಲೆ ಕಣ್ಣಿಟ್ಟುಕೊಂಡು ಬಂದಿದೆ. ಈ ಮೂಲಕ, ಕಳೆದ ನಾಲ್ಕೂವರೆ ವರ್ಷಗಳಲ್ಲಿ ತಾನು ಉದ್ಯೋಗಾವಕಾಶ ನಿರ್ಮಾಣ ಮಾಡುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದನ್ನು ಮೋದಿ ಸರಕಾರ ಒಪ್ಪಿಕೊಂಡಂತಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ವಿಷಯ ಮಂಡಲ್ ಆಯೋಗದ ದಿನಗಳಿಂದಲೂ ಚರ್ಚೆಯಲ್ಲಿದೆ. ಇಂತಹ ಒಂದು ಕ್ರಮದ ಅಗತ್ಯವಿದೆ ಎಂದು ಸಿಪಿಐ(ಎಂ) ಆಗಲೂ ಹೇಳಿತ್ತು, ಈಗಲೂ ಹೇಳುತ್ತಿದೆ. ಸಂಪುಟ ನಿರ್ಧಾರ ಯಾವುದೇ ಸಮಾಲೋಚನೆಗಳಿಲ್ಲದೇ, ನಿರ್ದಿಷ್ಟವಾಗಿ, ಇಂತಹ ಕ್ರಮದ ಫಲಾನುಭವಿಗಳನ್ನು ನಿರ್ಧರಿಸುವ ಮಾನದಂಡಗಳ ಬಗ್ಗೆ ಸಮಾಲೋಚನೆಗಳಿಲ್ಲದೇ ಬರುತ್ತಿದೆ. ಸಂಪುಟ ಆಗಲೇ ವಾರ್ಷಿಕ ಆದಾಯ ರೂ.8ಲಕ್ಷಕ್ಕಿಂತ ಕಡಿಮೆ ಮತ್ತಿತರ ಮಾನದಂಡಗಳನ್ನು ನಿಗದಿ ಮಾಡಿರುವಾಗ, ನಿಜಕ್ಕೂ ಈ ಮೀಸಲಾತಿ ನಿಜವಾಗಿಯೂ ವಂಚಿತರಾದವರಿಗೆ ಪ್ರಯೋಜನ ಕಾರಿಯಾಗುತ್ತದೆಯೇ ಎಂಬ ಪ್ರಶ್ನೆಯನ್ನು ಹುಟ್ಟು ಹಾಕಿದೆ. ಇಂದು (ಜನವರಿ 8) ಆರಂಭವಾಗಿರುವ ಎರಡು ದಿನಗಳ ದೇಶವ್ಯಾಪಿ ಕೈಗಾರಿಕಾ ಮುಷ್ಕರ ತಿಂಗಳಿಗೆ 18,000ರೂ. ಕನಿಷ್ಠ ವೇತನದ ಭರವಸೆಯ ಬೇಡಿಕೆ ಇಟ್ಟಿದೆ. ಅಂದರೆ ವಾರ್ಷಿಕ 2.16 ಲಕ್ಷ ರೂ. ಆದರೆ ಈ ಸರಕಾರ ಇದನ್ನೂ ಕೊಟ್ಟಿಲ್ಲ ಎಂಬುದನ್ನು ಸಿಪಿಐ(ಎಂ) ಈ ಹಿನ್ನೆಲೆಯಲ್ಲಿ ನೆನಪಿಸಿದೆ.

ಈ ವಿಷಯದಲ್ಲಿ ಯಾವುದೇ ಕ್ರಿಯೆಗೆ ಮುಂದಾಗಲು ಇದುವರೆಗೂ ಮೋದಿ ಸರಕಾರ ನಿರಾಕರಿಸಿಕೊಂಡು ಬಂದಿತ್ತು. ಈಗ ಸಂಪುಟ ನಿರ್ಧಾರವನ್ನು ಕೈಗೊಂಡಿರುವುದು, ಇತ್ತೀಚೆಗೆ ನಡೆದ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಅದರ ಸೋಲಿನ ನಂತರ ತನ್ನ ಚುನಾವಣಾ ಗಳಿಕೆಗಳಿಗಾಗಿ ಬೆಂಬಲವನ್ನು ಕಲೆಹಾಕಬೇಕಾದ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರದ ಹತಾಶೆಯನ್ನು ಬಯಲಿಗೆಳೆಯುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ.

ಈ ಕ್ರಮಕ್ಕೆ ಸಂವಿಧಾನದ ಕಲಮು 15 ಮತ್ತು 16ಕ್ಕೆ ತಿದ್ದುಪಡಿಗಳನ್ನು ತರಬೇಕಾಗುತ್ತದೆ. ಸಂವಿಧಾನ ತಿದ್ದುಪಡಿಗೆ ಕಾಲಾವಕಾಶ ಬೇಕಾಗುತ್ತದೆ, ಮತ್ತು ಅದನ್ನು ಜಾರಿಗೆ ತರಲು ಬಹುಪಾಲು ರಾಜ್ಯ ವಿಧಾನ ಮಂಡಲಗಳ ಮಂಜೂರಾತಿಯೂ ಬೇಕಾಗುತ್ತದೆ. ಹೀಗಿರುವಾಗ ಕೇಂದ್ರ ಸಂಪುಟ ಈ ತರಾತುರಿಯ ನಿರ್ಧಾರ ಇದನ್ನು ಕೇವಲ ಚುನಾವಣಾ ಲಾಭಕ್ಕಾಗಿ ಬಳಸುವ ಮೋದಿ ಸರಕಾರದ ಹುನ್ನಾರವನ್ನು ಬಯಲಿಗೆಳೆದಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಮೋದಿ ಸರಕಾರ ಅನುಸರಿಸಿಕೊಂಡು ಬಂದಿರುವ ಧೋರಣೆಗಳು ಉದ್ಯೋಗಾವಕಾಶಗಳನ್ನು ನಿರ್ಮಾಣ ಮಾಡುವ ಬದಲು ಈಗಿರುವ ಉದ್ಯೋಗಗಳೇ ನಷ್ಟಗೊಳ್ಳುವಂತೆ ಮಾಡಿವೆ. ಈಗಿರುವ ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು ಒಬಿಸಿ ಮೀಸಲು ಹುದ್ದೆಗಳನ್ನೇ ಭರ್ತಿ ಮಾಡುತ್ತಿಲ್ಲ. ನವ–ಉದಾರವಾದಿ ಧೋರಣೆಗಳನ್ನು ಉಗ್ರ ರೀತಿಯಲ್ಲಿ ಅನುಸರಿಸುತ್ತಿರುವುದರಿಂದಾಗಿ ಮತ್ತು ಖಾಸಗಿ ವಲಯವನ್ನು ಮೀಸಲಾತಿಯ ವ್ಯಾಪ್ತಿಯಿಂದ ಹೊರಗಿಟ್ಟಿರುವುದರಿಂದಾಗಿ ಮೀಸಲಾತಿಯ ಪ್ರಯೋಜನಗಳು ಹೆಚ್ಚೆಚ್ಚು ಕ್ಷೀಣಗೊಳ್ಳುತ್ತಿವೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಂಸತ್ತಿನ ಮುಂದೆ ಇಂತಹ ಯಾವುದೇ ತಿದ್ದುಪಡಿಯನ್ನು ತರುವ ಮೊದಲು ವ್ಯಾಪಕ ಸಮಾಲೋಚನೆಗಳನ್ನು ನಡೆಸಬೇಕು ಎಂದು ಆಗ್ರಹಿಸಿದೆ.

“ಇತಿಹಾಸ ಮರುಕಳಿಸುತ್ತದೆ. ಈ ಬಾರಿ ಒಂದು ಪ್ರಹಸನವಾಗಿ”

ಈ ಸಂದರ್ಭದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ 15 ವರ್ಷಗಳ ಹಿಂದೆ ಎನ್‌ಡಿಎ–1 ಸರಕಾರದ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಕೂಡ, 2004 ರ ಚುನಾವಣೆಗಳ ಕೆಲವೇ ತಿಂಗಳುಗಳ ಮೊದಲು ಇಂತಹುದೇ ಒಂದು ಕಸರತ್ತು ನಡೆಸಿದ್ದರು ಎಂದು ನೆನಪಿಸಿದ್ದಾರೆ. ಆಗಲೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದೊಂದು ಚುನಾವಣಾ ಗಿಮಿಕ್, ಜನತೆ ಇದನ್ನು ಬಗೆದು ನೋಡಬೇಕು ಎಂದಿತ್ತು. 2004ರಲ್ಲಿ ‘ಭಾರತ ಹೊಳೆಯುತ್ತಿದೆ’ ಎಂಬ ಭಾರೀ ಪ್ರಚಾರದ ಹೊರತಾಗಿಯೂ ಮತದಾರರು ಅವರನ್ನು ಅಧಿಕಾರದಿಂದ ಇಳಿಸಿದರು. 10 ವರ್ಷಗಳ ನಂತರ ಅಧಿಕಾರಕ್ಕೆ ಮತ್ತೆ ಬಂದಾಗ ಇದು ಬಿಜೆಪಿಗೆ ಮರೆತೇ ಹೋಗಿತ್ತು. ಈಗ ನಾಲ್ಕೂವರೆ ವರ್ಷ ಅದನ್ನು ಮರೆತಿದ್ದ ಎನ್‌ಡಿಎ–2 ಸರಕಾರ ಈಗ ಮತ್ತೆ ಅದೇ ಚುನಾವಣಾ ಕಸರತ್ತಿಗೆ ಇಳಿದಿದೆ.

ಈ ಬಗ್ಗೆ ಟಿಪ್ಪಣಿ ಮಾಡುತ್ತ ಯೆಚುರಿಯವರು “ಇತಿಹಾಸ ಮರುಕಳಿಸುತ್ತದೆ. ಈ ಬಾರಿ ಒಂದು ಪ್ರಹಸನವಾಗಿ” ಎಂದಿದ್ದಾರೆ.

ಸಿಬಿಐ ನಿರ್ದೇಶಕರ ಮೇಲಿನ ಕ್ರಮವನ್ನು ರದ್ದು ಮಾಡಿದ ಸುಪ್ರಿಂ ಕೋರ್ಟ್ ತೀರ್ಪು: ಮೋದಿಯವರಿಗೆ ಹೊಡೆತ

ಮನಸ್ಸಾಕ್ಷಿ ಎಂಬುದಿದ್ದಿದ್ದರೆ ಅವರು ರಾಜೀನಾಮೆ ನೀಡಬೇಕಿತ್ತು: ಸಿಪಿಐ(ಎಂ) ಪೊಲಿಟ್‌ಬ್ಯುರೊ

ಅಲೋಕ್ ವರ್ಮ ಸಿಬಿಐ ನಿರ್ದೇಶಕರ ತಮ್ಮ ಹುದ್ದೆಯಲ್ಲಿ ಕಾರ್ಯನಿರ್ವಹಿಸದಂತೆ ಮಾಡಿರುವ ಮೋದಿ ಸರಕಾರದ ಕ್ರಮವನ್ನು ಸುಪ್ರಿಂ ಕೋರ್ಟ್ ರದ್ದು ಮಾಡಿ ತೀರ್ಪು ನೀಡಿರುವುದು ಮೋದಿ ಸರಕಾರ ಹೇಗೆ ಸಿಬಿಐನಂತಹ ಸಂಸ್ಥೆಗಳ ಕಾರ್ಯ ನಿರ್ವಹಣೆಯ ಪ್ರತಿಯೊಂದು ನಿಯಮ, ವಿಧಿ–ವಿಧಾನವನ್ನು ತಲೆಕೆಳಗೆ ಮಾಡುತ್ತಿದೆ ಮತ್ತು ತನ್ನ ಸಂಕುಚಿತ ರಾಜಕೀಯ ಹಿತಾಸಕ್ತಿಗಳಿಗೆ ಒಳಪಡಿಸುತ್ತದೆ ಎಂಬುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ. ಈ ತೀರ್ಪು ಮೋದಿ ಸರಕಾರದ ಮೇಲಿನ, ನಿರ್ದಿಷ್ಟವಾಗಿ, ಸ್ವತಃ ಪ್ರಧಾನ ಮಂತ್ರಿಗಳ ಮೇಲಿನ ಒಂದು ಬಲವಾದ ದೋಷಾರೋಪಣೆ ಎಂದು ಅದು ಹೇಳಿದೆ. ಏಕೆಂದರೆ ಸಿಬಿಐ ಕೆಲಸ ನಿರ್ವಹಿಸುತ್ತಿರುವುದು ಅವರ ನೇರ ಉಸ್ತುವಾರಿಯಲ್ಲಿರುವ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಅಡಿಯಲ್ಲಿ.

ಪ್ರಧಾನ ಮಂತ್ರಿಗಳಿಗೆ ಮನಸ್ಸಾಕ್ಷಿ ಎಂಬುದಿದ್ದಿದ್ದರೆ ಅವರು ರಾಜೀನಾಮೆ ನೀಡಬೇಕಿತ್ತು. ಮುಂಬರುವ ಚುನಾವಣೆಗಳಲ್ಲಿ ಜನತೆ ಅವರನ್ನು ಅಧಿಕಾರದಿಂದ ತೆಗೆಯಲೇ ಬೇಕು ಎಂಬುದಕ್ಕೆ ಇದು ಮತ್ತೊಂದು ಕಾರಣವಾಗುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

10% ಮೀಸಲಾತಿ ತಿದ್ದುಪಡಿ ಮಸೂದೆಗೆ ತಿದ್ದುಪಡಿ ಮಂಡಿಸಲು ಅವಕಾಶ ನಿರಾಕರಣೆ ಏಕೆ?

ಜನವರಿ 8 ರಂದು ಲೋಕಸಭೆಯಲ್ಲಿ ಸಾಮಾನ್ಯ ಪ್ರವರ್ಗದ ಆರ್ಥಿಕವಾಗಿ ದುರ್ಬಲವಾಗಿರುವ ವಿಭಾಗಗಳಿಗೆ 10% ಮೀಸಲಾತಿ ನೀಡುವ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಮಂಡಿಸಲಾಯಿತು. ಇದರಲ್ಲಿ ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಈ ವಿಭಾಗಗಳಿಗೆ 10% ಮೀಸಲಾತಿಯ ಅಂಶವಿದೆ. ಆದರೆ ಈ ಮೀಸಲಾತಿ ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು, ಒಬಿಸಿ ಮತ್ತು ಅಲ್ಪಸಂಖ್ಯಾತರಿಗೆ ಲಭ್ಯವಿಲ್ಲ. ಆದ್ದರಿಂದ ಈ ವಿಭಾಗಗಳನ್ನೂ ಇದರಲ್ಲಿ ಸೇರಿಸಬೇಕು ಮತ್ತು ಈ ಮೀಸಲಾತಿಯನ್ನು ಕೇವಲ ಖಾಸಗಿ ಶಿಕ್ಷಣ ಸಂಸ್ಥೆಗಳಿಗಷ್ಟೇ ಸೀಮಿತಗೊಳಿಸದೆ, ಖಾಸಗಿ ವಲಯದ ಉದ್ಯೋಗಗಳಿಗೂ ಒದಗಿಸಬೇಕು ಎಂಬ ತಿದ್ದುಪಡಿಯನ್ನು ಮಂಡಿಸಲು ಸಿಪಿಐ(ಎಂ) ಸದಸ್ಯ ಪಿ.ಕರುಣಾಕರನ್ ಅವಕಾಶ ಕೋರಿದರು. ಆದರೆ ಅದಕ್ಕೆ ಅಧ್ಯಕ್ಷರು ಅವಕಾಶ ಕೊಡಲಿಲ್ಲ. ತಿದ್ದುಪಡಿಗಳನ್ನು ಮಂಡಿಸಲು ಬಹಳ ತಡವಾಗಿದೆ ಎಂದು ಅವರಿಗೆ ಹೇಳಲಾಯಿತು. ಅಧಿವೇಶನದ ಕೊನೆಯ ದಿನ ಮಧ್ಯಾಹ್ನವಷ್ಟೇ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಮಂಡಿಸಿರುವಾಗ ‘ಬಹಳ ತಡ’ ಎಂಬುದರ ಅರ್ಥವೇನು? ವಾಸ್ತವವಾಗಿ ಮೋದಿ ಸರಕಾರ ಈ ಬಗ್ಗೆ ಚರ್ಚೆಗೆ ಸಿದ್ಧವಿಲ್ಲ, ಏಕೆಂದರೆ ಚರ್ಚೆ ಆರಂಭವಾದರೆ ಅವರ ನಿಜ ಸ್ವರೂಪ ಸಂಪೂರ್ಣವಾಗಿ ಬಯಲಾಗುತ್ತದೆ ಎಂಬ ಭೀತಿ ಅವರಿಗೆ ಎಂದು ಈ ಕುರಿತು ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.

ಬುಲಂದ್‌ಶಹರ್ ತನಿಖೆ: ಎಸ್‌ಐಟಿ ಮತ್ತು ಉತ್ತರಪ್ರದೇಶ ಆಡಳಿತದಿಂದ ಮುಚ್ಚಿ ಹಾಕುವ ಪ್ರಯತ್ನ: ಹೈಕೋರ್ಟ್ ನ್ಯಾಯಾಧೀಶರಿಂದ ನಿಷ್ಪಕ್ಷಪಾತೀ ವಿಚಾರಣೆ ನಡೆಸಲು ಸಿಪಿಐ(ಎಂ) ಆಗ್ರಹ

ಉತ್ತರಪ್ರದೇಶದ ಬುಲಂದ್‌ಶಹರ್ ಜಿಲ್ಲೆಯಲ್ಲಿ ಡಿಸೆಂಬರ್ 3 ರಂದು ನಡೆದ ಘಟನೆಯ ತನಿಖೆಯ ಮೇಲೆ ಉತ್ತರಪ್ರದೇಶದ ಸರಕಾರದ ಸಂಕುಚಿತ ಅಜೆಂಡಾ ತನ್ನ ಪ್ರಭಾವ ಬೀರುತ್ತಿದೆ. ಪೊಲೀಸ್ ಅಧಿಕಾರಿಯನ್ನು ಕೊಂದ ಮತ್ತು ಹಿಂಸಾಚಾರ ನಡೆಸಿದ ಪ್ರಮುಖ ಕ್ರಿಮಿನಲ್‌ಗಳನ್ನು ರಕ್ಷಿಸುವ ಪ್ರಯತ್ನ ನಡೆಯುತ್ತಿದೆ, ಮತ್ತು ಅಮಾಯಕರನ್ನು ಗೋಹತ್ಯೆಯ ಹೆಸರಿನಲ್ಲಿ ಬಂಧಿಸಲಾಗುತ್ತಿದೆ. ಈ ಸಮಸ್ತ ಘಟನೆ ಈ ಪ್ರದೇಶದಲ್ಲಿ ಕೋಮು ಹಿಂಸಾಚಾರದಿಂದ ಪ್ರಯೋಜನ ಪಡೆಯಬಹುದಾದ ಕೆಲವು ಗುಂಪುಗಳ ಯೋಜನೆಯಾಗಿದ್ದಿರಬಹುದೇ ಎಂದು ಕಂಡುಕೊಳ್ಳುವ ಆಸಕ್ತಿ ಸರಕಾರಕ್ಕೆ ಇದ್ದಂತಿಲ್ಲ. ಈ ಕಾರಣಕ್ಕಾಗಿ ಹೈಕೋರ್ಟಿನ ಒಬ್ಬ ಹಾಲಿ ನ್ಯಾಯಾಧೀಶರಿಂದ ಒಂದು ಸಮಯಮಿತಿಯೊಳಗೆ ವಿಚಾರಣೆ ನಡೆಸುವುದು ಅಗತ್ಯವಾಗಿದೆ. ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿರುವಂತೆ ಇಂತಹ ಪ್ರಕರಣಗಳು ನಡೆಯದಂತೆ ತಡೆಯಲು ಕೂಡ ಇದು ಅಗತ್ಯ ಎಂದು ಸಿಪಿಐ(ಎಂ) ಹೇಳಿದೆ.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ಸುಭಾಷಿಣಿ ಅಲಿ, ಉತ್ತರಪ್ರದೇಶ ಕಾರ್ಯದರ್ಶಿ ಮಂಡಳಿ ಸದಸ್ಯ ಸುರಿಂದರ್ ಸಿಂಗ್, ಮತ್ತು ಬುಲಂದ್ ಶಹರ್ ಜಿಲ್ಲಾ ಸಮಿತಿ ಸದಸ್ಯ ಜಗವೀರ್ ಭಟ್ಟಿ ಯವರನ್ನು ಒಳಗೊಂಡಿದ್ದ ಸಿಪಿಐ(ಎಂ) ನಿಯೋಗವೊಂದು

ಪುಟ 14 ನೋಡಿ

ಎರಡನೇ ಕ್ಷಿಪ್ರಕ್ರಾಂತಿ–ಸಿಬಿಐ ಮುಖ್ಯಸ್ಥರ ವರ್ಗಾವಣೆ ಹಗರಣಗಳು ಹೊರಬರದಂತೆ ತಡೆಯುವ ಹತಾಶ ಪ್ರಯತ್ನ – ಸಿಪಿಐ(ಎಂ) ಪೊಲಿಟ್‌ಬ್ಯುರೊ

ಸಿಬಿಐ ಮುಖ್ಯಸ್ಥ ಅಲೋಕ್ ವರ್ಮರನ್ನು ಸುಪ್ರಿಂ ಕೋರ್ಟ್ ಅವರ ಹುದ್ದೆಯಲ್ಲಿ ಮತ್ತೆ ನೆಲೆಗೊಳಿಸಿದ 48 ಗಂಟೆಗಳ ಒಳಗೆ ‘ವರ್ಗಾವಣೆ’ ಮಾಡಲು ಪ್ರಧಾನ ಮಂತ್ರಿ ಮೋದಿ ನೇತೃತ್ವದಲ್ಲಿ ನಿರ್ಧರಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಸಿಬಿಐ ಮೇಲೆ ಸರಕಾರದ ಹತೋಟಿಯಿರುವಂತೆ ಮಾಡುವುದಕ್ಕಾಗಿ ಮತ್ತು ಅದನ್ನು ತನ್ನ ರಾಜಕೀಯ ಹಾಗೂ ಚುನಾವಣಾ ಅಜೆಂಡಾವನ್ನು ಈಡೇರಿಸಿಕೊಳ್ಳಲು ಒಂದು ಉಪಕರಣವಾಗಿ ಬಳಸಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಬಿಜೆಪಿ ತನ್ನ ವಿಮರ್ಶಕರನ್ನು/ವಿರೋಧಿಗಳನ್ನು ಬೆದರಿಸಲು, ಬ್ಲಾಕ್‌ಮೇಲ್ ಮಾಡಲು ಮತ್ತು ಅವರ ಬಾಯಿಮುಚ್ಚಿಸಲು ಹಾಗೂ ತಮಗೆ ವಿಧೇಯರಾಗಿರುವವರನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ. ಈ ಕ್ರಿಯೆಯ ಮೂಲಕ ಮೋದಿ ಸರಕಾರ ತನ್ನ ಕಪಾಟಿನಲ್ಲಿರುವ “ಅಸ್ಥಿಪಂಜರಗಳು” ಹೊರಗೆ ಉರುಳುರುಳಿ ಬರದಂತೆ ತಡೆಯುವ ಪ್ರಯತ್ನವನ್ನೂ ಮಾಡುತ್ತಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಕೇಂದ್ರೀಯ ವಿಚಕ್ಷಣಾ ಆಯುಕ್ತರ (ಸಿವಿಸಿ) ಒಂದು ಸರಿಯಿದೆಯೇ ಎಂದು ಖಚಿತಪಡಿಸಿಕೊಳ್ಳದ ಮತ್ತು ಪ್ರಶ್ನಾರ್ಹವಾದ ವರದಿಯ ಆಧಾರದಲ್ಲಿ ನಡೆಸಿದ ಅಕ್ಟೋಬರ್ 23, 2018ರ ಮಧ್ಯರಾತ್ರಿಯ ಕ್ಷಿಪ್ರಕ್ರಾಂತಿಯ ನಂತರ ಸುಪ್ರಿಂ ಕೋರ್ಟ್ ಇದು ಕಾನೂನುಬಾಹಿರ ಎಂದು ಕಂಡು ಅಲೋಕ್ ವರ್ಮರಿಗೆ ಮತ್ತೆ ಅವರಿಗೆ ಹುದ್ದೆ ಸಿಗುಂತಾಯಿತು. ಈಗ ಎರಡನೇ ಕ್ಷಿಪ್ರಕ್ರಾಂತಿಯ ನಂತರ ಸದ್ಯದಲ್ಲೇ ನಿವೃತ್ತರಾಗಲಿರುವ ಅವರನ್ನು ವರ್ಗಾವಣೆ ಮಾಡಲಾಗಿದೆ. ಪ್ರಧಾನ ಮಂತ್ರಿಗಳು ಒಂದು ಬಲವಾದ ಭಿನ್ನಮತವನ್ನು ಬದಿಗೊತ್ತಿ, ಹಾಗೂ ಅಲೋಕ್ ವರ್ಮರವರಿಗೆ ಸಿವಿಸಿ ವರದಿಯ ವಿರುದ್ಧ ತಮ್ಮನ್ನು ಸಮರ್ಥಿಸಿಕೊಳ್ಳಲು ಅವಕಾಶ ನೀಡದೆ ನಡೆಸಿರುವ ಈ ಕ್ರಿಯೆ ಈ ಸರಕಾರದ ಅತ್ಯುನ್ನತ ಮಟ್ಟಗಳಲ್ಲಿ ಚಮಚಾಗಿರಿ, ಭ್ರಷ್ಟಾಚಾರ ಮತ್ತು ರಾಷ್ಟ್ರೀಯ ಭದ್ರತೆಗೆ ಸಂಚಕಾರ ಬಯಲಿಗೆ ಬರದಂತೆ ತಡೆಯುವ ಒಂದು ಪ್ರಯತ್ನ ಎಂಬುದು ಸ್ಪಷ್ಟವಾಗಿದೆ ಎಂದು ಪೊಲಿಟ್‌ಬ್ಯುರೊ ಟೀಕಿಸಿದೆ. ಮೋದಿ ಸರಕಾರ ಬಹಳಷ್ಟು ಸಂಗತಿಗಳನ್ನು ಮರೆಮಾಚ ಬಯಸುತ್ತದೆ ಎಂಬುದು ಬಹು ಸ್ಪಷ್ಟ ಎಂದಿರುವ ಸಿಪಿಐ(ಎಂ) ಸಾರ್ವತ್ರಿಕ ಚುನಾವಣೆಗಳ ಕೆಲವು ವಾರಗಳ ಮೊದಲಿನ ಈ ನಡೆ ರಫೇಲ್ ವ್ಯವಹಾರ ಸೇರಿದಂತೆ ವಿವಿಧ ಹಗರಣಗಳು ಬಯಲಿಗೆ ಬರಬಹುದೆಂಬ ಭಯ ಮತ್ತು ದಿಗಿಲು ಆವರಿಸಿರುವುದನ್ನು ತೋರಿಸಿದೆ ಎಂದು ಅಭಿಪ್ರಾಯ ಪಟ್ಟಿದೆ.

ಸಿಬಿಐನಂತಹ ಸಂಸ್ಥೆಯ ಸ್ವಾತಂತ್ರ್ಯಕ್ಕೆ ಸಂಪೂರ್ಣ ಸಂಚಕಾರ ಬಂದಿದೆ. ಈ ಸರಕಾರ ಸಂವಿಧಾನಿಕ ಸಂಸ್ಥೆಗಳನ್ನು, ಸಿಬಿಐ ಮಾತ್ರವಲ್ಲ, ರಿಝರ್ವ್ ಬ್ಯಾಂಕ್, ನ್ಯಾಯಾಂಗ, ಮಾಹಿತಿ ಆಯೋಗ ಮತ್ತಿತರ ಭಾರತೀಯ ಪ್ರಜಾಪ್ರಭುತ್ವದ ಸ್ಥಂಭಗಳನ್ನು ಧ್ವಂಸ ಮಾಡುವ ಹತಾಶ ಪ್ರಯತ್ನಕ್ಕಿಳಿದಿದೆ. ಭಾರತದ ಜನತೆ ಇದರ ಹಿಂದಿರುವ ಕಪಟವನ್ನು ಕಾಣಬೇಕು, ಮತ್ತು ಮುಂಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿ/ಎನ್‌ಡಿಎಗೆ ತಕ್ಕ ಶಾಸ್ತಿ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ಸಂಪಾದಕೀಯ

ಇಂಗ್ಲಿಷ್ ಮಾಧ್ಯಮ ಮತ್ತು ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಕರಣ

ಇತ್ತೀಚೆಗೆ ಧಾರವಾಡದಲ್ಲಿ ಸೇರಿದ್ದ 84ನೇ ಕನ್ನಡ ಸಾಹಿತ್ಯ ಸಮ್ಮೇಳನ ಎರಡು ನಿರ್ಣಯಗಳನ್ನು ತೆಗೆದುಕೊಂಡಿದೆ. ಸಾವಿರ ಇಂಗ್ಲಿಷ್ ಮಾಧ್ಯಮ ಸರಕಾರಿ ಶಾಲೆಗಳನ್ನು ತೆರೆಯುವ ಸರಕಾರದ ನಿರ್ಣಯವನ್ನು ವಿರೋಧಿಸುವ ನಿರ್ಣಯ ಒಂದು. ಪ್ರಾಥಮಿಕ ಶಿಕ್ಷಣವನ್ನು ರಾಷ್ಟ್ರೀಕರಿಸುವ ಇನ್ನೊಂದು ನಿರ್ಣಯ. ಈ ಎರಡೂ ನಿರ್ಣಯಗಳು ಸ್ವಾಗತಾರ್ಹ ಮತ್ತು ಇವು ಸರಿಯಾಗಿಯೇ ಇವೆ. ಈ ಅಥವಾ ಇಂತಹುದೆ ಪ್ರಸ್ತಾವಗಳನ್ನು ಹಿಂದೆ ಹಲವು ಬಾರಿ ಮಾಡಲಾಗಿದೆ. ಸಾಹಿತ್ಯ ಸಮ್ಮೇಳನಗಳು, ಸಾಹಿತಿಗಳು, ಶಿಕ್ಷಣತಜ್ಞರು, ರಾಜಕಾರಣಿಗಳೂ ಇದನ್ನು ಹೇಳುತ್ತಲೇ ಬಂದಿದ್ದಾರೆ. ಆದರೆ ಈ ವರೆಗೆ ಅದನ್ನು ಜಾರಿ ಮಾಡುವ ರಾಜಕೀಯ ಇಚ್ಛೆ ಸರಕಾರಗಳಿಗೂ ಇಲ್ಲ. ಮಾತ್ರವಲ್ಲ, ಇಂತಹ ನೀತಿಗಳಿಗೆ ವ್ಯಾಪಕ ಜನಬೆಂಬಲವೂ ಇಲ್ಲ. ಆದರೆ ಕನ್ನಡ ಸಾಹಿತ್ಯ ಸಮ್ಮೇಳನದ ಈ ಎರಡು ನಿರ್ಣಯಗಳ ಬಗ್ಗೆ ಮುಖ್ಯಮಂತ್ರಿ ಮತ್ತು ಇತರ ಕೆಲವು ಸಚಿವರು ತೋರಿಸಿದ ತಿರಸ್ಕಾರ ಮತ್ತು ನಿರ್ಲಕ್ಷ ಖಂಡನೀಯ.



ಶಾಲೆಯಲ್ಲಿ, ಅದರಲ್ಲೂ ಪ್ರಾಥಮಿಕ ಹಂತದಲ್ಲಿ ಶಿಕ್ಷಣದ ಮಾಧ್ಯಮ ಮಗುವಿನ ಮಾತೃಭಾಷೆ ಆಗಿರಬೇಕು ಎಂಬುದು ವೈಜ್ಞಾನಿಕ ನೀತಿ. ಮಗುವಿನ ಮಾತೃಭಾಷೆ ಅಥವಾ ಅದರ ಪರಿಸರದಲ್ಲಿ ವ್ಯಾಪಕವಾಗಿ ಬಳಕೆಯಾಗುವ ಭಾಷೆ ಮಾಧ್ಯಮವಾಗಿದ್ದಾಗ ಅದರ ಕಲಿಕೆಯ ವೇಗ, ಗುಣಮಟ್ಟ ಎರಡೂ ಹೆಚ್ಚುತ್ತವೆ. ಅದರ ಜತೆ ಅಗತ್ಯವಿರುವ ಇತರ ಭಾಷೆಗಳನ್ನು ಕಲಿಯುವುದು ಸಾಧ್ಯ. ಬಹುಭಾಷೆ ಇತರ ವಿಷಯಗಳ ಕಲಿಕೆಗೆ ತೊಡಕಲ್ಲ, ಪೂರಕ ಎಂಬುದು ಎಂಬುದು ವೈಜ್ಞಾನಿಕ ಸತ್ಯ. ಆದರೆ ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣದ ಜಾರಿ, ಭಾರತದ ಜಾತಿ ವ್ಯವಸ್ಥೆ, ವಸಾಹತುಶಾಹಿ ಚರಿತ್ರೆ ಮತ್ತು ಜಾಗತಿಕ ಬಂಡವಾಳಶಾಹಿಯ ಒತ್ತಡದಿಂದಾಗಿ ಹಿಂದೆ ಸರಿಯುತ್ತಲೇ ಬಂದಿದೆ. ಸಂಕೀರ್ಣವಾಗುತ್ತಲೇ ನಡೆದಿದೆ. ಭಾರತದ ಜಾತಿ ವ್ಯವಸ್ಥೆ ಜನರ ಭಾಷೆಯಲ್ಲಿ ಜ್ಞಾನದ ಉತ್ಪಾದನೆ, ಶಿಕ್ಷಣ, ಪ್ರಚಾರವನ್ನು ನಿಷೇಧಿಸಿತ್ತು. ಸಂಸ್ಕೃತ ಜ್ಞಾನದ ಶಿಕ್ಷಣದ ಭಾಷೆಯಾಗಿತ್ತು. ಶಿಕ್ಷಣ ಬಹುಸಂಖ್ಯಾತ ಶೂದ್ರರಿಗೆ ನಿಷಿದ್ಧವಾಗಿತ್ತು. ಬ್ರಿಟಿಶ್ ವಸಾಹತುಶಾಹಿಯ ಆಗಮನದ ನಂತರ ಇಂಗ್ಲಿಷ್ ಜ್ಞಾನದ ಶಿಕ್ಷಣದ ಭಾಷೆಯಾಗಿ ಕೆಲವರಿಗೆ ಸೀಮಿತವಾಗಿತ್ತು.

ಸ್ವಾತಂತ್ರ್ಯ ನಂತರ ಮಾತೃಭಾಷೆಯಲ್ಲಿ ಸಾರ್ವತ್ರಿಕ ಶಿಕ್ಷಣ ಮತ್ತು ತ್ರಿಭಾಷಾ ಸೂತ್ರದ ಜಾರಿಯ ನಂತರವೂ, ಇಂಗ್ಲಿಷ್ ಅಧಿಕಾರದ, ಆಳುವವರ, ಸಾಮಾಜಿಕ ಮೇಲ್ಮುಖ ಚಲನೆಗೆ ಅಗತ್ಯವಾದ ಉಪಕರಣವಾಗಿ ಮುಂದುವರೆಯಿತು. ದೇಶದ ಆಳುವ ಮತ್ತು ಮೇಲು ವರ್ಗಕ್ಕೆ ಇಂಗ್ಲಿಷ್ ಮಾಧ್ಯಮ ಶಿಕ್ಷಣ ಮುಂದುವರೆಯಿತು. ಅದು ವಿಶೇಷ ಸವಲತ್ತು ಆಯಿತು. ಇದಕ್ಕೆ ಬಂಡವಳಿಗ ವರ್ಗದ ವರ್ಗಹಿತ ಕಾರಣವಾಗಿತ್ತು. ಬಹುಸಂಖ್ಯಾತರ ಮಾತೃಭಾಷೆಯಾದ ಭಾರತೀಯ ಭಾಷೆಗಳ ವಿರುದ್ಧ ಮಲತಾಯಿ ಧೋರಣೆ ಮುಂದುವರೆದಿದೆ. ಬಹುಸಂಖ್ಯಾತ ಜನತೆ ಶಿಕ್ಷಣ, ಉದ್ಯೋಗ, ಅಧಿಕಾರ, ರಾಜಕೀಯ ಪ್ರಾತಿನಿಧ್ಯದ ಅನ್ವೇಷಣೆಯಲ್ಲಿ ಇಂಗ್ಲಿಷ್ ಮಾಧ್ಯಮ ಶಿಕ್ಷಣವನ್ನು ಒಂದು ಅನಿವಾರ್ಯ ಉಪಕರಣವಾಗಿ ಕಾಣುತ್ತದೆ. ಅಂತಹ ಪರಿಸ್ಥಿತಿಗಳನ್ನು ಉಂಟು ಮಾಡಲಾಗಿದೆ. 1990ರ ದಶಕದ ನವ–ಉದಾರವಾದಿ ನೀತಿಗಳ ಜಾರಿ ನಂತರ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ. ಭಾರತೀಯ ಭಾಷಾ ಮಾಧ್ಯಮದಲ್ಲಿ ಶಿಕ್ಷಣ ಪಡೆದವರಿಗೆ ಉದ್ಯೋಗವಕಾಶ ಇಲ್ಲ ಅಥವಾ ಕಡಿಮೆ. ಇದು ಸರಕಾರಿ ಮತ್ತು ಖಾಸಗಿ ಎರಡೂ ರಂಗದ ಉದ್ಯೋಗಗಳಿಗೆ ಅನ್ವಯಿಸುತ್ತದೆ.

ಇಂತಹ ಹಿನ್ನೆಲೆಯಲ್ಲಿ ಇಂಗ್ಲಿಷ್ ಮಾಧ್ಯಮದ ಗೀಳು ಹೆಚ್ಚಿದೆ. ಇದನ್ನು ಬಂಡವಾಳ ಮಾಡಿಕೊಂಡ ದೊಡ್ಡ ಖಾಸಗಿ ಶಾಲೆಗಳ ಪ್ರಬಲ ಲಾಬಿ ಹುಟ್ಟಿಕೊಂಡಿದೆ. ಈ ಲಾಬಿ ರಾಜಕೀಯವಾಗಿ ಪ್ರಬಲವಾಗಿದ್ದು ಮಾತೃಭಾಷಾ ಸರಕಾರಿ ಶಾಲಾ ಶಿಕ್ಷಣವನ್ನು ದುರ್ಬಲಗೊಳಿಸಲು ಒತ್ತಡ ಹಾಕುತ್ತಿದೆ. ನವ–ಉದಾರವಾದಿ ನೀತಿಗಳು ಸಹ ಶಿಕ್ಷಣಕ್ಕೆ ಸರಕಾರ ಖರ್ಚು ಕಡಿತ ಮಾಡಲು, ಅದನ್ನು ಖಾಸಗಿ ರಂಗಕ್ಕೆ ಬಿಟ್ಟು ಕೊಡಲು ಒತ್ತಡ ಹಾಕುತ್ತಿದೆ. ಸರಕಾರ ಈ ನೀತಿಯನ್ನು ಕಳೆದ 2–3 ದಶಕಗಳಿಂದ ಜಾರಿ ಮಾಡುತ್ತಿದ್ದು ಸರಕಾರಿ ಶಾಲೆಗಳು ದುರ್ಬಲವಾಗುವುದು, ಅದರಿಂದ ದಾಖಲಾತಿ ಕಡಿಮೆಯಾಗುವುದು, ಅದರಿಂದಾಗಿ ಶಾಲೆ ಮುಚ್ಚುವುದು ಮುಂದುವರೆದಿದೆ. ಖಾಸಗಿ ಶಾಲೆಗಳು ಇರದಲ್ಲಿ ಇದರ ವಿರುದ್ಧ ಆಕ್ರೋಶ ವ್ಯಕ್ತವಾಗುತ್ತಿದ್ದು, ಅದನ್ನು ಸಂತೃಪ್ತಿಗೊಳಿಸಲು ಸರಕಾರ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಆರಂಭಿಸುವ ಯೋಜನೆ ಹರಿಯ ಬಿಟ್ಟಿದೆ.

ವೈಜ್ಞಾನಿಕ ನೀತಿಯಾಗಿ ಮಾತೃಭಾಷೆ ಬಿಟ್ಟು ಇಂಗ್ಲಿಷ್ ಮಾಧ್ಯಮ ಶಾಲೆಯ ಪರಿಣಾಮಕಾರಿತನ ಈಗಾಗಲೇ ನಗರ ಪ್ರದೇಶಗಳಲ್ಲಿ ನಾಯಿಕೊಡೆಯಂತೆ ತಲೆಯೆತ್ತಿರುವ ಇಂತಹ ಶಾಲೆಗಳ ವಿದ್ಯಾರ್ಥಿಗಳ ಗುಣಮಟ್ಟ ಪರಿಶೀಲಿಸಿದರೆ ತಿಳಿಯುತ್ತದೆ. ಇವರಲ್ಲಿ ಬಹುಸಂಖ್ಯಾತ ಮಕ್ಕಳು ಎರಡೂ ಭಾಷೆಗಳಲ್ಲಿ ಪ್ರಭುತ್ವ ಸಾಧಿಸದೆ, ವಿಷಯಗಳ ಕಲಿಕೆಯಲ್ಲಿ ಸರಕಾರಿ ಶಾಲೆಗಳ ಗುಣಮಟ್ಟಕ್ಕಿಂತಲೂ ಕೆಳಗಿದ್ದಾರೆ. ಈ ಕ್ರಮ ಒಂದು ಅವೈಜ್ಞಾನಿಕ ನೀತಿಯೆಂಬುದು ಒತ್ತಟ್ಟಿಗಿರಲಿ. ಇದೊಂದು ಗಂಭೀರ ಪ್ರಯತ್ನವಲ್ಲ ಎಂಬುದು ಸಹ ಸ್ಪಷ್ಟ. ಈ ನೀತಿಯ ಜಾರಿಗೆ ಪ್ರಸ್ತಾವಿಸಲಾಗುತ್ತಿರುವ ಕೆಲವು ಕ್ರಮಗಳನ್ನು ಪರಿಶೀಲಿಸಿದರೆ ಅದು ತಿಳಿಯುತ್ತದೆ. ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯ ಮತ್ತು ಶಿಕ್ಷಕರ ಕೊರತೆ, ಕನ್ನಡದಲ್ಲೂ ಸಮರ್ಪಕ ಕಲಿಕೆ ಕೊಡಲು ತರಬೇತಿ ಹೊಂದದ ಶಿಕ್ಷಕರು, ಸ್ವತಃ ಇಂಗ್ಲಿಷ್ ಭಾಷೆಯ ಪ್ರಭುತ್ವ ಹೊಂದಿರದ ಶಿಕ್ಷಕರು – ಈ ಹಿನ್ನೆಲೆಯಲ್ಲಿ ಈ ನೀತಿಯನ್ನು ಹೇಗೆ ಜಾರಿಗೊಳಿಸುತ್ತೀರಿ ಎಂದು ಕೇಳಲಾಗಿದೆ. ಇದಕ್ಕೆ ಸರಕಾರದ ಉತ್ತರ – ಈಗಿರುವ ಶಿಕ್ಷಕರಿಗೆ 15 ದಿನಗಳ ತರಬೇತಿ ಸಾಕು! ಈ ಉತ್ತರವೇ ಈ ನಿರ್ಣಯದ ಅಪ್ರಾಮಾಣಿಕತೆಯನ್ನು ಹೇಳುತ್ತದೆ. ಈ ಅವೈಜ್ಞಾನಿಕ ಜನ–ವಿರೋಧಿ ನೀತಿಯನ್ನು ಸಾಮಾಜಿಕ ನ್ಯಾಯದ ಪ್ರಶ್ನೆಯಾಗಿ ಮಾಡಲಾಗುತ್ತಿದೆ. ಇದು ನಿಜವಾಗಿಯೂ ಶಿಕ್ಷಣದಲ್ಲಿ ಈಗಾಗಲೇ ಇರುವ ಅಸಮಾನತೆಯನ್ನು ಹೆಚ್ಚಿಸುವ, ಬಡಮಕ್ಕಳ ಕಲಿಕೆಯ ಮಟ್ಟವನ್ನು ಇನ್ನಷ್ಟು ಹದಗೆಡಿಸುವ ಕ್ರಮವಾಗಲಿದೆ.

ಇದಕ್ಕೆ ನಿಜವಾದ ಪರಿಹಾರ ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಕರಣ. ಅಂದರೆ ಉತ್ತಮ ಗುಣಮಟ್ಟದ ಸಾರ್ವತ್ರಿಕ ಸಮಾನ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷಾ ಮಾಧ್ಯಮದಲ್ಲಿ ನೆರೆಹೊರೆಯ ಶಾಲೆಗಳ ಮೂಲಕ ಕೊಡುವ ನೀತಿ. ಇದು 1950ರ ದಶಕದಲ್ಲೇ ಅಂಗೀಕರಿಸಿದ್ದ ನೀತಿ. ಇದಕ್ಕೆ ಶಿಕ್ಷಣಕ್ಕೆ ಸಾಕಷ್ಟು ಸಂಪನ್ಮೂಲಗಳನ್ನು ಹೂಡಿಕೆ ಮಾಡಬೇಕಾಗುತ್ತದೆ. ಅದನ್ನು ಒಂದು ಹಕ್ಕಾಗಿ ಜಾರಿ ಮಾಡಬೇಕಾಗುತ್ತದೆ. ಆದರೆ ಇದಕ್ಕೆ ಇಂದಿನ ಆಳುವ ವರ್ಗಗಳು, ಆ ವರ್ಗಗಳ ಪಕ್ಷಗಳಲ್ಲಿರುವ ಖಾಸಗಿ ಶಿಕ್ಷಣ ಲಾಬಿ ತಯಾರಾಗುತ್ತದೆಯೇ? ಖಂಡಿತ ಇಲ್ಲ. ನ್ಯಾಯಾಂಗ ಸಹ ಮಾಧ್ಯಮವನ್ನು ಪಾಲಕರ ಮೂಲಭೂತ ಹಕ್ಕು ಎಂದು ತೀರ್ಪು ಕೊಟ್ಟಿದ್ದು ಅಡ್ಡಗೋಡೆಯಾಗುತ್ತದೆ. ಇದು ನವ–ಉದಾರವಾದಿ ನೀತಿಗಳ ಚೌಕಟ್ಟನ್ನು ಮುರಿಯುವಂತಹ ನೀತಿ. ಒಟ್ಟಾರೆಯಾಗಿ ಆಳುವ ವರ್ಗಗಳು ಸಮಾನ ಸಾರ್ವತ್ರಿಕ ಶಿಕ್ಷಣಕ್ಕೆ ಸಿದ್ಧರಿಲ್ಲ. ಆದ್ದರಿಂದ ಸೀಮಿತ ಇಂಗ್ಲಿಷ್ ಮಾಧ್ಯಮ ಶಾಲೆಗಳ ತುಪ್ಪವನ್ನು ಬಡಜನರ ಮೂಗಿಗೆ ಹಚ್ಚಿ, ಅದಕ್ಕೆ ಸಾಮಾಜಿಕ ನ್ಯಾಯದ ಲೇಪ ಕೊಡುವುದು ಆಳುವ ವರ್ಗಗಳಿಗೆ ಹೆಚ್ಚು ಅನುಕೂಲಕರ ನೀತಿಯಾಗುತ್ತದೆ. ಇದರ ಬಗ್ಗೆ ಜನತೆಯಲ್ಲಿ ಅರಿವು ಮೂಡಿಸಿ, ಸಾರ್ವತ್ರಿಕ ಸಮಾನ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷಾ ಮಾಧ್ಯಮದಲ್ಲಿ ನೆರೆಹೊರೆಯ ಶಾಲೆಗಳ ಮೂಲಕ ಕೊಡುವ ನೀತಿಗಾಗಿ ಹೋರಾಟಕ್ಕೆ ಸಜ್ಜುಗೊಳಿಸಬೇಕಾಗಿದೆ.

'ನನ್ನ ಮೊದಲ ಮತ ಉದ್ಯೋಗಕ್ಕೆ, ರಾಷ್ಟೀಯ ಸಮಗ್ರತೆಗೆ'

ಬಿಜೆಪಿ 2014ರ ಚುನಾವಣೆಗಳಲ್ಲಿ ಯುಪಿಎ ಸರಕಾರದ ವೈಫಲ್ಯಗಳನ್ನು ಬಳಸಿ ಮತ್ತು ಆಕರ್ಷಕ ಆದರೆ ಬೊಗಳೆ ಭರವಸೆಗಳನ್ನು ಮುಂದಿಟ್ಟು ಯುಪಿಎ ಮತದಾರರ ಒಂದು ವಿಭಾಗವನ್ನು ಆಕರ್ಷಿಸಿತ್ತು. ಆದರೆ ಅದಕ್ಕೆ ಬಹುಮತ ತಂದು ಕೊಟ್ಟದ್ದು 'ಮೊದಲ ಮತದಾರ'ನನ್ನು ಅದಕ್ಕೆ ದೊಡ್ಡ ಪ್ರಮಾಣದಲ್ಲಿ ಆಕರ್ಷಿಸಲು ಸಾಧ್ಯವಾದದ್ದು. ಇಲ್ಲಿ 'ಮೊದಲ ಮತದಾರ' ಅಂದರೆ 18 ವರ್ಷ ದಾಟಿ ಮೊದಲ ಬಾರಿಗೆ ಮತದಾನದ ಹಕ್ಕು ಪಡೆದ ಯುವಜನರು. ಅದಕ್ಕಾಗಿ ಒಂದು ವರ್ಷ ಮೊದಲೇ ಅದು ಪ್ರಚಾರ ತಂತ್ರಗಳನ್ನು ಆಯೋಜಿಸಿತ್ತು. ಪ್ರತಿ ವರ್ಷ ಎರಡು ಕೋಟಿ ಉದ್ಯೋಗ, ಸಮೃದ್ಧ ಬಲಶಾಲಿ ದೇಶದ ಬಗೆಗಿನ 'ವಿಕಾಸ ಪುರುಷ'ನ ಮೋದಿ ವೇಷ ಯುವಜನರನ್ನು ದೊಡ್ಡ ಪ್ರಮಾಣದಲ್ಲಿ ಆಕರ್ಷಿಸಿತ್ತು ಎನ್ನುವುದು ಹಲವು ಸಮೀಕ್ಷೆಗಳಿಂದ ವ್ಯಕ್ತವಾಗಿತ್ತು. ಆದರೆ 2014ರ 'ಮೊದಲ ಮತದಾರ'ರ ಭ್ರಮೆಯ ಗುಳ್ಳೆ ಒಡೆದಿದೆ. ಎರಡು ಕೋಟಿ ಉದ್ಯೋಗ ಸೃಷ್ಟಿಯ ಬದಲು ಒಂದು ಕೋಟಿ ಉದ್ಯೋಗ ನಷ್ಟವಾಗಿರುವುದರಿಂದ ಮತ್ತು ಇತರ ಎಲ್ಲಾ ಭರವಸೆಗಳನ್ನು ಹೊತ್ತ 'ಅಚ್ಛೆ ದಿನ್' ಹುಸಿಯಾಗಿರುವುದರಿಂದ, ಈ 'ಎರಡನೇ ಬಾರಿ'ಯ ಮತದಾರರು ಮೋದಿ–ಬಿಜೆಪಿ ಪ್ರಚಾರವನ್ನು ನಂಬುವ ಸಾಧ್ಯತೆ ಬಹಳ ಕಡಿಮೆ. ಹಲವು ಚುನಾವಣೆಗಳನ್ನು ಕಂಡಿರುವ ಮತದಾರರಂತೂ ಬಿಜೆಪಿ ಸರಕಾರದ ವಿರುದ್ಧ ಕುದಿಯುತ್ತಿದ್ದಾರೆ ಎಂಬುದು ಇತ್ತೀಚಿನ ಪಂಚರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳು ತೋರಿಸಿವೆ.

ಆದರೆ ಈ ಬಾರಿಯೂ 'ಮೊದಲ ಮತದಾರ'ರ ಮೇಲೆ ಒತ್ತು ಕೊಟ್ಟು ಅವರನ್ನು ಆಕರ್ಷಿಸುವ ಅದೇ ತಂತ್ರಗಳನ್ನು ಅನುಸರಿಸಲಿದೆ. ಇದಕ್ಕಾಗಿ ಎಲ್ಲಾ ಯುವಜನರ ಸಂಪರ್ಕ (ಮೊಬೈಲ್ ನಂಬರು,

ಪುಟ 11 ಕ್ಕೆ






ಚಿಕ್ಕಬಳ್ಳಾಪುರ


ಮಾರುತಿ ಮಾನ್ಪಡೆ ಬಂಧನ

ಕರ್ನಾಟಕದಲ್ಲಿ 50 ಲಕ್ಷ ಕಾರ್ಮಿಕರ ಚಾರಿತ್ರಿಕ 2-ದಿನಗಳ ಮುಷ್ಕರ

ಕರ್ನಾಟಕದ ಕಾರ್ಮಿಕರು ಇನ್ನೊಮ್ಮೆ ಚರಿತ್ರೆ ಬರೆದಿದ್ದಾರೆ. ಹಿಂದೆಂದೂ ರಾಜ್ಯದಲ್ಲಿ 50 ಲಕ್ಷ ಕಾರ್ಮಿಕರು 2 ದಿನಗಳ ಸಾರ್ವತ್ರಿಕ ಮುಷ್ಕರ ಹೂಡಿದ್ದಿಲ್ಲ. ಜೆಸಿಟಿಯು ನ ಕರೆಗೆ ಓಗೊಟ್ಟು ತಮ್ಮ 12 ಅಂಶಗಳ ಹಕ್ಕೊತ್ತಾಯಗಳನ್ನು ಈಡೇರಿಸಲು ಮೋದಿ ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಈ ಚಾರಿತ್ರಿಕ ಮುಷ್ಕರದ ಬಗ್ಗೆ ವಿವಿಧ ಮೂಲಗಳಿಂದ ಸಂಗ್ರಹಿಸಿದ ಒಂದು ವರದಿ.

ಈ ಚಾರಿತ್ರಿಕ ಮುಷ್ಕರದ ಝಲಕ್ ಕೊಡುವ ಚಿತ್ರಗಳು 4, 5 ಮತ್ತು 16 ನೇ ಪುಟಗಳಲ್ಲಿವೆ.

ಅಂಗನವಾಡಿ, ಬಿಸಿಯೂಟ ಮುಂತಾದ ಸ್ಕಿಂ, ಪಂಚಾಯತ್ ಮತ್ತು ವಿಮಾ ರಂಗದ ಕಾರ್ಮಿಕರು ಹೆಚ್ಚು ಕಡಿಮೆ ಪೂರ್ಣವಾಗಿ ಎರಡು ದಿನವೂ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಬ್ಯಾಂಕ್, ಬಿಎಸ್.ಎನ್.ಎಲ್, ಕೇಂದ್ರ ಸರ್ಕಾರಿ ನೌಕರರಾದ ಪೋಸ್ಟಲ್, ಆದಾಯ ತೆರಿಗೆ, ಸರ್ವೇ ಆಫ್ ಇಂಡಿಯಾ ಮುಂತಾದ ಕಾರ್ಮಿಕರು, ಸಾರ್ವಜನಿಕ ಉದ್ಯಮಗಳ ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರಿನಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಹೆಚ್ಚಿನ ಕೈಗಾರಿಕಾ ಎಸ್ಟೇಟುಗಳಲ್ಲಿ ವ್ಯಾಪಕವಾಗಿ ಮುಷ್ಕರ ನಡೆದಿದೆ. ಕೆಲವು ತಾಲೂಕಿನ ಪ್ರದೇಶಗಳಲ್ಲಿ ರೈತ ಸಂಘಗಳ ಮುತುವರ್ಜಿಯಿಂದ 'ಗ್ರಾಮೀಣ ಬಂದ್' ಮಾಡಲಾಗಿದೆ. ಕೆಲವು ಪ್ರದೇಶಗಳಲ್ಲಿ ಮುಷ್ಕರದ ತಯಾರಿಗೆ ಜಂಟಿ ರೈತ-ಕಾರ್ಮಿಕ ಸಮಿತಿಗಳು ರಚನೆಯಾಗಿರುವುದು ಹೊಸ ಬೆಳವಣಿಗೆಯಾಗಿದೆ.

ಕೆ.ಎಸ್.ಆರ್.ಟಿ.ಸಿ. ಹೆಚ್ಚಿನ ಜಿಲ್ಲೆಗಳಲ್ಲಿ ಪೂರ್ಣವಾಗಿ ಅಥವಾ ಭಾಗಶಃ ಬಸ್ಸು ನಡೆಸಲು ಸಾಧ್ಯವಾಗದೆ, ಹೆಚ್ಚಿನ ಅಂಗಡಿ ಮುಂಗಟ್ಟುಗಳು ತೆರೆಯದೆ, ತೆರೆದಿದ್ದರೂ ಗ್ರಾಹಕರು ಬರದೆ, ಹೆಚ್ಚು ಕಡಿಮೆ ಬಂದ್ ರೀತಿಯ ಪರಿಸ್ಥಿತಿ ರಾಜ್ಯದಲ್ಲಿ ಇತ್ತು. ಪ್ರಮುಖವಾಗಿ ದ.ಕ., ಬೆಂಗಳೂರು ಮತ್ತಿತರ ಕೆಲವು ಜಿಲ್ಲೆಗಳಲ್ಲಿ ಸಂಘ ಪರಿವಾರದ ಸಂಘಟನೆಗಳು ಮುಷ್ಕರದ ಪೂರ್ವಭಾವಿ ಪ್ರಚಾರ, ಮುಷ್ಕರ, ಪ್ರತಿಭಟನಾ ಸಭೆ-ಮೆರವಣಿಗೆಗಳಿಗೆ ತಡೆ ಒಡ್ಡುವ, ಅಡ್ಡಿ ಪಡಿಸುವ, ದಾಳಿ ನಡೆಸುವ ಪ್ರಯತ್ನ ನಡೆಸಿದ್ದೂ ಹೊಸ ಬೆಳವಣಿಗೆಯಾಗಿದೆ.

ಕಾರ್ಮಿಕ ಸಂಘಗಳು ಕರೆ ಕೊಟ್ಟಿರುವುದು ಬಂದ್ ಗೆ ಎಂದು ಪ್ರಚಾರ ಮಾಡಿ, 'ಬಂದ್ ವಿಫಲ', 'ನೀರಸ', 'ಭಾಗಶಃ' ಎಂದೆಲ್ಲಾ ಮಾಧ್ಯಮಗಳು ಸಾರ್ವಜನಿಕರಲ್ಲಿ ಗೊಂದಲ ಹುಟ್ಟಿಸಲು, ದಾರಿ ತಪ್ಪಿಸಲು ಪ್ರಯತ್ನಿಸಿದವು. ಆದರೆ ಮುಷ್ಕರದ ವ್ಯಾಪಕತೆ, ಭಾರೀ ಮೆರವಣಿಗೆಗಳನ್ನು ಪೂರ್ಣವಾಗಿ ನಿರ್ಲಕ್ಷಿಸಲೂ ಮಾಧ್ಯಮಗಳಿಗೆ ಸಾಧ್ಯವಾಗಲಿಲ್ಲ ಎಂಬುದು ವಿಶೇಷ. ಮುಷ್ಕರ ಮತ್ತು ಪ್ರತಿಭಟನಾ ಮೆರವಣಿಗೆಗಳಲ್ಲಿ ವಿವಿಧ ವಿಭಾಗಗಳ ಕಾರ್ಮಿಕರ ಪಾಲುಗೊಳ್ಳುವಿಕೆ, ಹರತಾಳಗಳ ಬಗ್ಗೆ ಜಿಲ್ಲಾವಾರು ವಿವರಗಳು ಹೀಗಿವೆ:

ಬೆಂಗಳೂರು

ಬೆಂಗಳೂರಿನಲ್ಲಿ ಎರಡೂ ದಿನದಂದು ಟೌನ್ ಹಾಲಿನಿಂದ ಸಾವಿರಾರು ಕಾರ್ಮಿಕರು ಮೆರವಣಿಗೆ ನಡೆಸಿ ಶೇಷಾದ್ರಿ ರಸ್ತೆಯ ಫ್ರೀಡಂಪಾರ್ಕಿನಲ್ಲಿ ಬೃಹತ್ ಸಭೆಯನ್ನು ನಡೆಸಿದರು ಸಭೆಯಲ್ಲಿ ಸಿಐಟಿಯು ಅಧ್ಯಕ್ಷರಾದ ಎಸ್.ವರಲಕ್ಷ್ಮಿ, ಕಾರ್ಯದರ್ಶಿ ಕೆ.ಎನ್ ಉಮೇಶ್, ಐಎನ್.ಟಿ.ಯು.ಸಿ ಮುಖಂಡರಾದ ಶ್ಯಾಮಣ್ಣ ರೆಡ್ಡಿ, ಪುಟ್ಟಸ್ವಾಮಿಗೌಡ, ಟಿಯುಸಿಸಿ ಶಿವಶಂಕರ್, ಎಐಸಿಸಿಟಿಯು ಕೆ.ವಿ.ಭಟ್, ಬ್ಯಾಂಕ್, ಇನ್ಸೂರೆನ್ಸ್ ಸಾರ್ವಜನಿಕ ವಲಯದ ಕೈಗಾರಿಕೆಗಳ ಮುಖಂಡರು ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದಾರೆ.


ಹಾನಗಲ್

ಬಿಡದಿಯಲ್ಲಿ ಕೈಗಾರಿಕಾ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಅತ್ತಿಬೆಲೆ ಕೈಗಾರಿಕೆ ಪ್ರದೇಶದಲ್ಲಿ ಸಾವಿರಾರು ಕಾರ್ಮಿಕರು ಪ್ರತಿಭಟನೆ ನಡೆಸಿದ್ದಾರೆ. ಜನವರಿ 7ರಂದು ಪಂಜಿನ ಮೆರವಣಿಗೆಯನ್ನು ನಡೆಸಿದ್ದಾರೆ. ಆನೇಕಲ್ ಪ್ರದೇಶದಲ್ಲಿಯು ಸಾವಿರಾರು ಕಾರ್ಮಿಕರು ಪ್ರತಿಭಟನೆ ನಡೆಸಿದ್ದಾರೆ. ಕೆ.ಆರ್.ಪುರ, ಹೊಸೂರು ರಸ್ತೆ, ಬೊಮ್ಮಸಂದ್ರ, ಪೀಣ್ಯ ಕೈಗಾರಿಕಾ ಪ್ರದೇಶ, ಯಲಹಂಕ, ನೆಲಮಂಗಲ ಕೈಗಾರಿಕಾ ಪ್ರದೇಶ, ಜಿಗಣಿ ಕೈಗಾರಿಕಾ ಪ್ರದೇಶ, ದಾಬಸ್ ಪೇಟೆ ಕೈಗಾರಿಕಾ ಪ್ರದೇಶಗಳಲ್ಲಿ ಸಾವಿರಾರು ಕಾರ್ಮಿಕರು ಪ್ರತಿಭಟನೆ ನಡೆಸಿದ್ದಾರೆ. ಬಿ.ಇ.ಎಂ.ಎಲ್. ನಲ್ಲಿ ಪೂರ್ಣ ಮುಷ್ಕರ ನಡೆಸಲಾಗಿದ್ದು, ಬಿ.ಇ.ಎಲ್.ನಲ್ಲಿ ಸಿಐಟಿಯು ಬೆಂಬಲಿಸುವ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದಾರೆ.

ಭಾಗಶಃ ಬಿ.ಎಂ.ಟಿ.ಸಿ. ಬಸ್ಸು ಓಡಿಸಿದರೂ ಪ್ರಯಾಣಿಕರು ತೀರಾ ಕಡಿಮೆ ಇದ್ದಿದ್ದು ಕಂಡು ಬಂದಿದೆ. ಅದೇ ರೀತಿ ದೊಡ್ಡ ಮಾಲುಗಳು, ಮಳಿಗೆಗಳು ತೆರೆದಿದ್ದರೂ ಗ್ರಾಹಕರಿಲ್ಲದೆ ಖಾಲಿ ಹೊಡೆದಿದ್ದು ವಿಶೇಷವಾಗಿತ್ತು ಇದು ಕಾರ್ಮಿಕರ ಮುಷ್ಕರಕ್ಕೆ ಸಾರ್ವಜನಿಕ ಬೆಂಬಲ ಇತ್ತು ಎಂಬುದನ್ನು ತೋರಿಸುತ್ತದೆ.

ದಕ್ಷಿಣ ಕನ್ನಡ ಮತ್ತು ಉಡುಪಿ

ಕರಾವಳಿ ಪ್ರದೇಶದಲ್ಲಿ ಜನರ ಮಧ್ಯೆ ಕೋಮುವಾದ ಹಾಗೂ ನರೇಂದ್ರ ಮೋದಿ ಪರವಾದ ಒಲವು ಇದ್ದರೂ ಅವರುಗಳ ಕಾರ್ಮಿಕ ವಿರೋಧಿ, ರೈತ ವಿರೋಧಿ ಹಾಗೂ ಜನವಿರೋಧಿ ನೀತಿಗಳನ್ನು ಜಿಲ್ಲೆಯ ಜನಗಳ ಮಧ್ಯೆ ಪ್ರಚಾರ ಮಾಡಲು ಸಾಧ್ಯವಾಯಿತು. ಮುಷ್ಕರಕ್ಕೆ ಕರಾವಳಿ ಜಿಲ್ಲೆಯಲ್ಲಿ ಉತ್ತಮ ಪ್ರತಿಕ್ರಿಯೆ ದೊರೆತಿದೆ.

ಮಂಗಳೂರು:

ಜ.8 ರಂದು ಸರಕಾರಿ ಹಾಗೂ ಖಾಸಗಿ ಬಸ್ಸುಗಳು ಬೆರಳೆಣಿಕೆಯಲ್ಲಿ ಮಾತ್ರ ಸಂಚರಿಸಿದವು. ಅಂಗಡಿ ಮುಂಗಟ್ಟುಗಳು ಭಾಗಶ: ತೆರೆದಿದ್ದರೂ, ನಗರದಲ್ಲಿ ಜನಸಂಚಾರ ಇರಲಿಲ್ಲ. ಶಾಲೆ ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಒಟ್ಟಿನಲ್ಲಿ ಮುಷ್ಕರ ಬಂದ್ ರೀತಿ ಗೋಚರಿಸಿತು. ಬ್ಯಾಂಕ್, ಎಲ್ಲೈಸಿಗಳಲ್ಲಿ ಮುಷ್ಕರ ಬಹುಪಾಲು ಯಶಸ್ವಿಯಾಗಿತ್ತು.

ಆದರೆ ಜ. 9 ರಂದು ಬೆಳಿಗ್ಗೆ ಸಿಐಟಿಯು, ಎಐಟಿಯುಸಿ, ಇಂಟಕ್, ಬ್ಯಾಂಕ್, ವಿಮಾ ನೌಕರರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದರು. ಪ್ರತಿಭಟನೆಯಲ್ಲಿ ಬ್ಯಾಂಕ್, ವಿಮೆ, ಆರ್.ಎಮ್.ಎಸ್, ಬಿಎಸ್.ಎನ್.ಎಲ್. ಕಾರ್ಮಿಕರು ಭಾಗವಹಿಸಿದ್ದಾರೆ. ಅಂಗನವಾಡಿ, ಬೀಡಿ, ಹಂಚು, ಕಟ್ಟಡ ಕಾರ್ಮಿಕರು, ಅಕ್ಷರ ದಾಸೋಹ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಬಸ್ ಸಂಚಾರ ಶಾಲಾ ಕಾಲೇಜುಗಳು ಕಾರ್ಯ ನಿರ್ವಹಿಸಿದ್ದರೂ ಬ್ಯಾಂಕ್, ವಿಮಾ ಕಚೇರಿಗಳಲ್ಲಿ ನೌಕರರು ಮುಷ್ಕರ ನಿರತರಾಗಿ ಗೈರು ಹಾಜರಾಗಿದ್ದರು. ಸಿಐಟಿಯು ಸಂಘಟನೆಗೆ ಸೇರಿದ ನೌಕರರು ಕೆಲಸಕ್ಕೆ ಹಾಜರಾಗದೆ ಮುಷ್ಕರ ಹೂಡಿದ್ದರು. ಆದರೆ ಎರಡನೇ ದಿನದ ಮುಷ್ಕರ ಬಹಿರಂಗವಾಗಿ ಪ್ರಕಟವಾಗಿಲ್ಲ.

ಉಡುಪಿ:

ಉಡುಪಿ ಜಿಲ್ಲಾ ಕೇಂದ್ರದಲ್ಲಿ ಮೊದಲ ದಿನ ಸರಕಾರಿ, ಖಾಸಗಿ ಬಸ್ಸುಗಳು ರಸ್ತೆಗೆ ಇಳಿಯಲಿಲ್ಲ. ಶಾಲಾ ಕಾಲೇಜುಗಳಿಗೆ ರಜೆ ಸಾರಲಾಗಿತ್ತು. ಬ್ಯಾಂಕ್, ವಿಮಾ ಕಚೇರಿಗಳಲ್ಲಿ ನೌಕರರು ಮುಷ್ಕರ ನಡೆಸಿ ಗೈರು ಹಾಜರಾಗಿದ್ದರು.

ಜೆಸಿಟಿಯು ನೇತೃತ್ವದಲ್ಲಿ ಸಿಐಟಿಯು, ಎಐಟಿಯುಸಿ, ಇಂಟಕ್‌ಗೆ ಸೇರಿದ ಕಾರ್ಮಿಕರು, ವಿಮಾ ಬ್ಯಾಂಕ್, ಬಿಎಸ್ಸೆನ್ನೆಲ್ ನೌಕರರು ಅಜ್ಜರಕಾಡು ಎಲ್ಲೈಸಿ ಕಚೇರಿಯಿಂದ ಮುಖ್ಯ ರಸ್ತೆಯಾಗಿ ಸಾಗಿ ಕಾರ್ಪೊರೇಶನ್ ಬ್ಯಾಂಕಿನ ಆವರಣದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಎರಡನೇ ದಿನದ ಮುಷ್ಕರದಲ್ಲಿ ವಿಮಾ ಹಾಗೂ ಬ್ಯಾಂಕ್ ನೌಕರರು, ಸಿಐಟಿಯು ಸಂಘಟನೆಯ ಕಾರ್ಮಿಕರು ಮಾತ್ರ ಭಾಗವಹಿಸಿದ್ದರು.

ಪಟ್ಟಣ ತಾಲೂಕು ಕೇಂದ್ರಗಳಲ್ಲಿ ಮುಷ್ಕರ:

ಮೊದಲ ದಿನ ಮಾತ್ರ ಎರಡೂ ಜಿಲ್ಲೆಗಳ ಪೇಟೆ, ಪಟ್ಟಣಗಳಲ್ಲಿ ಯಶಸ್ವಿ ಮುಷ್ಕರ ನಡೆಯಿತು. ಪ್ರತಿಭಟನಾ ಪ್ರದರ್ಶನಗಳೂ ನಡೆದವು.

ಉಳ್ಳಾಲ ಸಿಐಟಿಯು ವಲಯ ಸಮಿತಿಯ ವತಿಯಿಂದ ತೊಕ್ಕೊಟು ಪೇಟೆಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ತೊಕ್ಕೊಟು ಜಂಕ್ಷನ್‌ನಲ್ಲಿ ಪ್ರದರ್ಶನ ನಡೆಸಲಾಯಿತು.

ಮೂಡಬಿದರೆಯಲ್ಲಿ ಸಿಐಟಿಯು ಕಚೇರಿಯಿಂದ ಮೆರವಣಿಗೆ ಹೊರಟು ಬಸ್ ನಿಲ್ದಾಣದಲ್ಲಿ ಧರಣಿ ನಡೆಸಲಾಯಿತು. ಸುಳ್ಯ ಪೇಟೆಯಲ್ಲಿ ಕೆಲವೇ ಬಸ್‌ಗಳ ಸಂಚಾರ ಇದ್ದಿತು. ಸಿಐಟಿಯು ಕಾರ್ಮಿಕ ಸಂಘಟನೆಯ ಕಾರ್ಮಿಕರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮುಖ್ಯ ರಸ್ತೆಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಬಸ್ ನಿಲ್ದಾಣದಲ್ಲಿ ಸಭೆ ನಡೆಸಿದರು ಬೆಳ್ತಂಗಡಿಯಲ್ಲಿ ಸಿಐಟಿಯು ಸಂಘಟನೆಯ ಕಾರ್ಯಕರ್ತರು ಬಸ್ ನಿಲ್ದಾಣದಲ್ಲಿ ಪ್ರತಭಟನಾ ಪ್ರದರ್ಶನ ನಡೆಸಿದರು.

ಕುಂದಾಪುರ ತಾಲೂಕಿನಲ್ಲಿ ಮುಷ್ಕರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸುಮಾರು 8 ಸಾವಿರ ಜನ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಕುಂದಾಪುರ ನಗರ ಸಹ ಸಂಪೂರ್ಣ ಬಂದ್ ಆಗಿತ್ತು. ಖಾಸಗಿ ಮತ್ತು ➔


ದಾವಣಗೆರೆ


ಯಮುನಾ ಬಂಧನ

ಸರಕಾರಿ ಬಸ್ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು. ತಾಲೂಕಿನ ಸಣ್ಣ ಪೇಟೆಗಳಲ್ಲಿಯೂ ಬಂದ್ ರೀತಿಯ ವಾತಾವರಣ ಇದ್ದಿತ್ತು. ಜ.08 ರಂದು ಕುಂದಾಪುರ ತಾಲೂಕಿನ ಗ್ರಾಮೀಣದ 50 ಪ್ರದೇಶಗಳಲ್ಲಿಯೂ ಅಂಗಡಿ ಮುಗ್ಗಟ್ಟುಗಳು ಮುಚ್ಚಿದ್ದವು. ಗ್ರಾಮೀಣ ಪ್ರದೇಶದ ಕಟ್ಟಡ ಹಂಚು ಆಟೋರಿಕ್ಷಾ ಕಾರ್ಮಿಕರು ತಮ್ಮ ಊರುಗಳಲ್ಲೆ ಮೆರವಣಿಗೆ ನಡೆಸಿದರು. ಕುಂದಾಪುರದಲ್ಲಿ ಜ.09ರಂದು ಕುಂದಾಪುರ ಪೇಟೆಯಲ್ಲಿ ಬ್ರಹತ್ ಮೆರವಣಿಗೆ ನಡೆಸಿ ಶಾಸ್ತ್ರಿವೃತ್ತದಲ್ಲಿ ಸಭೆ ನಡೆಯಿತು.

ಬ್ರಹ್ಮಾವರದಲ್ಲಿ ಬಸ್ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದರಿಂದ ವ್ಯಾಪಾರ ವಹಿವಾಟು ನಡೆಯಲಿಲ್ಲ. ಸಿಐಟಿಯು ಸಂಘಟನೆಯ ವತಿಯಿಂದ ಬ್ರಹ್ಮಾವರ ಪೇಟೆಯಲ್ಲಿ ಪ್ರತಿಭಟನಾ ಜಾಥಾ ನಡೆಯಿತು.

ಉತ್ತರ ಕನ್ನಡ

ಜ.8 ರಂದು ಉತ್ತರ ಕನ್ನಡ ಜಿಲ್ಲೆಯಲ್ಲಿ 11 ತಾಲೂಕುಗಳು ಭಾಗಶ: ಬಂದಾಗಿವೆ. ಬಸ್ಸುಗಳು ಬಂದಾಗಿವೆ. ಜ.8ರಂದು 6 ಸಾವಿರ ಮತ್ತು 9ರಂದು 4 ಸಾವಿರ ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಅಂಗನವಾಡಿ ಬಿಸಿಊಟ ಕೇಂದ್ರಗಳು ಬಂದಾಗಿವೆ. ಎರಡನೇ ದಿನ ಬಸ್ ನಡೆಸುವುದುನ್ನು ತಡೆಯಲು ಪ್ರಯತ್ನಿಸಿದ ಯಮುನಾ ಗಾಂವ್ಕರ್ ಮತ್ತು ಇತರ ಸಂಗಾತಿಗಳನ್ನು ಬಂಧಿಸಲಾಯಿತು. ಪರತೀಭಟನಾ ಮೆರವಣಿಗೆಯಲ್ಲಿ ಒಬ್ಬಾಕೆ ಅಂಗನವಾಡಿ ಕಾರ್ಯಕರ್ತೆಯ ಸಾವು ಸಂಭವಿಸಿದ ದಾರುಣ ಘಟನೆ ಸಹ ನಡೆಯಿತು.

ಗುಲ್ಬರ್ಗಾ

ಗುಲ್ಬರ್ಗ ದಲ್ಲಿ ಸಾವಿರಾರು ಕಾರ್ಮಿಕರು ಪ್ರತಿಭಟನೆ ನಡೆಸಿದ್ದಾರೆ. ಪ್ರತಿಬಟನೆಯಲ್ಲಿ ಅಂಗನವಾಡಿ, ಪಂಚಾಯತ್, ಕಟ್ಟಡ ಕಾರ್ಮಿಕರು, ಆಶಾ ಕಾರ್ಯಕರ್ತೆಯರು, ಹಮಾಲಿ ಕಾರ್ಮಿಕರು ಭಾಗವಹಿಸಿದ್ದಾರೆ. ಸೇಡಂನಲ್ಲಿ ರಾಜಶ್ರೀ ಕೈಗಾರಿಕೆಯ ಸುಮಾರು 2350 ಕಾರ್ಮಿಕರು ಕಾರ್ಖಾನೆ ಕೆಲಸಕ್ಕೆ ಹೋಗದೆ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ರಸ್ತೆ ಸಾರಿಗೆ ಬಸ್ಸುಗಳು ಸಂಪೂರ್ಣ ಬಂದಾಗಿವೆ. ರೈಲು ತಡೆ ಮಾಡಲು ಪ್ರಯತ್ನಿಸಿದಾಗ ಮಾರುತಿ ಮಾನ್ಪಡೆ ಮತ್ತು ಇತರ ಸಂಗಾತಿಗಳನ್ನು ಬಂಧಿಸಲಾಗಿದೆ.

ತುಮಕೂರು:

ತುಮಕೂರು ಜಿಲ್ಲೆಯ ಸಿರಾ, ತುಮಕೂರು, ಕೊರಟಗೆರೆ, ಪಾವಗಡ, ಕುಣಿಗಲ್, ಸಂಪೂರ್ಣ ಬಂದಾಗಿದೆ. ಮೊದಲನೆಯ ದಿನ ಎಲ್ಲಾ 10 ತಾಲೂಕುಗಳಲ್ಲೂ, ಎರಡನೇ ದಿನ 9 ತಾಲೂಕುಗಳಲ್ಲೂ ಬಂದ್ ಆಗಿದೆ. ಸಾವಿರಾರು ಜನ ಕಾರ್ಯಕರ್ತರು ಮೆರವಣಿಗೆ ನಡೆಸಿದ್ದಾರೆ. ಕೈಗಾರಿಕಾ ಪ್ರದೇಶಗಳು ಸಂಪೂರ್ಣ ಬಂದಾಗಿವೆ. ರಸ್ತೆ ಸಾರಿಗೆ ಬಸ್ಸುಗಳು ಮತ್ತು ಆಟೋಗಳು ಸಂಪೂರ್ಣ ಬಂದಾಗಿವೆ.

ಕೋಲಾರ

ಕೆ.ಜಿ.ಎಫ್. ಬಿಇಎಂಎಲ್ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಕೋಲಾರದ ಎಲ್ಲಾ 6 ತಾಲೂಕುಗಳು ಜ.8 ರಂದು ಬಂದಾಗಿವೆ. ಆಟೋಗಳು, ರಸ್ತೆ ಸಾರಿಗೆ ಬಸ್ಸುಗಳು ಹಾಗೂ ಶಾಲಾ ಕಾಲೇಜುಗಳು ಸಂಪೂರ್ಣ ಬಂದಾಗಿವೆ. ಜ..9 ರಂದು ತಾಲೂಕು ಮಟ್ಟದ ಪ್ರತಿಭಟನಾ ಸಭೆಗಳು ನಡೆದಿವೆ.

ಚಿಕ್ಕ ಬಳ್ಳಾಪುರ:

ಚಿಕ್ಕ ಬಳ್ಳಾಪುರದ ಎಲ್ಲಾ ತಾಲೂಕುಗಳಲ್ಲಿ ಜ.8ರಂದು ಬಂದ್ ಆಗಿದೆ. ಜ. 9 ರಂದು ಪ್ರತಿಭಟನಾ ಮೆರವಣಿಗೆಗಳು ನಡೆದಿವೆ.

ಚಿತ್ರದುರ್ಗ

ಚಿತ್ರದುರ್ಗ ಜಿಲ್ಲೆಯಲ್ಲಿ ರಸ್ತೆ ಸಾರಿಗೆ, ಬಸ್ಸುಗಳು ಸಂಪೂರ್ಣ ಬಂದಾಗಿದೆ. ಚಳ್ಳಕೆರೆ ತಾಲೂಕು ಹಿರಿಯೂರು ಸಂಪೂರ್ಣ ಬಂದಾಗಿದೆ. ಶಾಲಾ ಕಾಲೇಜುಗಳು ಸಂಪೂರ್ಣ ಬಂದಾಗಿದೆ.

ದಾವಣಗೆರೆ

ದಾವಣಗೆರೆ ಜಿಲ್ಲಾ ಕೇಂದ್ರದಲ್ಲಿ 800 ಜನರು ಮೆರವಣಿಗೆ ನಡೆಸಿದ್ದಾರೆ. ದಾವಣಗೆರೆ ಸಿಟಿ ಸಂಪೂರ್ಣ ಬಂದಾಗಿದೆ. ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಡಿಪೋದಿಂದ ಹೊರಗೆ ಬರಲಿಲ್ಲ. ಆಟೋಗಳು ಬಾಗಂಶ ಬಂದಾಗಿವೆ.

ರಾಯಚೂರು

ಅಂಗನವಾಡಿ, ಅಕ್ಷರ ದಾಸೋಹ ಕೇಂದ್ರಗಳು, ಗ್ರಾಮಪಂಚಾಯ್ತಿಗಳು ಸಂಪೂರ್ಣ ಮುಷ್ಕರದಲ್ಲಿ ಭಾಗವಹಿಸಿದ್ದವು. ರಾಯಚೂರು, ಸಿಂದನೂರು, ಮಾನ್ವಿ, ದೇವದುರ್ಗ ತಾಲೂಕುಗಳಲ್ಲಿ ಸಂಪೂರ್ಣ ಬಂದಾಗಿದೆ. ತುರ್ವಿಹಾಳ್, ಹಟ್ಟಿ ಮುದಗಲ್ ಗ್ರಾಮಗಳು ಸಂಪೂರ್ಣ ಬಂದಾಗಿದೆ. ಕೆ.ಎಸ್.ಆರ್.ಟಿ.ಸಿ ಬಸ್ ಗಳು ಸಂಪೂರ್ಣ ಬಂದಾಗಿವೆ. ಭಾಗಶಃ ಅಂಗಡಿ ಮುಗ್ಗಟ್ಟುಗಳು ಬಂದಾಗಿವೆ.

ಬಳ್ಳಾರಿ

ಬಳ್ಳಾರಿ, ಸಿರಗುಪ್ಪ, ಹೊಸಪೇಟೆ, ಕಂಪ್ಲಿ, ಕುರುಗೋಡು, ಕುಡಿತಿನಿ, ಹಡಗಲಿ ಸಂಪೂರ್ಣ ಬಂದಾಗಿವೆ. ಕೆಲವು ತಾಲೂಕುಗಳಲ್ಲಿ ಎರಡೂ ದಿನ ಮತ್ತು ಇತರ ತಾಲೂಕುಗಳಲ್ಲಿ ಒಂದು ದಿನ ಬಂದಾಗಿದೆ. ಶಾಲಾ ಕಾಲೇಜು, ಅಂಗನವಾಡಿ ಕೇಂದ್ರ , ಬಿಸಿಊಟ ಕೇಂದ್ರಗಳು, ರಸ್ತೆ ಸಾರಿಗೆ ಬಸ್ಸುಗಳು ಸಂಪೂರ್ಣ ಬಂದಾಗಿವೆ.

ಮೈಸೂರು :

ಮೈಸೂರು ಜಿಲ್ಲೆಯ ವಿಕ್ರಾಂತ್ ಟೈರ್ಸ್ ಕಾರ್ಖಾನೆ, ನಂಜನಗೂಡಿನ ಎಲ್ಲಾ ಕಾರ್ಖಾನೆಗಳು ಬಂದಾಗಿವೆ. ಹುಣಸೂರು, ನಂಜನಗೂಡು ಸಂಪೂರ್ಣ ಬಂದಾಗಿವೆ. ಸುಮಾರು 1500 ಕಾರ್ಮಿಕರು ಮೆರವಣಿಗೆ ನಡೆಸಿದ್ದಾರೆ. ಎಲ್ಲಾ ಅಂಗನವಾಡಿ ಕೇಂದ್ರ, ಬಿಸಿಊಟ, ಪಂಚಾಯತ್ ಕೇಂದ್ರಗಳು ಬಂದಾಗಿವೆ. ರಸ್ತೆ ಸಾರಿಗೆ ಬಸ್ಸುಗಳು ಬಂದಾಗಿವೆ.

ಹಾಸನ :

ಚನ್ನರಾಯಪಟ್ಟಣ, ಹಾಸನ, ಸಂಪೂರ್ಣ ಬಂದಾಗಿದೆ. ಎರಡೂ ದಿನ ಹಾಸನದಲ್ಲಿ ಆಕರ್ಷಕ ಮೆರವಣಿಗೆಯಲ್ಲಿ 2–3 ಸಾವಿರ ಜನರು ಭಾಗವಹಿಸಿದರು. ಜಿಲ್ಲಾಧಿಕಾರಿಗೆ ಮನವಿಯನ್ನು ನೀಡಲಾಯಿತು. ಹಾಸನದ 8 ತಾಲೂಕಿನಲ್ಲಿಯೂ ಶಾಲಾ ಕಾಲೇಜುಗಳು, ಅಂಗನವಾಡಿ ಕೇಂದ್ರಗಳು, ಅಕ್ಷರ ದಾಸೋಹ ಕೇಂದ್ರಗಳು ಬಂದಾಗಿವೆ.

ಹಾವೇರಿ :

ಹಾವೇರಿಯಲ್ಲಿ ರಸ್ತೆ ಸಾರಿಗೆ ಸಂಪೂರ್ಣ ಬಂದಾಗಿವೆ. ಅಂಗನವಾಡಿ ಬಿಸಿಊಟ ಕೇಂದ್ರಗಳು, ಶಾಲಾ ಕಾಲೇಜುಗಳು ಸಂಪೂರ್ಣ ಬಂದಾಗಿವೆ.

ಧಾರವಾಡ :

ಧಾರವಾಡದಲ್ಲಿ ರಸ್ತೆಸಾರಿಗೆ ಸಂಪೂರ್ಣ ಬಂದಾಗಿವೆ. ಅಂಗನವಾಡಿ ಕೇಂದ್ರಗಳು ಬಿಸಿಊಟ ಕೇಂದ್ರಗಳು ಬಂದಾಗಿವೆ.

ಗದಗ್

ಗದಗಿನಲ್ಲಿ ಅಂಗನವಾಡಿ ಬಿಸಿಊಟ ಕೇಂದ್ರಗಳಲ್ಲಿ ಕಾರ್ಮಿಕರು ಸಂಪೂರ್ಣ ಮುಷ್ಕರ ಮಾಡಿದ್ದಾರೆ.

ಸುಮಾರು 2000 ಜನರು ಮೆರವಣಿಗೆ ನಡೆಸಿ ಬಂದ್ ಆಚರಿಸಿದ್ದಾರೆ. ಕೆ.ಎಸ್.ಆರ.ಟಿ.ಸಿ. ಬಸ್ಸುಗಳು ಸಂಪೂರ್ಣ ಬಂದಾಗಿವೆ.

ಬಾಗಲಕೋಟೆ

ಬಾಗಲಕೋಟೆ ಜಿಲ್ಲೆಯಲ್ಲಿ ಅಂಗನವಾಡಿ, ಬಿಸಿಊಟ, ಆಶಾ ಕಾರ್ಯಕರ್ತರು ಸಂಪೂರ್ಣ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಆಟೋಗಳು, ರಸ್ತೆ ಸಾರಿಗೆ ಬಸ್ಸುಗಳು ಸಂಪೂರ್ಣ ಬಂದಾಗಿವೆ.

ಬಿಜಾಪುರ

ಬಿಜಾಪುರದಲ್ಲಿ ಅಂಗನವಾಡಿ ಬಿಸಿಊಟ, ಮತ್ತು ಆಶಾ ಕಾರ್ಯಕರ್ತರು, ಪಂಚಾಯತ್


ಕೋಲಾರ ಗ್ರಾಮೀಣ

ಕಾರ್ಮಿಕರು ಸಂಪೂರ್ಣ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಕೆ.ಎಸ್. ಆರ್ ಟಿ ಸಿ ಬಸ್ಸುಗಳು ಸಂಪೂರ್ಣ ಬಂದಾಗಿವೆ.

ಬೀದರ್

ಬೀದರಿನಲ್ಲಿ ಅಂಗನವಾಡಿ, ಬಿಸಿಊಟ , ಪಂಚಾಯತ್, ಆಶಾ, ಕಟ್ಟಡ, ಹಮಾಲಿ ಪಂಚಾಯತ್ ಕಾರ್ಮಿಕರು ಮೆರವಣಿಗೆ ನಡೆಸಿ ಬಂದನ್ನು ನಡೆಸಿದ್ದಾರೆ. ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಬಂದಾಗಿವೆ. ಹುಮ್ನಾಬಾದ್ ನಲ್ಲಿ ಪ್ರತಿಭಟನೆ ನಡೆಸಲಾಗಿವೆ.

ಯಾದಗಿರಿ

ಯಾದಗಿರಿಯಲ್ಲಿ ಸಾವಿರಾರು ಜನ ಅಂಗನವಾಡಿ, ಪಂಚಾಯತ್ ಬಿಸಿಊಟ ಕಾರ್ಮಿಕರು ಪ್ರತಿಭಟನೆ ನಡೆಸಿದ್ದಾರೆ. ಸುರಪುರ, ಯಾದಗಿರಿ, ಸಂಪೂರ್ಣ ಬಂದಾಗಿದೆ. ರಸ್ತೆ, ಸಾರಿಗೆ ಬಸ್ಸುಗಳು ಸಂಪೂರ್ಣ ಬಂದಾಗಿವೆ. 2ನೇ ದಿನ ಕೆಂಬಾವಿಯಲ್ಲಿ ಪ್ರತಿಭಟನೆಯನ್ನು ನಡೆಸಲಾಗಿದೆ.

ಚಾಮರಾಜ ನಗರ:

ಚಾಮರಾಜನಗರದಲ್ಲಿ ಭಾಗಶಃ ಬಂದಾಗಿದೆ. ರಸ್ತೆ ಸಾರಿಗೆ ಬಸ್ಸುಗಳು ಸಂಪೂರ್ಣ ಬಂದಾಗಿವೆ.

ಕೊಡಗು:

ಕೊಡಗು ಜಿಲ್ಲೆಯ ಮಡಿಕೇರಿ, ಸೋಮವಾರ ಪೇಟೆ, ವಿರಾಜ್ ಪೇಟೆ, ಸಂಪೂರ್ಣ ಬಂದಾಗಿವೆ. ರಸ್ತೆ, ಸಾರಿಗೆ ಬಸ್ಸುಗಳು ಸಂಪೂರ್ಣ ಬಂದಾಗಿವೆ.

ಕೊಪ್ಪಳ

ಕೊಪ್ಪಳದಲ್ಲಿ ಬೆಳ್ಳಿಗ್ಗೆ 4 ಘಂಟೆಗಿ ಕೊಪ್ಪಳದ ಬಸ್ ಡಿಪೋ ಮುಂದೆ ಪ್ರತಿಭಟನೆ ನಡೆಸಲಾಗಿದೆ. ಎಲ್ಲಾ ರಸ್ತೆ ಸಾರಿಗೆ ಬಸ್ಸುಗಳು ಬಂದ್ ಆಗಿವೆ. ಅಕ್ಷರ ದಾಸೋಹ, ಅಂಗನವಾಡಿ ಕೇಂದ್ರಗಳು ಸಂಪೂರ್ಣ ಬಂದಾಗಿವೆ.

ಮಂಡ್ಯ

ಮಂಡ್ಯದಲ್ಲಿ ಸಂಪೂರ್ಣ ಬಂದಾಗಿವೆ. ಕಾರ್ಮಿಕರು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗೆ ಮನವಿಯನ್ನು ಅರ್ಪಿಸಿದ್ದಾರೆ. ಸರಕಾರಿ ಮತ್ತು ಖಾಸಗಿ ಬಸ್ಸುಗಳು ಸಂಪೂರ್ಣ ಬಂದಾಗಿವೆ. ಶಾಲಾ ಕಾಲೇಜುಗಳು ಅಂಗನವಾಡಿ ಕೇಂದ್ರಗಳು ಸಂಪೂರ್ಣ ಬಂದಾಗಿವೆ.

ಶಿವಮೊಗ್ಗ

ಭದ್ರಾವತಿ ಸಂಪೂರ್ಣ ಬಂದಾಗಿವೆ ರಸ್ತೆ ಸಾರಿಗೆ ಬಸ್ಸುಗಳು, ಆಟೋಗಳು ಭಾಗಂಶ ಬಂದಾಗಿವೆ. ●


ನಂಜನಗೂಡು


ಕೋಲಾರ


ಹಗರಿ ಬೊಮ್ಮನಹಳ್ಳಿ

ಅತಿಥಿ ಅಂಕಣ




ಡಾ. ವಿನಯಾ

ಮೂಲ ವೈದಿಕ ಪರಂಪರೆಯಲ್ಲಿ ಪಾವಿತ್ರ್ಯ ಮತ್ತು ಸಮೃದ್ಧಿಯ ಸಂಕೇತವಾದ ಕುಂಭ ಆಧುನಿಕ ಈ ಕಾಲದಲ್ಲಿ ಹೊರಗೆ ಅಲಂಕೃತವೂ ಒಳಗೆ ನೀರಿಲ್ಲದೆ ಖಾಲಿಯೂ ಆಗಿ, ಸದ್ಯದ ನಮ್ಮ ಬರಡುತನಕ್ಕೊಂದು ರೂಪಕವಾಗಿತ್ತು. ಕೀಟ್ಸ್ ಕವಿಯ 'Ode on a Grecian Urn' ಪ್ರಗಾಥವನ್ನು ನೆನಪಿಸುತ್ತ ಹೊರಗಣ ಶೃಂಗಾರ ಒಳಗಣ ರಣರಂಗಕ್ಕೊಂದು ಸಾಲುಬರಹವಾಯಿತು.

ಸಮ್ಮೇಳನಗಳಲ್ಲಿ ಅದೆಷ್ಟೇ ಜನದಟ್ಟಣೆಯಿದ್ದರೂ ಅತ್ಯುತ್ತಮವಾದ ಗೋಷ್ಠಿಗಳು, ಕೇಳುಗರ ಪ್ರಜ್ಞೆಯನ್ನು ವಿಸ್ತರಿಸುವಂತಿದ್ದರೆ; ಅಪರೂಪದ ಕ್ಲಾಸಿಕ್ ಎನ್ನಬಹುದಾದ ರಂಗಪ್ರಕಾರಗಳು ಸಂಯೋಜಿತಗೊಂಡರೆ; ಮನಸ್ಸಿನ ತ್ರಾಣವನ್ನು ಉದ್ದೀಪಿಸಬಲ್ಲ ಶ್ರುತಿ ಸಾಧ್ಯತೆಯು ಬಿತ್ತರಗೊಂಡರೆ; ಜನಪದ ಕಲಾ ಪ್ರಕಾರಗಳ ಅತ್ಯುನ್ನತ ವಿಕಾಸ ಪ್ರಭೆ ತೆರೆದರೆ; ಸಂಯೋಜಕರ, ರಾಜಕಾರಣಿಗಳ ಉರುವಣಿಗೆ ಕಮ್ಮಿಯಾದರೆ; ಸಮ್ಮೇಳನದ ಒಟ್ಟಾರೆ ಆಶಯ ಮನುಷ್ಯ ಘನತೆಯನ್ನು ಎತ್ತಿ ಹಿಡಿಯುವಂತಿದ್ದರೆ ಮಾತ್ರ ಅದು ಯಶಸ್ವಿ ಎಂದು ಪರಿಗಣಿತವಾಗುತ್ತದೆ.

ಸಾಹಿತ್ಯ ಸಮ್ಮೇಳನಗಳ ಸ್ವರೂಪ: ಮರುಚಿಂತನೆಯ ಅಗತ್ಯ



84ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಅತ್ಯಂತ ವಿಜೃಂಭಣೆಯಿಂದ ಮೂರು ದಿನಗಳ ಜಾತ್ರೆಯಾಗಿ ಮುಗಿಯಿತು. ನಾಡಿನ ಸಾಂಸ್ಕೃತಿಕ ನೆಲೆಗಳಲ್ಲಿ ಒಂದಾಗಿರುವ ಧಾರವಾಡ ಸಾಹಿತ್ಯದ ಹಿಗ್ಗಿಗೆ ಅರ್ಧಶತಮಾನಕ್ಕೂ ಹೆಚ್ಚು ಕಾಲ ಕಾದಿದ್ದರಿಂದಲೋ ಏನೋ ಸುತ್ತೆಂಟು ಊರು–ಕೇರಿಗಳಲ್ಲಿ ಒಂದು ಮುಗ್ಧ ಸಂತಸ ಹಾದಾಡುತ್ತಿದ್ದುದು ಸುಳ್ಳಲ್ಲ. ಜನ ತಳಕಿತ್ತು ದಂಡು ದಂಡಾಗಿ ಬಂದು, ನಿಂತು ನಲಿದು–ಹಿಗ್ಗಿ ಒಂದು ಚಾರಿತ್ರಿಕ ಸಂದರ್ಭದಲ್ಲಿ ಪಾಲುದಾರರಾಗುತ್ತಿದ್ದೇವೆ ಎಂಬ ಹುರುಪನ್ನು ವ್ಯಕ್ತಪಡಿಸಿದ್ದನ್ನು ನಿರ್ಲಕ್ಷಿಸುವುದು, ಅದೊಂದು ಯಕಃಶ್ಚಿತ್ ಎನ್ನುವಂತೆ ತಾತ್ಸಾರ ಮಾಡುವುದು ಸರಿಯಾದ ಕ್ರಮವಲ್ಲ. ಆದರೆ, ಈ ಸಮ್ಮೇಳನವನ್ನು, ಇದುವರೆಗಿನ ಸಮ್ಮೇಳನಗಳ ಪರಂಪರೆಯಲ್ಲಿಟ್ಟು; ಇನ್ನು ಮುಂದೆ ನಡೆಯಬೇಕಾದ ಸಾಹಿತ್ಯ ಸಮ್ಮೇಳನಗಳ ಸ್ವರೂಪದ ಕುರಿತು ಮರುಚಿಂತನೆಯನ್ನು ಏರ್ಪಡಿಸಿಕೊಳ್ಳುವ ಅಗತ್ಯವಿದೆ.

ಸಮ್ಮೇಳನಕ್ಕಿಂತ ಮೊದಲೇ ಚರ್ಚೆಗೆ ವಿಷಯವಾದದ್ದು ಪೂರ್ಣಕುಂಭ ಮೆರವಣಿಗೆ–ಸಾಹಿತ್ಯ ಪರಿಷತ್ತಿನ ಜವಾಬ್ದಾರಿಯುತ ಸ್ಥಾನದಲ್ಲಿರುವವರು, ಸಮ್ಮೇಳನದ ರೂಪು–ರೇಷೆಗಳ ಬಗ್ಗೆ ಹೇಳಲು ಕರೆದ ಪತ್ರಿಕಾ ಗೋಷ್ಠಿಯಲ್ಲಿ '1001 ಸುಮಂಗಲಿಯರಿಂದ ಪೂರ್ಣಕುಂಭ ಮೆರವಣಿಗೆ' ಎಂದು ಸಂಭ್ರಮದಿಂದ ಘೋಷಿಸಿದ್ದರು. ಹಾಗೆ ಪ್ರಕಟಿಸುವಾಗ ಸುಮಂಗಲಿಯರು ಎಂದರೆ ಮುತ್ತೈದೆಯರು ಎಂಬ ಖಚಿತ ಅಭಿಪ್ರಾಯವೂ ಹಾಗೆ ಹೆಂಗಸರನ್ನು ಶೋಭಾಯಮಾನವಾಗಿ ನಡೆಸುವುದು ಮೆರವಣಿಗೆಗೆ ಕಳೆಗಟ್ಟಿಸುತ್ತದೆ ಎಂಬ ಒಪ್ಪಿತವೂ ಇತ್ತು. ಆ ನಂತರ ತೃತೀಯಲಿಂಗಿಗಳು, ವಿಧವೆಯರನ್ನೂ ಒಳಗೊಳ್ಳಲಾಗುತ್ತದೆ ಎಂಬ ಸಮಜಾಯಿಷಿ ಬಂತು. ಎಂದಿನದೋ ರಾಜರ ಕಾಲದ, ಯಾಜಮಾನ್ಯದ ವಿಜೃಂಭಣೆಯ ಆಚರಣೆಯನ್ನು ಇಂದಿಗೂ ಮುಂದುವರಿಸಿಕೊಂಡು ಬರುವ ಅಗತ್ಯವಿದೆಯೇ? ಎಂಬ ತಾತ್ವಿಕತೆಗೆ ಮುಖಾಮುಖಿಯಾಗಲಿಲ್ಲ. ವಿರೋಧಿಸುವವರ ಪ್ರಶ್ನೆಯನ್ನು ಸಹನೆಯಿಂದ ಸ್ವೀಕರಿಸುವ ಉದಾರತೆ ಕಾಣಲಿಲ್ಲ. ಹೆಣ್ಣನ್ನು ಅಲಂಕಾರದ ವಸ್ತುವಾಗಿ ಪ್ರದರ್ಶಿಸುವುದು ಇನ್ನಾದರೂ ಸಾಕಲ್ಲವೇ? ಎಂಬ ಕಳಕಳಿ ಅರ್ಥವಾಗಲಿಲ್ಲ.

ಕುವೆಂಪು ಅವರು ಇದೇ ಧಾರವಾಡದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನದಲ್ಲಿ ಪೂರ್ಣಕುಂಭ ಮೆರವಣಿಗೆ ತಡೆದಿದ್ದರು. ಶಾಂತರಸರು ತಡೆದಿದ್ದರು–ಎಂಬ ಚಾರಿತ್ರಿಕ ಅಂಶವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ನಡೆಸೇ ತೀರುವ ಪಣ ತೊಟ್ಟರು. ನಡೆಸಿದರು. ಸೀರೆ, ಒಂದಿಷ್ಟು ದುಡ್ಡು–ಕಾಸು, ಭಾಗೀದಾರಿಕೆಯ ತೃಪ್ತಿ, ಮೇಲಾಧಿಕಾರಿಗಳ ಮಾತಿಗೆ ಇದಿರಾಡಲಾಗದ ಸ್ಥಿತಿಯಲ್ಲಿ ಸಾವಿರಾರು ಬಡ ವರ್ಗದ ಹೆಂಗಸರು ಇದನ್ನು ಯಶಸ್ವಿಗೊಳಿಸಿದರು. ಆದರೆ ಅವರ ಮೈಯನ್ನು ಸುತ್ತಿದ್ದು ಅತ್ಯಂತ ಕಡಿಮೆ ಬೆಲೆಯ ಸೀರೆಯಾಗಿತ್ತು. ಅದರ ಜಾಳು ಜಾಳುತನವೇ ಆ ಹೆಂಗಸರ ಮುಖದಲ್ಲೂ ಪ್ರತಿಫಲಿಸುತ್ತಿತ್ತು. ಮೂಲ ವೈದಿಕ ಪರಂಪರೆಯಲ್ಲಿ ಪಾವಿತ್ರ್ಯ ಮತ್ತು ಸಮೃದ್ಧಿಯ ಸಂಕೇತವಾದ ಕುಂಭ ಆಧುನಿಕ ಈ ಕಾಲದಲ್ಲಿ ಹೊರಗೆ ಅಲಂಕೃತವೂ ಒಳಗೆ ನೀರಿಲ್ಲದೆ ಖಾಲಿಯೂ ಆಗಿ, ಸದ್ಯದ ನಮ್ಮ ಬರಡುತನಕ್ಕೊಂದು ರೂಪಕವಾಗಿತ್ತು. ಕೀಟ್ಸ್ ಕವಿಯ 'Ode on a Grecian Urn' ಪ್ರಗಾಥವನ್ನು ನೆನಪಿಸುತ್ತ ಹೊರಗಣ ಶೃಂಗಾರ ಒಳಗಣ ರಣರಂಗಕ್ಕೊಂದು ಸಾಲುಬರಹವಾಯಿತು.

ಸಾಹಿತ್ಯದ ಸಮ್ಮೇಳನದಲ್ಲಿ ಒಂದು ಧರ್ಮದ ಆಚರಣೆಯನ್ನು ವಿಜೃಂಭಿಸುವ ಅಪರಾಧ, ಆ ಧರ್ಮದ ಆಧ್ಯಾತ್ಮಕತೆಯನ್ನೂ ಅಪಮಾನಿಸಿದ ಅಪರಾಧ ಹೆಣ್ಣನ್ನು ಪ್ರದರ್ಶನದ ಜಾಹೀರುಗಳಾಗಿಸಿದ ಅಪರಾಧಗಳೆಲ್ಲ ಕೂಡಿದ ಸಂದರ್ಭಕ್ಕಿದು ಸಾಕ್ಷಿಯಾಯಿತು. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕಡೇಪಕ್ಷ ಇನ್ನು ಮುಂದೆ ಈ ಆಚರಣೆಯ ಬಗ್ಗೆ ಪರಿಷತ್ತು ಯೋಚಿಸಿ ತಜ್ಞರ ಸಮಿತಿಯ ಮೂಲಕ ನಿರ್ಧಾರ ಕೈಗೊಳ್ಳುತ್ತದೆ. ಈ ಬಾರಿ ಆಯೋಜನೆಯ ಸಿದ್ಧತೆಗಳು ಮುಗಿದುಬಿಟ್ಟಿವೆ– ಎಂದಾದರೂ ಅನುನಯದಿಂದ ವರ್ತಿಸಬಹುದಿತ್ತು. ಪ್ರಗತಿಪರ, ಮಹಿಳೆಯರ ಅಭಿಪ್ರಾಯಗಳಿಗೆ ಗೌರವವಿದೆ ಎನ್ನಬಹುದಿತ್ತು. ಆದರೆ ಅವರು, ಯಾರದೋ ತಂತ್ರಗಾರಿಕೆಯಿದ್ದೀತು ಎಂದು ಯೋಚಿಸಿ ದಣಿದರೇ ಹೊರತೂ ಸಮಸ್ಯೆಯ ಆಳವನ್ನು ಕಾಣದಾದರು.

ಸಮ್ಮೇಳನಾಧ್ಯಕ್ಷರಾದ ಚಂದ್ರಶೇಖರ ಕಂಬಾರರಿಗೆ ಹೆಣ್ಣುಮಕ್ಕಳ ಬಗ್ಗೆ ಆದರವಿದೆ, ಮೆಚ್ಚುಗೆಯಿದೆ. ಆದರದು ಹೆಣ್ಣನ್ನು ಸಮಾನವಾಗಿ ಕಾಣಬಲ್ಲ ತಾಕತ್ತಲ್ಲ. ಶಿವಾಪುರದ ಕಟ್ಟೋಣದಲ್ಲಿ ಹೆಣ್ಣನ್ನು ಭೋಗಭೂಮಿಯಾಗಿ ನೋಡುವ, ಸೌಂದರ್ಯದ ಕಣಜವಾಗಿ ಮೆಚ್ಚುವ ಉತ್ತರ ಕರ್ನಾಟಕದ ಯಾಜಮಾನ್ಯದ ನೋಟವಿದೆ. ಕಂಬಾರರ ಬರಹಗಳಲ್ಲಿ ಹೆಣ್ಣುಗಳು ಪಡೆದುಕೊಳ್ಳುವ ಲೈಂಗಿಕ ಆಯ್ಕೆ, ಸ್ವಾತಂತ್ರ್ಯಗಳಿಗೆ ಪಿತೃತ್ವ ಚಿಂತನೆಯ ದೀಕ್ಷೆಯಿದೆಯೇ ಹೊರತೂ; ಇಲ್ಲಿಯ ಹೆಂಗಸರ ಪಾತ್ರಗಳು ಹೆಣ್ಣಿನ ಸ್ವಾಯತ್ತ ನೆಲೆಯ ಶೋಧನೆಯಲ್ಲಿ ತೊಡಗಿಸಿಕೊಂಡಿಲ್ಲ. ಇಲ್ಲಿಯ ಹೆಣ್ಣುಗಳು ಮರಮರಳಿ ಸಂಘರ್ಷಗಳನ್ನು ಎದುರಿಸುವುದು ತನ್ನ ದೇಹದ ಅಸ್ಮಿತೆಗಾಗಿ. ದೇಹವನ್ನು ನಿರ್ಲಕ್ಷಿಸಿ ಬೆಳೆಯಬಹುದಾದ ವ್ಯಕ್ತಿತ್ವದ ಅಸ್ಮಿತೆಗಾಗಿಯಲ್ಲ. ಕಂಬಾರರು ಸಮಕಾಲೀನ ಭಾರತದ ಅವ್ಯವಸ್ಥೆ ಅನಾರೋಗ್ಯಗಳಿಗೆ ತೀವ್ರ ವ್ಯಂಗ್ಯದಿಂದ ಪ್ರತಿಕ್ರಿಯಿಸುತ್ತಾರೆ. ಪ್ರತಿಕ್ರಿಯೆಯಲ್ಲಿ ವ್ಯಂಗ್ಯ ಹರಿತವಾಗುವುದು ಅಲ್ಲಿರುವ 'ತಾಯಿ ಭಾರತಿಯ' ಕಲ್ಪಿತಕ್ಕಾಗಿ. ಹೆಣ್ಣನ್ನು ದ್ವೇಷಿಸದೆ, ಹೆಣ್ಣು ತನ್ನ ಹಿತದ ಒಂದು ಭಾಗ ಎಂದು ತಿಳಿದ ಪಿತೃತ್ವದ ತಿಳುವಳಿಕೆಗೆ ಪೂರ್ಣಕುಂಭ ಮೆರವಣಿಗೆಯು ಅಪಚಾರ ಎಂದಾಗಲೀ, ಹೆಣ್ಣನ್ನು ದೇಹಬದ್ಧವಾಗಿ ನಿಗದಿಗೊಳಿಸುವಿಕೆ ಎಂದಾಗಲೀ ಅನ್ನಿಸುವುದಿಲ್ಲ. ಹಾಗಾಗಿ ಅವರು ನೇರ ಸಂವಾದದ ಸಂದರ್ಭದಲ್ಲಿಯೂ ತೇಲಿಸಿ ಜಾರಿಕೊಂಡು ಅದು ತನಗೆ ಸಂಬಂಧಿಸಿದ ವಿಷಯವಲ್ಲ ಎಂದು ನಿರುಮ್ಮಳವಾಗಿದ್ದರು.

ಆದರೆ ಈ ಚರ್ಚೆ, ಈ ಸಮ್ಮೇಳನಕ್ಕೇ ಮುಕ್ತಾಯವಾಗುವುದಿಲ್ಲ. ಇನ್ನು ಮುಂದಿನ ಅಖಿಲ ಭಾರತ, ಜಿಲ್ಲಾ, ತಾಲೂಕಾ ಸಮ್ಮೇಳನಗಳ ಸಂದರ್ಭದಲ್ಲಿಯೂ ಮುಂದುವರಿಯುತ್ತದೆ. ಒಂದು ತಾರ್ಕಿಕ ಅಂತ್ಯ ಪಡೆಯುತ್ತದೆ. ಹೆಣ್ಣುಮಕ್ಕಳನ್ನು ಸಾಹಿತ್ಯಿಕವಾಗಿ–ಸಾಂಸ್ಕೃತಿಕವಾಗಿ ಪಾಲುದಾರರಾಗಿಸಬೇಕಾದ, ಪ್ರೋತ್ಸಾಹಿಸಬೇಕಾದ ವಲಯಗಳು ಯಾವವು ಎಂಬ ಚರ್ಚೆ ನಡೆಯಬೇಕಾಗುತ್ತದೆ.

ಬೃಹತ್ ಪ್ರಮಾಣದಲ್ಲಿ ಕೋಟ್ಯಂತರ ರೂಪಾಯಿಗಳ ಬಜೆಟ್‌ನಲ್ಲಿ ನಡೆಸುವ ಇಂತಹ ಸಮ್ಮೇಳನಗಳ ಯಶಸ್ಸನ್ನು ನಿರ್ಧರಿಸುವ ಮಾನದಂಡಗಳೇನು? ಎಂಬ ಪ್ರಶ್ನೆ ಕಾಡುತ್ತಿದೆ. ಬಲುದೊಡ್ಡ ಪ್ರಮಾಣದಲ್ಲಿ ಜನರು ಆಗಮಿಸಿದ್ದೇ? ಬಂದವರಲ್ಲಿ ಎಷ್ಟು ಜನರು ಗೋಷ್ಠಿಯಲ್ಲಿ ಆಸಕ್ತರು? ಸಾಹಿತ್ಯದ ಆಸಕ್ತರು? ಅವರಿಗೆ ಬರಹಗಾರರನ್ನು, ಕವಿಗಳನ್ನು, ಕಲಾವಿದರನ್ನು ಮತೀಯವಾದಿ ಶಕ್ತಿಗಳು ಯಾಕೆ ದ್ವೇಷಿಸುತ್ತಿವೆ ಎನ್ನುವುದು ತಿಳಿದಿದೆಯೇ? ಪುಸ್ತಕದ ಮಳಿಗೆಗಳ ಮುಂದೆ ಓಡಾಡುವ ಜನರು, 'ಅಲ್ಲಿ ಕಮ್ಮಿ ರೇಟಿಗೆ ಸಿಗ್ತಾವ. ಇಲ್ಲಿ ಕನ್ಸೇಶನ್‌ಗೆ ಅದಾವ' ಎನ್ನುತ್ತಿದ್ದರೇ ಹೊರತೂ– ಪುಸ್ತಕಗಳ ನೆಲೆ–ಬೆಲೆಗಳನ್ನು ಪತ್ತೆ ಮಾಡುವಲ್ಲಿ ಸೋಲುತ್ತಿದ್ದರು.

ಜನದಟ್ಟಣೆ ಸಮ್ಮೇಳನ–ಸಮಾವೇಶಗಳಲ್ಲಿ ಊಟೋಪಚಾರದ, ಜಾಗದ ಅನಾನುಕೂಲಗಳು ಸಹಜವಾಗಿರುತ್ತವೆ. ಅದನ್ನು ಯಶಸ್ಸಿನ ಮಾಪನ ಎನ್ನಲಾಗದು. ಅಷ್ಟಕ್ಕೂ, ಮೊದಲ ದಿನದ ತೊಂದರೆಯನ್ನು ಬಲುಬೇಗ ಸರಿಪಡಿಸಿಕೊಂಡು ಮುಂದಿನೆರಡು ದಿನಗಳ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲಾಗಿತ್ತಂತೆ. ಕಿವಿ ತಮಟೆ ಮೇಲೆ "ಊಟ ಭೇಷ್ ಮಾಡ್ಯಾರ. ಬ್ಯಾರೆ ಬ್ಯಾರೆ ಕೌಂಟರ್ ಅದಾವ. ವಯಸ್ಸ್ ಹೋದವ್ರಿಗಂತಾನೂ ಬ್ಯಾರೆ ಕೌಂಟರ್ ಮಾಡ್ಯಾರ. ಭೇಷದ. ಹೋಗ್ರಿ ಉಂಡ ಬರಹೋಗ್ರಿ"– ಎಂಬಂತಹ ಮಾತುಗಳು ಬಿದ್ದವು. ಆದರೆ, ಹೀಗೆ ಸಂತಸಪಟ್ಟವರು ಉಂಡು, ಬಹುತೇಕ ಕಾಲ ಕಳೆದದ್ದು ವ್ಯಾಪಾರಿ ಮಳಿಗೆಗಳತ್ತ, ಶಾಲೆ–ಕಾಲೇಜುಗಳ ರಜೆ, ಊಟೋಪಚಾರದ ವ್ಯವಸ್ಥೆ, ಸಾರಿಗೆಯ ಅನುಕೂಲ, ಒಂದಿಷ್ಟು ಮಾರ್ಕೆಟಿಂಗ್ ಸೌಲಭ್ಯ– ಈ ಎಲ್ಲವೂ ಸೇರಿ 'ಕನ್ನಡ ಸಾಹಿತ್ಯ' ಅಂತ ಯಾವುದೋ ಅಮೂರ್ತವನ್ನು ಕೇಳಿಸಿಕೊಂಡವರಂತೆ ಇದ್ದುಬಿಟ್ಟರೆ, ಅಷ್ಟೇ ಸಾಕೇ?

ಜನರ ಒಡಲಾಳದ ಧ್ವನಿಯಾದ ಸಾಹಿತ್ಯ, ಗಂಭೀರ ಗತ್ತುಗಾರಿಕೆಯಲ್ಲಿ ಜನರಿಂದ ವಿಮುಖವಾಗಿ, ಆಸ್ಥಾನದ ರಸಾಸ್ವಾದನೆಯಲ್ಲಿ ಮುಳುಗಿಬಿಡುವ ಅಚಾತುರ್ಯವನ್ನು ತಡೆಯಲು; ಜನ ಸಂವೇದನೆಗೆ ತನ್ನ ಋಣವನ್ನು ಸಂದಾಯಮಾಡಲು; ವರ್ಷಕ್ಕೊಮ್ಮೆ ಊರ ದೇವರಿಗೆ ನಡೆದುಕೊಳ್ಳುವಷ್ಟಕ್ಕಾದರೂ ಬರಹಗಾರರ ಮತ್ತು ಜನರ 'ಮಿಲೇಸೂರ್' ಅಗತ್ಯವಿದೆ. ಆದರೆ ಹೀಗೆ ಬೆರೆಯುವಾಗ, ಪರಸ್ಪರರ ಬೆಸುಗೆಯ ಕಾರಣ ಸಾಹಿತ್ಯ–ಕಲೆಗಳೇ ಆಗಿರಬೇಕಲ್ಲವೇ? ವರ್ಷದಿಂದ ವರ್ಷಕ್ಕೆ ಜನಾಕರ್ಷಣೆಯ ತುರ್ತಿಗೆ ಒಳಗಾಗಿ, ವ್ಯಾಪಾರೀ ಮಳಿಗೆಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದೇವಲ್ಲವೇ? ಈ ಎಲ್ಲ ಸೌಲಭ್ಯಗಳನ್ನು ಒದಗಿಸಿ, ವ್ಯಾಪಾರೀ ಮಳಿಗೆಗಳನ್ನು ಇಲ್ಲವಾಗಿಸಿದರೆ ಸಾಹಿತ್ಯದ ಆಸಕ್ತಿಯನ್ನು ಹುಟ್ಟಿಸುವುದು ಸಾಧ್ಯವಾದೀತೆ? ಇದರಿಂದ ಕುಶಲಕರ್ಮಿ ವ್ಯಾಪಾರಿಗಳಿಗೆ, ಕಿರುಕುಳ ವ್ಯಾಪಾರಿಗಳಿಗೆ ಅನ್ಯಾಯವಾಗುತ್ತದೆಯೆಂಬ ಆಕ್ಷೇಪವೂ ಬಂದೀತು. ಇತ್ತೀಚಿನ ವರ್ಷಗಳಲ್ಲಿ, ಸಾಹಿತ್ಯ ಸಮ್ಮೇಳನಗಳ ಪ್ರೇರಣೆಯಿಂದ ತನ್ನಲ್ಲಿ ಸಾಹಿತ್ಯಾಭಿರುಚಿ ಹುಟ್ಟಿತು– ಎಂಬ ಯುವ ಸಮುದಾಯವನ್ನು ಕಾಣಲು ಸಾಧ್ಯವಾಗಿಲ್ಲವಾದರೆ ಅದರ ಕಾರಣಗಳೇನಿದ್ದೀತು?

ಸಮ್ಮೇಳನಗಳಲ್ಲಿ ಅದೆಷ್ಟೇ ಜನದಟ್ಟಣೆಯಿದ್ದರೂ ಅತ್ಯುತ್ತಮವಾದ ಗೋಷ್ಠಿಗಳು, ಕೇಳುಗರ ಪ್ರಜ್ಞೆಯನ್ನು ವಿಸ್ತರಿಸುವಂತಿದ್ದರೆ; ಅಪರೂಪದ ಕ್ಲಾಸಿಕ್ ಎನ್ನಬಹುದಾದ ರಂಗಪ್ರಕಾರಗಳು ಸಂಯೋಜಿತಗೊಂಡರೆ; ಮನಸ್ಸಿನ ತ್ರಾಣವನ್ನು ಉದ್ದೀಪಿಸಬಲ್ಲ ಶ್ರುತಿ ಸಾಧ್ಯತೆಯು ಬಿತ್ತರಗೊಂಡರೆ; ಜನಪದ ಕಲಾ ಪ್ರಕಾರಗಳ ಅತ್ಯುನ್ನತ ವಿಕಾಸ ಪ್ರಭೆ ತೆರೆದರೆ; ಸಂಯೋಜಕರ, ರಾಜಕಾರಣಿಗಳ ಉರುವಣಿಗೆ ಕಮ್ಮಿಯಾದರೆ; ಸಮ್ಮೇಳನದ ಒಟ್ಟಾರೆ ಆಶಯ ಮನುಷ್ಯ ಘನತೆಯನ್ನು ಎತ್ತಿ ಹಿಡಿಯುವಂತಿದ್ದರೆ ಮಾತ್ರ ಅದು ಯಶಸ್ವಿ ಎಂದು ಪರಿಗಣಿತವಾಗುತ್ತದೆ. ಈ ಹಾದಿಯ ಏಳುಬೀಳುಗಳ ಸಾಹಸಯಾತ್ರೆಯಲ್ಲಿ ನಮ್ಮ ಇದುವರೆಗಿನ ಸಮ್ಮೇಳನಗಳು ನಡೆದುಬಂದಿವೆ. ಆದರೆ ಯಾರದೋ ಯಾವುದೋ ರಾಜಕೀಯ ಒತ್ತಡಕ್ಕೆ ಸಿಲುಕಿ ಸಾಹಿತ್ಯದ ಗೋಷ್ಠಿಗಳು ಮೂಲಭೂತವಾದದ ಪ್ರಚಾರವೇದಿಕೆಯಾದರೆ; ಅವಕಾಶವಾದಿ ಕಲಾವಿದರ ಸಾಧಾರಣ ಹಾಡು–ಕಲೆಗಳಿಗೆ ಜನರು ಕಿವಿಗೊಡುವಂತಾದರೆ ಅದು ಜನರ ದುಡಿಮೆಯಿಂದ ಸಂದಾಯವಾದ ಸರ್ಕಾರೀ ಹಣದ ದುರುಪಯೋಗವಾಗುತ್ತದೆ. ಸಾಹಿತ್ಯ ಬಳಕೆಯ ಪದಾರ್ಥವಾಗುತ್ತದೆ. ಈಗಾಗಲೇ ನಾಡಿನಲ್ಲಿ ಬಂಡವಾಳಶಾಹಿಗಳು ಸಾಹಿತ್ಯವನ್ನು ಮೇಜವಾನಿಯಾಗಿಸಿಕೊಂಡಿದ್ದಾರೆ. ಕನ್ನಡಿಗರ ಅಭಿಮಾನದ ಸಂಸ್ಥೆಯಾದ ಪರಿಷತ್ತು ತನ್ನ ಸುತ್ತಿರುವ ಈ ಜಂಜಾಟಗಳಿಂದ ಮುಕ್ತವಾಗಲಿ. ●





ಮೈಲಿಗಲ್ಲಾದ ಜನವರಿ 8-9 ಸಾರ್ವತ್ರಿಕ ಮುಷ್ಕರ

ಬಿಜೆಪಿ ಆಳ್ವಿಕೆಯ ವಿರುದ್ಧ ದುಡಿಯುವ ವರ್ಗದ ಬಂಡಾಯದ ಸಂಕೇತ

2016ರ ಸೆಪ್ಟೆಂಬರ್ 2ರ ಸಾರ್ವತ್ರಿಕ ಮುಷ್ಕರದ ನಂತರ ನಡೆದ ಈ ವ್ಯಾಪಕ ಚಳವಳಿ ಅಪಾಯಕಾರಿ ನವ-ಉದಾರವಾದಿ ನೀತಿಗಳ ವಿರುದ್ಧ ಹಾಗೂ ಕಾರ್ಮಿಕ-ವಿರೋಧಿ ಕಾನೂನುಗಳನ್ನು ತರುವ ಅದರ ಪ್ರಯತ್ನಗಳ ವಿರುದ್ಧ ದುಡಿಯುವ ವರ್ಗದ ಹೆಚ್ಚುತ್ತಿರುವ ಆಕ್ರೋಶ ಮತ್ತು ಅಸಮಾಧಾನದ ಪ್ರತೀಕ. ಮೋದಿ ಸರಕಾರದ ಕಾರ್ಮಿಕ-ವಿರೋಧಿ, ಜನ-ವಿರೋಧಿ ನೀತಿಗಳಂದ ತಮಗೆ ಯಾವುದೇ ಪರಿಹಾರ ಸಿಗುವುದಿಲ್ಲ ಎನ್ನುವುದು ದೇಶದ ದುಡಿಯುವ ಜನರಿಗೆ ತುಂಬಾ ಸ್ಪಷ್ಟವಾಗಿ ಮನವರಿಕೆಯಾಗಿದೆ. ಎರಡು ದಿನಗಳ ಸಾರ್ವತ್ರಿಕ ಮುಷ್ಕರ ಮುಂಬರುವ ಲೋಕಸಭೆ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಮೋದಿ ಸರಕಾರವನ್ನು ಸೋಲಿಸಲು ದುಡಿಯುವ ವರ್ಗ ನಿಸ್ಸಂದೇಹವಾಗಿ ರಾಜಕೀಯ ಕದನದಲ್ಲಿ ಭಾಗವಹಿಸುತ್ತದೆ ಎಂಬ ಒಂದು ಸ್ಪಷ್ಟ ಸಂಕೇತ ನೀಡಿದೆ.



*** ಪ್ರಕಾಶ್ ಕಾರಟ್**

2019 ಜನವರಿ 8 ಮತ್ತು 9 ರಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಕರೆಯ ಮೇರೆಗೆ ನಡೆದ ಸಾರ್ವತ್ರಿಕ ಮುಷ್ಕರ ಭಾರತದ ದುಡಿಯುವ ಜನರ ಚಳವಳಿಯ ಇತಿಹಾಸದಲ್ಲಿ ಒಂದು ಮುಖ್ಯ ಮೈಲಿಗಲ್ಲು ಆಗಿ ದಾಖಲಾಗುತ್ತದೆ.

ಸಂಘಟಿತ, ಅಸಂಘಟಿತ ಮತ್ತು ಸರಕಾರಿ ವಲಯ- ಹೀಗೆ ಎಲ್ಲಾ ರಂಗಗಳಿಗೆ ಸೇರಿದ ಸುಮಾರು 20 ಕೋಟಿ ಕಾರ್ಮಿಕರು ನೌಕರರು ಈ ಮುಷ್ಕರದಲ್ಲಿ ಭಾಗವಹಿಸಿದರು. ಸಾರ್ವಜನಿಕ ರಂಗದ ಉದ್ದಿಮೆಗಳು, ಖಾಸಗಿ ಕಾರ್ಖಾನೆಗಳು, ರಸ್ತೆ ಸಾರಿಗೆ, ನಿರ್ಮಾಣ, ಗಣಿಗಾರಿಕೆ, ಪ್ಲಾಂಟೇಷನ್, ಕೇಂದ್ರ ಸರಕಾರ, ರಾಜ್ಯ ಸರಕಾರ, ಬ್ಯಾಂಕಿಂಗ್, ವಿಮೆ, ಅಂಗನವಾಡಿ, ಆಶಾ, ಬಿಸಿಯೂಟ ಕಾರ್ಮಿಕರು ಮತ್ತು ಶಿಕ್ಷಣ ಸಂಸ್ಥೆಗಳ ನೌಕರರು ದೇಶದಾದ್ಯಂತ ಮುಷ್ಕರದಲ್ಲಿ ಭಾಗವಹಿಸಿದರು.

ರಸ್ತೆ ಸಾರಿಗೆ ಕಾರ್ಮಿಕರ ಮುಷ್ಕರದಿಂದಾಗಿ ಅನೇಕ ರಾಜ್ಯಗಳಲ್ಲಿ ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತಗೊಂಡಿತು. ಅಸಾಂ, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳ ಎಲ್ಲಾ ಚಹಾ ತೋಟಗಳ ಕೆಲಸ ಸ್ಥಗಿತಗೊಂಡಿತು. ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಅನೇಕ ಬಹುರಾಷ್ಟ್ರೀಯ ಕಂಪೆನಿ ಸಂಸ್ಥೆಗಳು ಮುಚ್ಚಿದ್ದವು. ಟ್ರೇಡ್ ಯೂನಿಯನ್‌ಗಳ ಸಾವಿರಾರು ಕಾರ್ಯಕರ್ತರು ಮತ್ತು ನಾಯಕರನ್ನು ಮುಷ್ಕರದ ವೇಳೆ ಬಂಧಿಸಲಾಯಿತು.

ಕೇರಳ, ಅಸ್ಸಾಂ, ಓಡಿಶಾ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ಸಾರ್ವತ್ರಿಕ ಮುಷ್ಕರದ ಪರಿಣಾಮ ಗರಿಷ್ಠವಾಗಿದ್ದು ಬಂದ್ ವಾತಾವರಣ ನಿರ್ಮಾಣವಾಗಿತ್ತು. ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಪೋಲೀಸರ ದೌರ್ಜನ್ಯದ ಹೊರತಾಗಿಯೂ ವಿವಿಧ ರಂಗಗಳಲ್ಲಿ ಮುಷ್ಕರ ಯಶಸ್ವಿಯಾಯಿತು. ಅದೇ ರೀತಿ ತ್ರಿಪುರಾದಲ್ಲಿ ಕೂಡ, ಬಿಜೆಪಿ ಸರಕಾರ ಮತ್ತು ಆಡಳಿತ ಪಕ್ಷದ ದಬ್ಬಾಳಿಕೆ ಹಾಗೂ ಪ್ರಯತ್ನಗಳ ಹೊರತಾಗಿಯೂ ಬಂದ್ ರೀತಿಯ ವಾತಾವರಣ ಸೃಷ್ಟಿಯಾಗಿತ್ತು.

ಭೂಮಿ ಅಧಿಕಾರ್ ಆಂದೋಲನ್ ಮತ್ತು ಕಿಸಾನ್ ಸಭಾದ ಕರೆಯ ಮೇರೆಗೆ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿಭಟನಾ ಕಾರ್ಯಾಚರಣೆಗಳು ನಡೆದಿದ್ದು ಎರಡು ದಿನಗಳ ಮುಷ್ಕರದ ಒಂದು ಗಮನಾರ್ಹ ಅಂಶವಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ತಡೆ ಮತ್ತು ರೈಲ್ ರೋಕೋ ಚಳವಳಿ ವ್ಯಾಪಕವಾಗಿತ್ತು.

2016ರ ಸೆಪ್ಟೆಂಬರ್ 2ರ ಒಂದು ದಿನದ ಸಾರ್ವತ್ರಿಕ ಮುಷ್ಕರದ ನಂತರ ನಡೆದ ಈ ವ್ಯಾಪಕ ಚಳವಳಿ ಮೋದಿ ಸರಕಾರದ ಅಪಾಯಕಾರಿ ನವ-ಉದಾರವಾದಿ ನೀತಿಗಳ ವಿರುದ್ಧ ಹಾಗೂ ಕಾರ್ಮಿಕ-ವಿರೋಧಿ ಕಾನೂನುಗಳನ್ನು ತರುವ ಅದರ ಪ್ರಯತ್ನಗಳ ವಿರುದ್ಧ ದುಡಿಯುವ ವರ್ಗದ ಹೆಚ್ಚುತ್ತಿರುವ ಆಕ್ರೋಶ ಮತ್ತು ಅಸಮಾಧಾನದ ಪ್ರತೀಕವಾಗಿತ್ತು.

ಮೋದಿ ಸರಕಾರವು ರಕ್ಷಣಾ ಉತ್ಪಾದನೆ ಕ್ಷೇತ್ರವೂ ಸೇರಿದಂತೆ ಒಂದಾದ ಮೇಲೆ ಇನ್ನೊಂದು ಸರಕಾರಿ ಉದ್ದಿಮೆಯನ್ನು ಖಾಸಗೀಕರಿಸಲು ಕ್ರಮಗಳನ್ನು ಕೈಗೊಳ್ಳುತ್ತಿದೆ. ಕಾರ್ಮಿಕರ ಹಕ್ಕುಗಳನ್ನು ನೇರವಾಗಿ ಬಾಧಿಸುವ ಅನೇಕ ವಿಚಾರಗಳಲ್ಲಿ ಟ್ರೇಡ್ ಯೂನಿಯನ್‌ಗಳ ಜೊತೆ ಸಮಾಲೋಚಿಸುವ ಗೊಡವೆಗೂ ಸರಕಾರ ಹೋಗುತ್ತಿಲ್ಲ. ಕಾರ್ಮಿಕರ ಹೋರಾಟಗಳನ್ನು ಹತ್ತಿಕ್ಕಲು ಮತ್ತು ಟ್ರೇಡ್ ಯೂನಿಯನ್ ನಾಯಕರ್‍ನು ಬಂಧಿಸಲು ಕರಾಳ ಕಾನೂನುಗಳನ್ನು ಬಳಸುವ ಪ್ರವೃತ್ತಿ ಹೆಚ್ಚಾಗುತ್ತಿದೆ.

ದುಡಿಯುವ ವರ್ಗದ ವಿವಿಧ ವಿಭಾಗಗಳ ಸರಣಿ ಹೋರಾಟಗಳು ಮತ್ತು ಪ್ರತಿಭಟನೆಗಳ ನಂತರ ಎರಡು ದಿನಗಳ ಸಾರ್ವತ್ರಿಕ ಮುಷ್ಕರ ನಡೆಯಿತು. ಕಾರ್ಮಿಕ ಸಂಘಟನೆಗಳು ಕಿಸಾನ್ ಸಭಾ ಕಳೆದ ವರ್ಷ ಆಗಸ್ಟ್ 9ರಂದು ನಡೆಸಿದ ಜೈಲ್ ಭರೋ ಆಂದೋಲನ, ಸೆಪ್ಟೆಂಬರ್ ಐದರಂದು ನವದೆಹಲಿಯಲ್ಲಿ ನಡೆದ ಕಿಸಾನ್-ಮಜ್ದೂರ್ ಸಂಘರ್ಷ ರ್‍ಯಾಲಿ ಮತ್ತು ನವೆಂಬರ್ 29-30ರಂದು ನಡೆದ ಕಿಸಾನ್ ಮುಕ್ತಿ ಮಾರ್ಚ್- ಇವೆಲ್ಲವೂ ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗದಲ್ಲಿ ಹೆಚ್ಚುತ್ತಿರುವ ಹೋರಾಟದ ಕೆಚ್ಚಿಗೆ ಸಾಕ್ಷಿಯಾಗಿವೆ.

ಮೋದಿ ಸರಕಾರ ದುಡಿಯುವ ಜನರ ಚಳವಳಿಗೆ ವಿರುದ್ಧವಾಗಿದೆ. ಹಾಗೂ ಕಾರ್ಮಿಕರ ನ್ಯಾಯಸಮ್ಮತ ಬೇಡಿಕೆಗಳನ್ನು ಅಪರಾಧ ಎಂಬಂತೆ ಪರಿಗಣಿಸುತ್ತದೆ. ಮುಷ್ಕರದ ಮೊದಲನೇ ದಿನ, ಅಂದರೆ ಜನವರಿ ಎಂಟರಂದು ಇದು ಸ್ಪಷ್ಟವಾಯಿತು. ಕೇಂದ್ರೀಯ ಕಾರ್ಮಿಕ ಸಂಘಟನೆಗಳಿಗೆ ಮಾನ್ಯತೆ ನೀಡುವ ವಿಚಾರದಲ್ಲಿ ಸರಕಾರಕ್ಕೆ ಏಕಪಕ್ಷೀಯ ಅಧಿಕಾರಗಳನ್ನು ನೀಡುವ ಕಾರ್ಮಿಕ ಸಂಘಟನೆಗಳ (ತಿದ್ದುಪಡಿ) ಮಸೂದೆಯನ್ನು ಕೇಂದ್ರ ಕಾರ್ಮಿಕ ಸಚಿವರು ಆ ದಿನ ಲೋಕಸಭೆಯಲ್ಲಿ ಮಂಡಿಸಿದರು. ಸಾರ್ವತ್ರಿಕ ಮುಷ್ಕರ ಯಾವುದೇ ಪರಿಣಾಮ ಬೀರಿಲ್ಲ ಎಂದು ಹೇಳುವ ಧಾರ್ಷ್ಟ್ಯವನ್ನೂ ಸಚಿವರು ತೋರಿದರು.

ಮೋದಿ ಸರಕಾರದ ಕಾರ್ಮಿಕ-ವಿರೋಧಿ, ಜನ-ವಿರೋಧಿ ನೀತಿಗಳಿಂದ ತಮಗೆ ಯಾವುದೇ ಪರಿಹಾರ ಸಿಗುವುದಿಲ್ಲ ಎನ್ನುವುದು ದೇಶದ ದುಡಿಯುವ ಜನರಿಗೆ ತುಂಬಾ ಸ್ಪಷ್ಟವಾಗಿ ಮನವರಿಕೆಯಾಗಿದೆ. ಎರಡು ದಿನಗಳ ಸಾರ್ವತ್ರಿಕ ಮುಷ್ಕರ ಒಂದು ಸ್ಪಷ್ಟ ಸಂಕೇತ ನೀಡಿದೆ. ಮುಂಬರುವ ಲೋಕಸಭೆ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಮೋದಿ ಸರಕಾರವನ್ನು ಸೋಲಿಸಲು ದುಡಿಯುವ ವರ್ಗ ನಿಸ್ಸಂದೇಹವಾಗಿ ರಾಜಕೀಯ ಕದನದಲ್ಲಿ ಭಾಗವಹಿಸುತ್ತದೆ ಎನ್ನುವುದೇ ಆ ಸಂಕೇತ.

ಅನು: ವಿಶ್ವ







ಹೊಸ ಇತಿಹಾಸ ನಿರ್ಮಿಸಿದ 20 ಕೋಟಿ ಕಾರ್ಮಿಕರ 2 ದಿನಗಳ ಕಾರ್ಯಾಚರಣೆ



ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಕಾರ್ಮಿಕ–ವಿರೋಧಿ, ಜನ–ವಿರೋಧಿ ಮತ್ತು ದೇಶ–ವಿರೋಧಿ ಧೋರಣೆಗಳ ವಿರುದ್ಧ ಎರಡು ದಿನಗಳ ಸಾರ್ವತ್ರಿಕ ಮುಷ್ಕರ ನಡೆಸಬೇಕೆಂಬ ರಾಷ್ಟ್ರೀಯ ಕಾರ್ಮಿಕ ಸಮಾವೇಶದ ಸಪ್ಟಂಬರ್ 28ರ ಕರೆಗೆ ದೇಶಾದ್ಯಂತ 20 ಕೋಟಿಗೂ ಹೆಚ್ಚು ಕಾರ್ಮಿಕರು ಓಗೊಟ್ಟು, ಲಕ್ಷಾಂತರ ಮಂದಿ ಬೀದಿಗಳಿದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ದೇಶದ ಕಾರ್ಮಿಕ ಆಂದೋಲನದ ಇತಿಹಾಸದಲ್ಲಿ ಮತ್ತೊಂದು ದಾಖಲೆ ನಿರ್ಮಿಸಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ರೈತರೂ, ಕೃಷಿ ಕೂಲಿಕಾರರೂ ರಾಸ್ತಾ–ರೋಕೋ, ಧರಣಿ, ಮತಪ್ರದರ್ಶನಗಳ ಮೂಲಕ ಕಾರ್ಮಿಕರೊಂದಿಗೆ ಸೌಹಾರ್ದ ವ್ಯಕ್ತಪಡಿಸಿದರು. ಹಲವಾರು ನಗರ ಪ್ರದೇಶಗಳಲ್ಲೂ ವಿದ್ಯಾರ್ಥಿಗಳು, ಯುವಜನರು ಮತ್ತಿತರ ಜನವಿಭಾಗಗಳೂ ಬಂದ್, ಮತಪ್ರದರ್ಶನಗಳ ಮೂಲಕ, ಕಾರ್ಮಿಕರ ಮೆರವಣಿಗೆಗಳಲ್ಲಿ ಭಾಗವಹಿಸುವ ಮೂಲಕ ಸೌಹಾರ್ದವನ್ನು ವ್ಯಕ್ತಪಡಿಸಿದರು. ಈ ಬಾರಿ ಮಾಧ್ಯಮಗಳಿಗೂ ಈ ಕಾರ್ಯಾಚರಣೆಯನ್ನು ನಿರ್ಲಕ್ಷಿಸಲು ಸಾಧ್ಯವಾಗಿಲ್ಲ.

ಈ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿರುವ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮುಷ್ಕರದಲ್ಲಿ ಕಾರ್ಮಿಕರು ತೋರಿರುವ ಹೋರಾಟದ ಮನೋಭಾವ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದೆ ಎಂದು ಅವರನ್ನು ಅಭಿನಂದಿಸುತ್ತ ಹೇಳಿವೆ. ಸರಕಾರ ಅರ್ಥಪೂರ್ಣ ಸಂವಾದ ನಡೆಸಲು ಉದ್ದೇಶಪೂರ್ವಕಾಗಿಯೇ ನಿರಾಕರಿಸುತ್ತ ಬಂದಿದೆ. ಅಲ್ಲದೆ ಮಾಲಕರ ಪರವಾದ ಧೋರಣೆಗಳನ್ನೇ ಅನುಸರಿಸುತ್ತ ಬಂದಿದೆ. ಇದರಿಂದ ಕಾರ್ಮಿಕರ ಪರಿಸ್ಥಿತಿ ಹದಗೆಡುತ್ತಲೇ ಇದ್ದು, ಇದನ್ನು ಸಹಿಸಿಕೊಂಡಿರಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಉಂಟಾಗಿರುವುದರಿಂದ ಈ ಸಾರ್ವತ್ರಿಕ ಮುಷ್ಕರ ನಡೆದಿದೆ ಎಂದು ನೆನಪಿಸಿರುವ ಕೇಂದ್ರೀಯ ಕಾರ್ಮಿಕ ಸಂಘಟನೆಗಳು, ಈ ಹೋರಾಟದಲ್ಲಿ ಬುಡಮಟ್ಟದಲ್ಲಿ ಕಂಡು ಬಂದಿರುವ ಐಕ್ಯತೆ ಪ್ರಶಂಸನೀಯ, ಈ ಐಕ್ಯತೆಯನ್ನು ಉಳಿಸಿಕೊಂಡು ಕಾರ್ಮಿಕ ವರ್ಗದ ಶೋಷಕರ ವಿರುದ್ಧ ಇನ್ನೂ ದೊಡ್ಡ ಹೋರಾಟಗಳಿಗೆ ಅಣಿಗೊಳ್ಳಬೇಕು ಎಂದು ಕರೆ ನೀಡಿವೆ.

ಭಾರತೀಯ ಕಾರ್ಮಿಕರ ಮಹಾಮುಷ್ಕರಕ್ಕೆ ಕಾರ್ಮಿಕ ಸಂಘಗಳ ಜಾಗತಿಕ/ಅಂತರ್ರಾಷ್ಟ್ರೀಯ ಒಕ್ಕೂಟಗಳಾದ, ಡಬ್ಲ್ಯು.ಎಫ್.ಟಿ.ಯು ಮತ್ತು ಐ.ಸಿ.ಟಿ.ಯು. ಮತ್ತಿತರ ಅಂತರ್ರಾಷ್ಟ್ರೀಯ ಸಂಘಟನೆಗಳೂ ಬೆಂಬಲ ಮತ್ತು ಸೌಹಾರ್ದ ವ್ಯಕ್ತಪಡಿಸಿದ್ದು ಅವರೆಲ್ಲರಿಗೂ ಕೇಂದ್ರ ಕಾರ್ಮಿಕ ಸಂಘಟನೆಗಳು ಕೃತಜ್ಞತೆ ವ್ಯಕ್ತಪಡಿಸಿವೆ.

ಪ್ರಮುಖ ಉದ್ದಿಮೆಗಳಲ್ಲಿ ಹೆಚ್ಚಿನ ಸ್ಪಂದನೆ

ದೇಶಾದ್ಯಂತ ಪ್ರಮುಖ ಉದ್ದಿಮೆಗಳಲ್ಲಿ ಈ ಹಿಂದಿನ ಮುಷ್ಕರಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕಾರ್ಮಿಕರು ಭಾಗವಹಿಸಿದ್ದಾರೆ ಎಂದು ಸಿಐಟಿಯು ಅಧ್ಯಕ್ಷರಾದ ಡಾ. ಹೇಮಲತಾ ಹೇಳಿದ್ದಾರೆ.

ಕಲ್ಲಿದ್ದಲು ಉದ್ದಿಮೆಯಲ್ಲಿ 70 ರಿಂದ 75% ಕಾರ್ಮಿಕರು ಭಾಗವಹಿಸಿದರು. ಸುಮಾರಾಗಿ ಎಲ್ಲ ಪ್ರಮುಖ ಕೇಂದ್ರಗಳಲ್ಲಿ ಖಾಯಂ ಮತ್ತು ಕಾಂಟ್ರಾಕ್ಟ್ ಕಾರ್ಮಿಕರು ಮುಷ್ಕರದಲ್ಲಿ ಸೇರಿದರು. ಬಹಳಷ್ಟು ಕಡೆಗಳಲ್ಲಿ ಕೆಲಸ ಸ್ಥಗಿತಗೊಂಡಿತು.

ರಾಷ್ಟ್ರೀಯ ವಿದ್ಯುತ್ ನೌಕರರು ಮತ್ತು ಇಂಜಿನಿಯರುಗಳ ಸಂಯೋಜನಾ ಸಮಿತಿಯ ಕರೆಯ ಮೇರೆಗೆ 30 ಲಕ್ಷ ಮಂದಿ ಈ ವಲಯದಲ್ಲಿ ಮುಷ್ಕರದಲ್ಲಿ ಭಾಗವಹಿಸಿದರು. ತೈಲ ವಲಯದಲ್ಲಿ, ವಿಶೇಷವಾಗಿ ಅಸ್ಸಾಂ ನಲ್ಲಿ ಮುಷ್ಕರ ಅಭೂತಪೂರ್ವವಾಗಿ ನಡೆಯಿತು. ಕೊಚ್ಚಿ ರಿಫೈನರಿಯಲ್ಲಿ ಆಡಳಿತವು ಮುಷ್ಕರವನ್ನು ನಿಷೇಧಿಸುವ ಕೋರ್ಟ್ ಆದೇಶವನ್ನು ಪಡೆದರೂ ನಾಲ್ಕರಲ್ಲಿ ಮೂರು ಸಂಘಗಳು ಮುಷ್ಕರದಲ್ಲಿ ಭಾಗವಹಿಸಿದವು. ಒಟ್ಟಾರೆಯಾಗಿ ಪೂರ್ವ, ಈಶಾನ್ಯ ಮತ್ತು ದಕ್ಷಿಣ ಭಾರತದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಮುಷ್ಕರ ನಡೆಯಿತು, ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಭಾಗಶಃ ನಡೆಯಿತು.

ಉಕ್ಕು ವಲಯದಲ್ಲಿ, ವಿಶಾಖ ಪಟ್ಟಣ, ಸೇಲಂ ಮತ್ತು ಭದ್ರಾವತಿಯಲ್ಲಿ ಸಂಪೂರ್ಣ ಮುಷ್ಕರ ನಡೆಯಿತು. ರೂರ್ಕೆಲಾದಲ್ಲಿ ಖಾಯಂ ನೌಕರರು ಭಾಗವಹಿಸಿದರು, ಪಿಕೆಟಿಂಗ್ ನಡೆಸಿದರು. ಒಟ್ಟಾರೆಯಾಗಿ 50% ಮುಷ್ಕರ ಭಾಗವಹಿಸುವಿಕೆ ಇತ್ತು. ಬೊಕಾರೊ, ಭಿಲಾಯಿ ಮತ್ತು ದುರ್ಗಾಪುರದಲ್ಲಿ ಭಾಗಶಃ ನಡೆಯಿತು.

ಬಂದರುಗಳಲ್ಲಿ ಮುಷ್ಕರ ಭಾಗಶಃ ನಡೆಯಿತು. ಏಕೆಂದರೆ ಪ್ರಮುಖ ಬಂದರುಗಳಲ್ಲಿ ಕೆಲವು ಪ್ರಮುಖ ಯೂನಿಯನ್‌ಗಳು ಭಾಗವಹಿಸಲಿಲ್ಲ. ಆದರೆ ಪರದೀಪ್, ತೂತುಕುಡಿ, ಕೊಲ್ಕತ, ಹಲ್ದಿಯ, ವಿಶಾಖಪಟ್ಟಣಂ ಮತ್ತು ಕೊಚ್ಚಿ ಬಂದರುಗಳಲ್ಲಿ ಸರಕು ಸಾಗಾಣಿಕೆಯನ್ನು ಮುಷ್ಕರ ಬಹುವಾಗಿ ತಟ್ಟಿತು.

ರಸ್ತೆ ಸಾರಿಗೆ ವಲಯದಲ್ಲಿ ಮುಷ್ಕರ ತೀವ್ರ ಪ್ರಭಾವ ಬೀರಿತು. ಇದರಿಂದಾಗಿ ಹಲವು ರಾಜ್ಯಗಳಲ್ಲಿ ಬಂದ್ ನಂತಹ ವಾತಾವರಣ ಉಂಟಾಯಿತು. ಸುಮಾರು 3.5 ಕೋಟಿ ಮಂದಿ ಭಾಗವಹಿಸಿದರು ಎಂದು ಅಂದಾಜು ಮಾಡಲಾಗಿದೆ. ಕೇರಳ, ಬಿಹಾರ, ಒಡಿಶ ಮತ್ತು ಅಸ್ಸಾಂ ನಲ್ಲಿ ಆಟೋಗಳೂ ಸೇರಿದಂತೆ ಸಂಪೂರ್ಣ ಸಾರಿಗೆ ಮುಷ್ಕರ ನಡೆದಿದೆ. ಪಶ್ಚಿಮ ಬಂಗಾಲದಲ್ಲಿ 80%ದಷ್ಟು, ಪಂಜಾಬ್, ಕರ್ನಾಟಕ, ಮಹಾರಾಷ್ಟ್ರ, ಝಾರ್ಖಂಡಿನ ಹಲವು ಜಿಲ್ಲೆಗಳಲ್ಲಿ ಸಾರಿಗೆಯ ಮೇಲೆ ಮುಷ್ಕರ ತೀವ್ರ ಪ್ರಭಾವ ಬೀರಿತು.

ಕಟ್ಟಡ ಕಾರ್ಮಿಕರು ದೇಶಾದ್ಯಂತ ಭಾರೀ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಮತ್ತು ಮತಪ್ರದರ್ಶನಗಳಲ್ಲಿ ಭಾಗವಹಿಸಿದರು. ಚಹಾ, ಕಾಫಿ, ರಬ್ಬರ್ ತೋಟ ಕಾರ್ಮಿಕರು ಅಸ್ಸಾಂ, ಪಶ್ಚಿಮ ಬಂಗಾಲ ಮತ್ತು ಕೇರಳಗಳಲ್ಲಿ ಸಂಪೂರ್ಣವಾಗಿ ಮತ್ತು ತಮಿಳುನಾಡು ಮತ್ತು ಕರ್ನಾಟಕದಲ್ಲಿ ದೊಡ್ಡ ಸಂಖ್ಯೆಗಳಲ್ಲಿ ಭಾಗವಹಿಸಿದರು.

ಮುಷ್ಕರದ ಯಶಸ್ಸಿನಲ್ಲಿ ಮಹಿಳಾ ಸ್ಕೀಂ ನೌಕರರ ಪಾತ್ರ ಎದ್ದು ಕಾಣುವಂತಿತ್ತು. ಕಾರ್ಮಿಕ ಆಂದೋಲನ ದುರ್ಬಲವಾಗಿರುವ ರಾಜ್ಯಗಳಲ್ಲೂ ಮುಷ್ಕರದಲ್ಲಿ ಮತ್ತು ಮತಪ್ರದರ್ಶನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಅವರು ಭಾಗವಹಿಸಿದರು.

ವಿಮಾ ನೌಕರರು ಎಲ್ಲೆಡೆಗಳಲ್ಲಿ ಸಂಪೂರ್ಣವಾಗಿ ಮುಷ್ಕರದಲ್ಲಿ ಬಾಗವಹಿಸಿದರು. ರಿಝರ್ವ ಬ್ಯಾಂಕ್, ನಬಾರ್ಡ್ ಸೇರಿದಂತೆ ಲಕ್ಷಾಂತರ ಬ್ಯಾಂಕ್ ನೌಕರರು ಭಾಗವಹಿಸಿದರು. ಗ್ರಾಮೀಣ ಬ್ಯಾಂಕುಗಳ ಅಧಿಕಾರಿಗಳೂ ಹಲವೆಡೆಗಳಲ್ಲಿ ಭಾಗವಹಿಸಿದರು. ಬಿಎಸ್‌ಎನ್‌ಎಲ್ ನೌಕರರ ಮುಷ್ಕರ ಪಶ್ಚಿಮ ಬಂಗಾಲ, ಕೇರಳ ಮತ್ತು ಈಶಾನ್ಯ ರಾಜ್ಯಗಳಲ್ಲಿ ಪೂರ್ಣವಾಗಿತ್ತು, ಇತರೆಡೆಗಳಲ್ಲಿ ಭಾಗಶಃ ಮುಷ್ಕರ ನಡೆಯಿತು.

ಕೇಂದ್ರ ಸರಕಾರದ ವಿವಿಧ ಇಲಾಖೆಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ದುಡಿಯುತ್ತಿರುವ 13 ಲಕ್ಷ ನೌಕರರು ಭಾಗವಹಿಸಿದರು. ಕೇರಳ, ಪಶ್ಚಿಮ ಬಂಗಾಲ, ತಮಿಳುನಾಡು, ಒಡಿಶ, ತೆಲಂಗಾಣ, ಆಂಧ್ರಪ್ರದೇಶ, ಛತ್ತಿಸ್

ಪುಟ 10 ನೋಡಿ















ಕಾರ್ಮಿಕರ ಹಕ್ಕುಗಳಿಗಾಗಿ ದೇಶದ ಹಿತ ರಕ್ಷಣೆಗಾಗಿ –ರಾಜಕೀಯ ಸಮರದ ಆರಂಭ



ಮೊದಲನೆಯ ದಿನ 20ಕೋಟಿಗೂ ಹೆಚ್ಚು ಕಾರ್ಮಿಕರು ಭಾಗವಹಿಸಿದರು. ಎರಡನೇ ದಿನ ಮುಷ್ಕರ ಇನ್ನಷ್ಟು ವ್ಯಾಪಕಗೊಂಡಿತು. ಕಾರ್ಮಿಕರು ಸ್ವಯಂಸ್ಫೂರ್ತಿಯಿಂದಲೇ ಮುಷ್ಕರದಲ್ಲಿ ದೇಶವನ್ನು ಉಳಿಸುವ ದೃಢನಿರ್ಧಾರದೊಂದಿಗೆ ಭಾಗವಹಿಸಿದರು. ಅವರು ತಮ್ಮ ಹಕ್ಕುಗಳಿಗಾಗಿ ಮಾತ್ರವಲ್ಲ, ದೇಶದ ಹಿತರಕ್ಷಣೆಗಾಗಿಯೂ ಈ ಮುಷ್ಕರದಲ್ಲಿ ಭಾಗವಹಿಸಿದ್ದಾರೆ, ಕಾರ್ಮಿಕ ವರ್ಗದ ಸಂಘಟಿತ ಮಧ್ಯಪ್ರವೇಶವನ್ನು ಮುಂದುವರೆಸುವುದು ಈಗ ನಮ್ಮ ಮುಂದಿರುವ ಕಾರ್ಯಭಾರ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಹೇಳಿದ್ದಾರೆ.

"ಈ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ಕೇಂದ್ರ ಸರಕಾರದ ವಿರುದ್ಧ ಜನಗಳ ಆಕ್ರೋಶದ ಉಬ್ಬರವನ್ನು ಬಿಂಬಿಸಿದೆ. ಇದರ ಆಳ, ಮತ್ತು ವಿಸ್ತಾರ ಮೋದಿ ಸರಕಾರದ ಆಳ್ವಿಕೆಯಲ್ಲಿ ಈ ಹಿಂದೆ 2015 ಮತ್ತು 2016ರಲ್ಲಿ ನಡೆದ ಬೃಹತ್ ಸಾರ್ವತ್ರಿಕ ಮುಷ್ಕರಗಳನ್ನೂ ಮೀರಿ ಹೋಗಿದೆ" ಎಂದು ಸಿಐಟಿಯು ಅಧ್ಯಕ್ಷರಾದ ಡಾ.ಕೆ. ಹೇಮಲತಾ ಹೇಳಿದ್ದಾರೆ.

ಆ ಎರಡು ಮುಷ್ಕರಗಳಲ್ಲಿ 15 ಕೋಟಿ ಕಾರ್ಮಿಕರು ಭಾಗವಹಿಸಿದ್ದರು. ರೈತರು, ಕೃಷಿಕೂಲಿಕಾರರು, ದಲಿತರು, ಆದಿವಾಸಿಗಳು ಮುಂತಾದವರ ರಾಷ್ಟ್ರೀಯ ಸಂಘಟನೆಗಳು ಸಕ್ರಿಯ ಬೆಂಬಲ ನೀಡಿ ಗ್ರಾಮೀಣ ಭಾರತದಲ್ಲೂ ಇದು ಪ್ರತಿಧ್ವನಿಸುವಂತೆ ಮಾಡಿದ್ದಾರೆ. ನಿವೃತ್ತ ನೌಕರರ ಸಂಘಟನೆಗಳೂ ಸಕ್ರಿಯವಾಗಿ ಪ್ರಚಾರ ನಡೆಸಿ ಮುಷ್ಕರವನ್ನು ಬೆಂಬಲಿಸಿದ್ದಾರೆ ಎಂದು ಅವರು ಹೇಳಿದ್ದಾರೆ.

ಈ ಬಾರಿಯದ್ದು ಅತ್ಯಂತ ವಿಸ್ತಾರವಾದ ವೇದಿಕೆ. ಇದು ಕಳೆದ ಮೂರೂವರೆ ವರ್ಷಗಳ ನಿರಂತರ, ಸತತ ಹೋರಾಟಗಳ, ಪ್ರತಿಭಟನೆಗಳ ಫಲಶ್ರುತಿ. ರಾಜ್ಯಗಳ ಮಟ್ಟದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲೂ ಮುಷ್ಕರಗಳೂ ಸೇರಿದಂತೆ ಹಲವು ಕಾರ್ಮಿಕ ಹೋರಾಟಗಳು ನಡೆದವು. ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಒಟ್ಟಾಗಿಯೂ, ಪ್ರತ್ಯೇಕವಾಗಿಯೂ ಈ ಎಲ್ಲ ಬೇಡಿಕೆಗಳ ಮೇಲೆ ಹೋರಾಟ ನಡೆಸಿವೆ. ನವಂಬರ್ 2017ರಲ್ಲಿ ಸಂಸತ್ತಿನ ಎದುರು ಮೂರು ದಿನಗಳ 'ಮಹಾಧರಣಿ' ನಡೆದಿದೆ. ಇದರಲ್ಲಿ ಮೂರೂ ದಿನಗಳಲ್ಲಿ 2.8ಲಕ್ಷ ಕಾರ್ಮಿಕರು ಭಾಗವಹಿಸಿದ್ದಾರೆ.

ಮುಂದಿನ ಕಾರ್ಯಭಾರ: ರಾಜ್ಯಗಳಲ್ಲಿ ನಡೆದ ಹೋರಾಟ/ಮುಷ್ಕರಗಳಿಂದಾಗಿ ಕೆಲವು ರಾಜ್ಯ ಸರಕಾರಗಳು ಹಿಮ್ಮೆಟ್ಟಬೇಕಾಗಿ ಬಂದಿದೆ, ಕಾರ್ಮಿಕರ ಕೆಲವು ಬೇಡಿಕೆಗಳನ್ನು ಒಪ್ಪಬೇಕಾಗಿ ಬಂದಿದೆ, ಮೋದಿ ಸರಕಾರ 2014ರಲ್ಲೇ 10 ಸಾರ್ವಜನಿಕ ವಲಯದ 10 ಘಟಕಗಳನ್ನು ಖಾಸಗೀಕರಿಸುವುದಾಗಿ ಪಟ್ಟಿ ಮಾಡಿದ್ದರೂ, ಕಾರ್ಮಿಕರ ಸತತ ಹೋರಾಟಗಳಿಂದಾಗಿ ಅವುಗಳಲ್ಲಿ ಯಾವುದನ್ನೂ ಖಾಸಗೀಕರಿಸಲು ಅದಕ್ಕೆ ಸಾಧ್ಯವಾಗಿಲ್ಲ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ನೆನಪಿಸಿದ್ದಾರೆ.

ಇಷ್ಟೇ ಅಲ್ಲ, ಆರಂಭದಲ್ಲಿ ಬಿಜೆಪಿಯ ಗಮನ ಬೇರೆಡೆಗೆ ಸೆಳೆಯುವ, ವಿಭಜನಕಾರಿ ಮತ್ತು ಸರ್ವಾಧಿಕಾರಶಾಹಿ ಕಾರ್ಯಕತಂತ್ರ ಅದಕ್ಕೆ ಪ್ರಯೋಜನ ತಂದು ಕೊಟ್ಟಿದೆ. ಆದರೆ ಈ ತಂತ್ರಗಳು ಬಹಳ ದಿನ ನಡೆಯಲಿಲ್ಲ. ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಅದು ತನ್ನ ಮೂರು ಸರಕಾರಗಳನ್ನು ಕಳೆದುಕೊಂಡಿದೆ. ಈ ಮೊದಲು ಎಷ್ಟೇ ಕುತಂತ್ರ ಮಾಡಿದರೂ ಕರ್ನಾಟಕದಲ್ಲಿ ಅಧಿಕಾರ ಗಿಟ್ಟಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಅಲ್ಲದೆ 2014ರಲ್ಲಿ ಗೆದ್ದಿದ್ದ 10 ಲೋಕಸಭಾ ಸೀಟುಗಳನ್ನೂ ಕಳಕೊಂಡಿದೆ. ಇವೆಲ್ಲ ಬದಲಾವಣೆಯ ಸಂಕೇತಗಳು.

"ಈ ಮಹಾಮುಷ್ಕರದ ನಂತರದ ದಿನಗಳಲ್ಲಿ ಈ ಸಕಾರಾತ್ಮಕ ಬೆಳವಣಿಗೆಗಳನ್ನು ಮುಂದುವರೆಸಬೇಕು, ರೈತರು, ಕೃಷಿ ಕಾರ್ಮಿಕರು, ಮತ್ತು ಇತರ ಜನವಿಭಾಗಗಳ ಸಂಯೋಜನೆಯೊಂದಿಗೆ ಕಾರ್ಮಿಕ ವರ್ಗದ ಸಂಘಟಿತ ಮಧ್ಯಪ್ರವೇಶ ಮುಂದುವರೆಸುವುದು ಈಗ ನಮ್ಮ ಮುಂದಿರುವ ಕಾರ್ಯಭಾರ" ಎಂದಿದ್ದಾರೆ ತಪನ್ ಸೆನ್.

ಜನವರಿ 19 ರಂದು 'ಕಾರ್ಮಿಕ–ರೈತ ಸೌಹಾರ್ದ ದಿನ'ವನ್ನು ಆಚರಿಸಲಾಗುತ್ತಿದೆ. ಅದನ್ನು ಪರಿಣಾಮಕಾರಿ ಯೋಜನೆ, ಪ್ರಚಾರ ಮತ್ತು ಅಣಿನೆರಿಕೆಯೊಂದಿಗೆ ಮಾಡಬೇಕಾಗಿದೆ. ಇದರಲ್ಲಿ ಕಾರ್ಮಿಕ ವರ್ಗ ಪ್ರಧಾನ ಪಾತ್ರ ವಹಿಸಬೇಕಾಗಿದೆ. ಇದು ಬುಡಮಟ್ಟದ ವರೆಗೂ ನಡೆಯಬೇಕಾಗಿದೆ.

ಇದನ್ನು ಇನ್ನೊಂದು ಪ್ರಮುಖ ರಾಜಕೀಯ ಸಮರದ ಆರಂಭವಾಗಿಯೂ ಕಾಣಬೇಕಾಗಿದೆ ಎಂದು ತಪನ್ ಸೆನ್ ಹೇಳುತ್ತಾರೆ. ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ನವ–ಉದಾರವಾದಿ ವ್ಯವಸ್ಥೆಯನ್ನೂ ಮತ್ತು ಜತೆಗೇ ಅದನ್ನು ನಡೆಸುತ್ತಿರುವವರನ್ನೂ, ಈಗ ಆಳುತ್ತಿರುವವರನ್ನು ಬಯಲಿಗೆಳೆಯಬೇಕಾಗಿದೆ. ಜನತೆಯನ್ನು ಮತ್ತು ದೇಶವನ್ನು ಕಾಪಾಡಲು ಈ ಕೋಮುವಾದಿ–ಸರ್ವಾಧಿಕಾರಶಾಹಿ ಕೂಟದ ಆಳ್ವಿಕೆ ಕೊನೆಗೊಳ್ಳಬೇಕಾದ ಅಗತ್ಯದ ಅರಿವನ್ನು ಜನಗಳಲ್ಲಿ ಮೂಡಿಸಬೇಕಾಗಿದೆ. ಮುಂಬರುವ ರಾಜಕೀಯ ಸಮರದಲ್ಲಿ ವರ್ಗ ಆಂದೋಲನ ಜನಗಳ ಬದುಕಿನ ಮತ್ತು ಜೀವನಾಧಾರದ ಮತ್ತು ಜನಗಳ ಐಕ್ಯತೆಯ ವರ್ಗಪ್ರಶ್ನೆಗಳನ್ನು ರಾಜಕೀಯ ಅಜೆಂಡಾಕ್ಕೆ ಎಳೆದು ತರಬೇಕಾಗಿದೆ. ಆಗ ಮಾತ್ರವೇ ಜನಗಳ ಗಮನವನ್ನು ಬೇರೆಡೆಗೆ ಸೆಳೆದು, ಅವರನ್ನು ವಿಭಜಿಸುವ ಆಳುವ ವರ್ಗಗಳ ಹುನ್ನಾರವನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯ.

ಮತ್ತೆ ತಿರುಗುಬಾಣವಾದ ಬಿಎಂಎಸ್ ಅಪಪ್ರಚಾರ

ಸಂಘ ಪರಿವಾರದ ಸದಸ್ಯನಾಗಿ ವಿಭಜನಕಾರೀ ಸಿದ್ಧಾಂತಕ್ಕೆ ಬದ್ಧವಾಗಿರುವ ಭಾರತೀಯ ಮಜ್ದೂರ್ ಸಭಾ (ಬಿಎಂಎಸ್) ತನ್ನ ರಾಜಕೀಯ ಗುರುಗಳಿಗೆ ವಿಧೆಯತೆಯನ್ನು ಮತ್ತೊಮ್ಮೆ ಪ್ರದರ್ಶಿಸಿದೆ. ಮುಷ್ಕರವನ್ನು ದುರ್ಬಲಗೊಳಿಸಬಹುದೆಂಬ ಭ್ರಮೆಯಿಂದ ಕಾರ್ಮಿಕರಲ್ಲಿ ಗೊಂದಲ ಮೂಡಿಸಲು, ಅವರನ್ನು ವಿಭಜಿಸಲು ಅದು ಹೆಣಗಿತು. ಈ ಹಿಂದೆ ಕಾಂಗ್ರೆಸ್ ನೇತೃತ್ವದ ಸರಕಾರಗಳಿದ್ದಾಗ ಕೇಂದ್ರೀಯ ಕಾರ್ಮಿಕ ಸಂಘಟನೆಗಳೊಂದಿಗೆ ಒಂದು ಜಂಟಿ ಬೇಡಿಕೆ ಪಟ್ಟಿಯನ್ನು ಸಿದ್ಧಗೊಳಿಸುವಲ್ಲಿ ಭಾಗವಹಿಸಿದ್ದ ಈ ಬಿಎಂಎಸ್ ಗೆ ಈಗ ಅವೇ ಬೇಎಡಿಕೆಗಳು 'ರಾಜಕೀಯ'ವಾಗಿ ಕಾಣುತ್ತಿವೆ. ಈ ಹಿಂದೆ ಜಂಟಿ ಹೋರಾಟಗಳಲ್ಲಿ ಯಾವುದೇ ಮುಲಾಜಿಲ್ಲದೆ ಭಾಗವಹಿಸಿದ್ದ ಅದಕ್ಕೆ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಅದು ಈ ಹಿಂದೆ ವಿರೋಧಿಸುತ್ತಿದ್ದ ಧೋರಣಗಳನ್ನೇ ಇನ್ನಷ್ಟು ಆಕ್ರಾಮಕವಾಗಿ ಜಾರಿ ಮಾಡಲಾರಂಭಿಸಿದರೂ, ಕಾರ್ಮಿಕ ಕಾನೂನುಗಳನ್ನು ತುಳಿಯುತ್ತಿದ್ದರೂ, ತ್ರಿಪಕ್ಷೀಯ ಸಮಾಲೋಚನೆಗಳನ್ನು ಮೂಲೆಗೊತ್ತಿದ್ದರೂ, ಈ ಸರಕಾರದ ನಿಲುವು ಅದಕ್ಕೆ 'ಸಕಾರಾತ್ಮಕ'ವಾಗಿ ಕಾಣುತ್ತಿದೆ. ಈ ಬಾರಿಯಂತೂ ಅದು ಕೇಂದ್ರೀಯ ಕಾರ್ಮಿಕ ಸಂಘಟನೆಗಳನ್ನು ಬಿಟ್ಟು ಹೋಗಿದ್ದ ಕೆಲವು ಸಣ್ಣಪುಟ್ಟ ಸಂಘಟನೆಗಳನ್ನು ಸೇರಿಸಿಕೊಂಡು ಒಂದು ವೇದಿಕೆಯನ್ನು ನಿರ್ಮಿಸಿ ಸಾರ್ವತ್ರಿಕ ಮುಷ್ಕರದ ವಿರುದ್ಧ ಸಕ್ರಿಯ ಅಪಪ್ರಚಾರ ನಡೆಸಿತು. ಆದರೆ ಅದರ ಗೋಸುಂಬೆ ಕಸರತ್ತುಗಳನ್ನು ದೇಶದ ಕಾರ್ಮಿಕರು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ ಎಂಬುದು ಈಗ ಮತ್ತೊಮ್ಮೆ ಸಾಬೀತಾಗಿದೆ. ಈ ಬಾರಿಯೂ ಹಲವು ರಾಜ್ಯಗಳಲ್ಲಿ ಬಿಎಂಎಸ್‌ಗೆ ಸೇರಿದ ಕಾರ್ಮಿಕರೂ ಮುಷ್ಕರದಲ್ಲಿ ಭಾಗವಹಿಸಿದ್ದಾರೆ ಎಂದು ಸಿಐಟಿಯು ಹೇಳಿದೆ.


ಬಿಹಾರ ಬಂದ್

ಬೃಹತ್ ಪ್ರಮಾಣದಲ್ಲಿ ಗ್ರಾಮೀಣ ಹರತಾಳ–ಎಐಕೆಎಸ್ ಅಭಿನಂದನೆ

ಅಖಿಲ ಭಾರತ ಕಿಸಾನ್ ಸಭಾ ಕಾರ್ಮಿಕರ ಎರಡು ದಿನಗಳ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲವಾಗಿ 'ಗ್ರಾಮೀಣ ಭಾರತ ಬಂದ್'ಗೆ ಕರೆ ನೀಡಿತ್ತು. ಇದಕ್ಕೆ ದೇಶಾದ್ಯಂತ ಉತ್ಸಾಹಪೂರ್ಣ ಸ್ಪಂದನೆ ದೊರೆತಿದೆ. ಕೇರಳ, ತಮಿಳುನಾಡು, ತೆಲಂಗಾಣ, ಕರ್ನಾಟಕ, ಝಾರ್ಖಂಡ್, ಪಶ್ಚಿಮ ಬಂಗಾಲ, ಒಡಿಶ, ರಾಜಸ್ಥಾನ, ಮಹಾರಾಷ್ಟ್ರ, ಮಧ್ಯಪ್ರದೇಶ, ಮತ್ತು ತ್ರಿಪುರಾದಲ್ಲಿ ಗ್ರಾಮೀಣ ಮುಷ್ಕರ ಅತ್ಯಂತ ಯಶಸ್ವಿಯಾಗಿದೆ. ಬೇರೆ ರಾಜ್ಯಗಳಲ್ಲಿಯೂ ದೊಡ್ಡ ಪ್ರಮಾಣದಲ್ಲಿ ರಾಸ್ತಾರೋಕೋ, ರೈಲ್ ರೋಕೋಗಳು, ಮತಪ್ರದರ್ಶನಗಳು, ಗ್ರಾಮೀಣ ರ್‍ಯಾಲಿಗಳು ನಡೆದಿವೆ. ನಡೆದಿವೆ. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಸಾರಿಗೆ ಸಂಪೂರ್ಣವಾಗಿ ನಿಂತುಹೋಯಿತು. ಭೂಮಿ ಅಧಿಕಾರ್ ಆಂದೋಲನ್ ಮತ್ತು ಅಖಿಲ ಭಾರತ ಕಿಸಾನ್ ಸಂಘರ್ಷ ಸಂಯೋಜನಾ ಸಮಿತಿ ಕೂಡ ಮುಷ್ಕರಕ್ಕೆ ಸೌಹಾರ್ದ ಮತ್ತು ಬೆಂಬಲವನ್ನು ವ್ಯಕ್ತಪಡಿಸಿದ್ದವು.

ಇದು ದೇಶಾದ್ಯಂತ ಕಾರ್ಮಿಕ ವರ್ಗದಂತೆ, ರೈತಾಪಿ ಜನಗಳಲ್ಲೂ ನವ–ಉದಾರವಾದಿ ಧೋರಣೆಗಳ ಹರಡಿರುವ ಆಕ್ರೋಶವನ್ನು ಬಿಂಬಿಸುತ್ತದೆ. ಏಕೆಂದರೆ ಈ ಧೋರಣೆಗಳಂದಾಗಿಯೇ ಕೃಷಿ ಬಿಕ್ಕಟ್ಟು ನಿರ್ಮಾಣವಾಗಿದೆ, ಸಾಲಹೊರೆ, ನಿರುದ್ಯೋಗ ಮತ್ತು ಬೆಲೆಯೇರಿಕೆಗಳಿಗೂ ಈ ಧೋರಣೆಗಳೆ ಕಾರಣ. ಮೋದಿ ಸರಕಾರದ ರೈತ–ವಿರೋಧಿ, ಕಾರ್ಮಿಕ–ವಿರೋಧಿ ಧೋರಣಗಳ ಬಗ್ಗೆ ತಮ್ಮ ತೀವ್ರ ಅಸಂತೃಪ್ತಿಯನ್ನು ವ್ಯಕ್ತಪಡಿಸಿರುವ ಜನತೆಯನ್ನು ಎಐಕೆಎಸ್ ಅಭಿನಂದಿಸಿದೆ.


ಮಹಾರಾಷ್ಟ್ರ



ಝಾರ್ಖಂಡ್



....ಹೊಸ ಇತಿಹಾಸ ನಿರ್ಮಿಸಿದ ಕಾರ್ಯಾಚರಣೆ

ಪುಟ 8 ರಿಂದ

ಗಡ, ಝಾರ್ಖಂಡ್, ಹರ್ಯಾಣ, ಅಸ್ಸಾಂ, ಮತ್ತು ತ್ರಿಪುರಾ ಸೇರಿದಂತೆ ಇತರ ಈಶಾನ್ಯ ರಾಜ್ಯಗಳಲ್ಲಿ ನೌಕರರು ಸಂಪೂರ್ಣವಾಗಿ ಭಾಗವಹಿಸಿದರು. ಇತರೆಡೆಗಳಲ್ಲಿ 60 ರಿಂದ 80% ಭಾಗವಹಿಸಿದರು. ರಾಜ್ಯ ಸರಕಾರಿ ನೌಕರರೂ ಹಲವು ರಾಜ್ಯಗಳಲ್ಲಿ ಭಾಗವಹಿಸಿದರು. ಕೇರಳದಲ್ಲಿ 90%, ಹರ್ಯಾಣ ಮತ್ತು ಇತರ ಕೆಲವು ರಾಜ್ಯಗಳಲ್ಲಿ 80% ರಾಜ್ಯ ಸರಕಾರೀ ನೌಕರರು ಭಾಗವಹಿಸಿದರು. ಉತ್ತರ ಪ್ರದೇಶದಲ್ಲಿ 60%ಕ್ಕೂ ಹೆಚ್ಚು ಮತ್ತು ಹಿಮಾಚಲ ಪ್ರದೇಶದಲ್ಲಿ 40% ದಷ್ಟು ನೌಕರರು ಭಾಗವಹಿಸಿದರು.

ಹಲವು ರಾಜ್ಯಗಳಲ್ಲಿ ನಿವೃತ್ತ ನೌಕರರು, ಇಪಿಎಸ್–95 ಪೆನ್ಷನ್‌ದಾರರೂ ಸಾರ್ವತ್ರಿಕ ಮುಷ್ಕರಕ್ಕೆ ಸೌಹಾರ್ದ ಮತ್ತು ಬೆಂಬಲ ವ್ಯಕ್ತಪಡಿಸಿದರು., ಮತಪ್ರದರ್ಶನಗಳು ಮತ್ತು ರ್‍ಯಾಲಿಗಳಲ್ಲಿ ಬಾಗವಹಿಸಿದರು.

ವಿವಿಧ ರಾಜ್ಯಗಳಲ್ಲಿ

ಅಸ್ಸಾಂನಲ್ಲಿ ಮುಷ್ಕರ ಹಿಂದೆಂದೂ ಕಾಣದ ರೀತಿಯಲ್ಲಿ ನಡೆದಿದೆ. ಎಲ್ಲ ಚಹಾ ತೋಟಗಳು ಮುಚ್ಚಿದ್ದವು. ತೈಲಶುದ್ಧೀಕರಣ ಸ್ಥಾವರಗಳೂ ಮುಚ್ಚಿದ್ದವು. ಹಲವು ರಿಫೈನರಿಗಳ ಮುಂದೆ ಖಾಯಂ ಮತ್ತು ಕಾಂಟ್ರಾಕ್ಟ್ ಕಾರ್ಮಿಕರು ಪಿಕೆಟಿಂಗ್ ನಡೆಸಿದರು. ರೈತರು, ಕೃಷಿಕೂಲಿಕಾರರು, ವಿದ್ಯಾರ್ಥಿಗಳು, ಮಹಿಳೆಯರು ರಾಜ್ಯಾದ್ಯಂತ ರೈಲ್ ರೋಕೋ ನಡೆಸಿದರು. ಬಿಜೆಪಿ ರಾಜ್ಯ ಸರಕಾರದ ಪೋಲೀಸರು ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಶರ್ಮ ಸೇರಿದಂತೆ ನೂರಾರು ಕಾರ್ಯಕರ್ತರನ್ನು ಬಂಧಿಸಿದರು.

ಬಿಹಾರ್ನಲ್ಲಿ ಮುಷ್ಕರಕ್ಕೆ ಭಾರೀ ಸ್ಪಂದನೆ ದೊರೆತಿದೆ. ರಸ್ತೆ ಸಾರಿಗೆ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿತು. ಸಮಸ್ತಿಪುರ, ಖಗರಿಯ, ದರ್ಭಂಗ, ಜಮುಯಿ, ಬೇಗುಸರಾಯ್, ಮತ್ತಿತರ ಜಿಲ್ಲೆಗಳಲ್ಲೂ ಸ್ಕೀಮ್ ನೌಕರರು, ಕಟ್ಟಡ ಕಾರ್ಮಿಕರು, ಬೀಡಿ ಕಾರ್ಮಿಕರು ದೊಡ್ಡ–ದೊಡ್ಡ ಮುಷ್ಕರ ರ್‍ಯಾಲಿಗಳನ್ನು ನಡೆಸಿದರು. ಜನವರಿ 9ರಂದು ರಾಜ್ಯದ ಎಡ ಪಕ್ಷಗಳು ಈ ಮುಷ್ಕರಕ್ಕೆ ಬೆಂಬಲವಾಗಿ, ಜತೆಗೆ ರೈತರು ಮತ್ತು ಕೃಷಿ ಕೂಲಿಕಾರರ ಬೇಡಿಕೆಗಳ ಈಡೇರಿಕೆಗಾಗಿ ಹಾಗೂ ರಾಜ್ಯದಲ್ಲಿ ಹದಗೆಡುತ್ತಿರುವ ಕಾನೂನು–ವ್ಯವಸ್ಥೆಯ ವಿರುದ್ಧ ರಾಜ್ಯವ್ಯಾಪಿ ಬಂದ್ ಕರೆ ನೀಡಿದರು. ಸಂಪೂರ್ಣ ಬಿಹಾರ್ ಬಂದ್ ನಡೆಯಿತು.

ದಿಲ್ಲಿ ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿ ಕೈಗಾರಿಕಾ ಕಾರ್ಮಿಕರು ಮತ್ತು ನೌಕರರು ದೊಡ್ಡ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಭಾಗವಹಿಸಿದರು. ಸಾರ್ವಜನಿಕ ವಲಯದ ಸಿಇಎಲ್ ನಲ್ಲಿ ಕೇವಲ 5 ಕಾರ್ಮಿಕರು ಕೆಲಸಕ್ಕೆ ಹೋದರು. ದೇಶದ ರಾಜಧಾನಿಯ ಸುತ್ತಮುತ್ತಲ ಸುಮಾರು ಎಲ್ಲ ಕೈಗಾರಿಕಾ ಪ್ರದೇಶಗಳು ಸಂಪೂರ್ಣವಾಗಿ ಮುಚ್ಚಿದ್ದವು. ಮುಷ್ಕರ ನಡೆಸಿದ ಕಾರ್ಮಿಕರು ಮೆರವಣಿಗೆಗಳು, ಮತಪ್ರದರ್ಶನಗಳನ್ನು ನಡೆಸಿದರು. ಇಂತಹ ಪ್ರತಿಯೊಂದು ಪ್ರದರ್ಶನದಲ್ಲೂ 2000–3000 ಕಾರ್ಮಿಕರು ಭಾಗವಹಿಸಿದರು. ದಿಲ್ಲಿ ಮತ್ತು ಜವಹರಲಾಲ್ ನೆಹರೂ ವಿಶ್ವವಿದ್ಯಾಲಯಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಂಪೂರ್ಣವಾಗಿ ಮುಷ್ಕರದಲ್ಲಿ ಪಾಲ್ಗೊಂಡರು. ಈ ಎರಡೂ ವಿಶ್ವವಿದ್ಯಾಲಯಗಳೂ ಮುಚ್ಚಿದ್ದವು.

ಪ್ರಧಾನ ಮಂತ್ರಿಗಳ ರಾಜ್ಯ **ಗುಜರಾತ್** ಇತ್ತೀಚಿನ ದಶಕಗಳಲ್ಲಿ ಕಂಡಿರದಂತಹ ಜಂಟಿ ಮುಷ್ಕರ ಕಾರ್ಯಾಚರಣೆಗಳಿಗೆ ಸಾಕ್ಷಿಯಾಯಿತು. ಕಾರ್ಮಿಕ ಸಂಘಟನೆಗಳು ವ್ಯಾಪಕ ಪ್ರಚಾರಾಂದೋಲನ ನಡೆಸಿದವು. ಬರೋಡ, ಸುರತ್, ಭಾವನಗರ, ರಾಜಕೋಟ್, ಜುನಾಗಡ್, ಅಹಮದಾಬಾದ್‌ನ ಇಂಜಿನಿಯರಿಂಗ್ ಉದ್ದಿಮೆಗಳ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಭಾಗವಹಿಸಿದರು. ಇವರಲ್ಲಿ ಹೆಚ್ಚಿನವರು ಯಾವುದೇ ಕಾರ್ಮಿಕ ಸಂಘಟನೆಯ ಅಡಿಯಲ್ಲಿ ಇಲ್ಲ ಎಂಬುದು ಗಮನಾರ್ಹ. ಬಿಜೆಪಿ ರಾಜ್ಯ ಸರಕಾರದ ಬೆದರಿಕೆಗಳಿಗೆ ಜಗ್ಗದೆ ಬಹುಪಾಲು ಜಿಲ್ಲೆಗಳಲ್ಲಿ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಮುಷ್ಕರದಲ್ಲಿ ಪಾಲ್ಗೊಂಡು ಬೃಹತ್ ಮತಪ್ರದರ್ಶನಗಳನ್ನು ನಡೆಸಿದರು. ಮೊತ್ತಮೊದಲ ಬಾರಿಗೆ ಮಧ್ಯಾಹ್ನದ ಊಟದ ನೌಕರರು ಮುಷ್ಕರದಲ್ಲಿ ಭಾಗವಹಿಸಿದರು. ಬಿಎಂಎಸ್ ಇದು 'ರಾಜಕೀಯ ಮುಷ್ಕರ' ಎಂದು ವ್ಯಾಪಕವಾದ ಅಪಪ್ರಚಾರ ನಡೆಸಿದ್ದರೂ ರಾಜ್ಯದ ಮೂರು ಐಸಿಡಿಎಸ್ ಯೋಜನೆಗಳಲ್ಲಿನ ಬಿಎಂಎಸ್ ಸಂಘದ ಅಂಗನವಾಡಿ ಕಾರ್ಯಕರ್ತೆಯರೂ ಮುಷ್ಕರದಲ್ಲಿ ಪಾಲ್ಗೊಂಡರು. ರಾಜ್ಯದ 8 ನಗರಗಳಲ್ಲಿ, ಅಹಮದಾಬಾದ್, ಸುರತ್, ರಾಜಕೋಟ್, ಜುನಾಗಡ್, ಬರೋಡ, ಣಂದ್ ಮತ್ತು ಪಲಂಪುರದಲ್ಲಿ ದೊಡ್ಡ ರ್‍ಯಾಲಿಗಳು ನಡೆದು ಪ್ರತಿಯೊಂದರಲ್ಲೂ 3000ದಿಂದ 8000 ಕಾರ್ಮಿಕರು ಭಾಗವಹಿಸಿದರು. ಹರ್ಯಾಣದ ಆಧುನಿಕ ಉದ್ದಿಮೆಗಳ ಪಟ್ಟಣವಾದ ಗುರ್ಗಾಂವ್‌ನಲ್ಲಿ ಮುಷ್ಕರಕ್ಕೆ ಕಾರ್ಮಿಕರಿಂದ ಉತ್ತಮ ಸ್ಪಂದನೆ ದೊರೆತಿದೆ. ಹೊಂಡಾ ಕಂಪನಿ ಮೂರು ದಿನಗಳ ರಜೆ ಘೋಷಿಸಿತು. ಮಾರುತಿ ಬಿಟ್ಟು ಹೆಚ್ಚಿನ ದೊಡ್ಡ ಉದ್ದಿಮೆಗಳು ಮುಚ್ಚಿದ್ದವು. ಈ ಪ್ರದೇಶದ ಸಣ್ಣ ಉದ್ದಿಮೆಗಳಲ್ಲಿನ ಕಾರ್ಮಿಕರು ಮುಷ್ಕರದಲ್ಲಿ ಮತ್ತು ಪ್ರತಿಭಟನಾ ಪ್ರದರ್ಶನಗಳಲ್ಲಿ ಭಾಗವಹಿಸಿದರು. ಜನವರಿ 8ರಂದು ಕಾರ್ಮಿಕರ ಒಂದು ಬೃಹತ್ ರ್‍ಯಾಲಿ ನಡೆಯಿತು. ಸರಕಾರೀ ವಲಯ, ರಸ್ತೆ ಸಾರಿಗೆ, ಮತ್ತು ಅಸಂಘಟಿತ ವಲಯಗಳಾದ ಇಟ್ಟಿಗೆಗೂಡು, ಅರಣ್ಯ, ಗ್ರಾಮ ಚೌಕೀದಾರ್, ಕಟ್ಟಡ ನಿರ್ಮಾಣ ಮುಂತಾದ ವಲಯಗಳ ಕಾರ್ಮಿಕರು, ನೌಕರರು ದೊಡ್ಡ ರೀತಿಯಲ್ಲಿ ಮುಷ್ಕರದಲ್ಲಿ ಸೇರಿಕೊಂಡರು.

ಇತ್ತೀಚೆಗೆ ಬಿಜೆಪಿಯನ್ನು ಅಧಿಕಾರದಿಂದ ಇಳಿಸಿದ **ರಾಜಸ್ಥಾನ**ದಲ್ಲಿಯೂ ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿಯೂ ಮುಷ್ಕರ ನಡೆದಿದೆ. ಬಹುರಾಷ್ಟ್ರೀಯ ಕಂಪನಿಗಳ ಪ್ರಾಬಲ್ಯ ಇರುವ ನೀಮ್ರಣ ಕೈಗಾರಿಕಾ ಪ್ರದೇಶದಲ್ಲಿ ಪೋಲಿಸ್ ದಮನದ ನಡುವೆಯೂ ಇದು ನಡೆದಿರುವುದು ಗಮನಾರ್ಹ. ರಾಜ್ಯಾದ್ಯಂತ ಮತಪ್ರದರ್ಶನಗಳು, ಮೆರವಣಿಗೆಗಳು ನಡೆದಿವೆ.

ಹಿಮಾಚಲ ಪ್ರದೇಶದಲ್ಲಿ ಸ್ಕೀಮ್ ನೌಕರರು, ಮನರೇಗ ಕಾರ್ಮಿಕರು, ಜಲವಿದ್ಯುತ್ ಯೋಜನೆಯ ಕಾರ್ಮಿಕರು ಮತ್ತು ಕೈಗಾರಿಕಾ ಕಾರ್ಮಿಕರೂ ಮುಷ್ಕರದಲ್ಲಿ ಭಾಗವಹಿಸಿದರು. ಹಲವು ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ರ್‍ಯಾಲಿಗಳು ನಡೆದವು.

ಜಮ್ಮು ಮತ್ತು ಕಾಶ್ಮೀರದಲ್ಲಿನ ಕಷ್ಟಕರ ರಾಜಕೀಯ ಪರಿಸ್ಥಿತಿಯಲ್ಲಿಯೂ ಅಸಂಘಟಿತ ವಲಯದ ಕಾರ್ಮಿಕರು ಮತ್ತು ಸ್ಕೀಮ್ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಮುಷ್ಕರದಲ್ಲಿ ಭಾಗವಹಿಸಿದರು. ಅಂತರ–ರಾಜ್ಯ ಬಸ್‌ಗಳು ಸಂಚರಿಸಲಿಲ್ಲ. ಜಮ್ಮುನಲ್ಲಿ ನಡೆದ ಮೆರವಣೀಗೆಯಲ್ಲಿ ಸ್ಕೀಮ್ ನೌಕರರು, ರೈಲ್ವೆ ಕಾಟ್ರಾಕ್ಟ್ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಕಲ್ಲಿದ್ದಲು ಗಣಿ ಕಾರ್ಮಿಕರು, ಜಲವಿದ್ಯುತ್ ಪ್ರಾಜೆಕ್ಟ್ ಕಾರ್ಮಿಕರು, ಬೀದಿ ವ್ಯಾಪಾರಿಗಳು, ಜತೆಗೆ ಮಧ್ಯಮ ವರ್ಗದ ನೌಕರರೂ ಭಾಗವಹಿಸಿದರು. ಕಾಶ್ಮೀರ ಕಣಿವೆಯ ಸುಮಾರಾಗಿ ಎಲ್ಲ ಜಿಲ್ಲೆಗಳಲ್ಲೂ ಪ್ರತಿಭಟನಾ ಪ್ರದರ್ಶನಗಳು ನಡೆದವು.

ಝಾರ್ಖಂಡ ರಾಜ್ಯದ ಬೊಕಾರೊ, ರಾಂಚಿ, ಆದಿತ್ಯಪುರ, ಗಮ್ಹರಿಯ ಕೈಗಾರಿಕಾ ಪ್ರದೇಶಗಳು ಮುಷ್ಕರದಿಂದಾಗಿ ಸುಮಾರು ಮುಚ್ಚಿ ಹೋಗಿದ್ದವು. ಔಷಧಿ ಉದ್ದಿಮೆ ಮುಚ್ಚಿತ್ತು. ಪಕುರ್, ಸಾಹೇಬ್ ಗಂಜ್ ಮತ್ತು ಛತ್ರಾದ ಕಲ್ಲು ಗಣಿ ಕಾರ್ಮಿಕರು, ಲೋಹಾರ್ ದಾಗದ ಬಾಕ್ಸೈಟ್ ಗಣಿ ಕಾರ್ಮಿಕರು ಹಾಗೂ ತಾಮ್ರದ ಗಣಿ ಮತ್ತು ಉದ್ದಿಮೆಯ ಕಾರ್ಮಿಕರೂ ಮುಷ್ಕರದಲ್ಲಿ ಭಾಗವಹಿಸಿದರು.

ಕರ್ನಾಟಕದಲ್ಲಿ 30ಲಕ್ಷಕ್ಕೂ ಹೆಚ್ಚು ಕೈಗಾರಿಕಾ ಕಾರ್ಮಿಕರು, ಸಾರ್ವಜನಿಕ ವಲಯದ ದೂರವಾಣಿ, ವಿಮಾ, ಬ್ಯಾಂಕ್ ನೌಕರರು, ಅಸಂಘಟಿತ ವಲಯದ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು (ಈ ಬಗ್ಗೆ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಪ್ರತ್ಯೇಕ ವರದಿಯನ್ನು ನೋಡಿ).

ಕೇರಳದಲ್ಲಿ, ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶವನ್ನು ಕುರಿತಂತೆ ಬಿಜೆಪಿ ಸೃಷ್ಟಿಸಿರುವ ವ್ಯಾಪಕ ಗಲಭೆಗಳನ್ನೂ ಮೀರಿ ಈ ಮುಷ್ಕರ ಕುರಿತಂತೆ ಜಂಟಿ ಪ್ರಚಾರಾಂದೋಲನ ರಾಜ್ಯದ ಮೂಲೆ–ಮೂಲೆಗೂ ತಲುಪಿತ್ತು. ಸಂಪೂರ್ಣ ಮುಷ್ಕರ ನಡೆಯಿತು. 32 ಸ್ಥಳಗಳಲ್ಲಿ ಸಾಮೂಹಿಕ ಸಂಘಟನೆಗಳ ಸದಸ್ಯರು ಕಾರ್ಮಿಕರೊಂದಿಗೆ ರೈಲು ಪಿಕೆಟಿಂಗ್ ನಡೆಸಿದರು. ತಿರುವನಂತಪುರ, ಕೊಚ್ಚಿ ಮತ್ತು ಕೊಹಿಕ್ಕೋಡ್ ವಿಮಾನ ನಿಲ್ದಾಣಗಳಲ್ಲಿನ ಸಿಬ್ಬಂದಿ ಮುಷ್ಕರದಲ್ಲಿ ಭಾಗವಹಿಸಿದ್ದರಿಂದ ವಿಮಾನಯಾನಗಳಲ್ಲಿ ವ್ಯತ್ಯಯ ಉಂಟಾಯಿತು. ರಾಜ್ಯಾದ್ಯಂತ ನಡೆದ ಪ್ರಚಾರಾಂದೋಲನದಿಂದಾಗಿ ಜನಗಳ ಬೆಂಬಲ ದೊರೆತಿತ್ತು. ಬಸ್ಸುಗಳಲ್ಲಿ ಸಂಚರಿಸುವ ಜನಗಳ ಸಂಖ್ಯೆ ಕಡಿಮೆಯಿತ್ತು. ರಾಜ್ಯಾದ್ಯಂತ 483 'ಮುಷ್ಕರ ಕೇಂದ್ರ'ಗಳನ್ನು ತೆರೆಯಲಾಗಿತ್ತು. ಇಲ್ಲಿ ಸಾವಿರಾರು ಕಾರ್ಮಿಕರು ನೆರೆದರು. 48 ಗಂಟೆಗಳ ಕಾಲವೂ ಈ ಕೇಂದ್ರಗಳು ಸಕ್ರಿಯವಾಗಿದ್ದವು.

ಮಧ್ಯಪ್ರದೇಶದಲ್ಲಿ, ಅಂಗನವಾಡಿ, ಆಶಾ, ಮಧ್ಯಾಹ್ನದ ಊಟದ ನೌಕರರು ಸಂಪೂರ್ಣವಾಗಿ ಮುಷ್ಕರದಲ್ಲಿ ಭಾಗವಹಿಸಿದರು. ಜತೆಗೆ ಸಿಮೆಂಟ್ ಮತ್ತಿತರ ಖಾಸಗಿ ಉದ್ದಿಮೆಗಳಲ್ಲಿನ ಸಾವಿರಾರು ಕಾರ್ಮಿಕರು ಭಾಗವಹಿಸಿದರು. ಹೆವಿ ಇಂಜಿನಿಯರಿಂಗ್ ಉದ್ದಿಮೆಯ ಕಾರ್ಮಿಕರಲ್ಲಿ 75% ಮುಷ್ಕರದಲ್ಲಿ ಪಾಲ್ಗೊಂಡರು. ಇಂದೋರ್, ನೀಮುಖ್ ಮುಂತಾದ ಕೈಗಾರಿಕಾ ಸಮೂಹಗಳಿರುವಲ್ಲಿ ದುಡಿಯುತ್ತಿರುವ ಕಾರ್ಮಿಕರು, ಎನ್ ಎಫ್ ಐ ಎಲ್ ನ ಕಾಂಟ್ರಾಕ್ಟ್ ಕಾರ್ಮಿಕರು ಭಾಗವಹಿಸಿದರು. ರಾಜ್ಯದಲ್ಲಿ ಸಾರಿಗೆ ಕಾರ್ಮಿಕರ ಸಂಘಟನೆಗಳಿಲ್ಲದಿದ್ದರೂ ಸಿಐಟಿಯುನ ವ್ಯಾಪಕ ಪ್ರಚಾರದಿಂದಾಗಿ 22 ಜಿಲ್ಲೆಗಳಲ್ಲಿ ಬಸ್ ಸಂಚಾರ ಸ್ಥಗಿತಗೊಂಡಿತು. ರಾಜಧಾನಿ ಭೋಪಾಲ್‌ನಲ್ಲೂ ಸರಕಾರದ ಒತ್ತಡ ಇದ್ದರೂ 70% ಬಸ್ಸುಗಳು ಸಂಚರಿಸಲಿಲ್ಲ. ರಾಜ್ಯದ ಕಲ್ಲಿದ್ದಲು ಗಣಿಗಳಲ್ಲಿ ಮುಷ್ಕರ ಬೃಹತ್ ಪ್ರಮಾಣದಲ್ಲಿ ನಡೆಯಿತು.

ಛತ್ತಿಸ್‌ಗಡದಲ್ಲಿ, ಬಾಲ್ಕೊದಲ್ಲಿ 95%, ಹಿರ್ರಿ ಮತ್ತು ನಂದಿನಿ ಗಣಿಗಳಲ್ಲಿ 90% ಮತ್ತು ಕಲ್ಲಿದ್ದಲು ಗಣಿಗಳಲ್ಲಿ 85% ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು. ಅಂಗನವಾಡಿ, ಮಧ್ಯಾಹ್ನದ ಊಟ ನೌಕರರಲ್ಲಿ 60% ಭಾಗವಹಿಸಿದರೆ, ಬೀಡಿ, ರೈಸ್ ಮಿಲ್, ಲೋಡಿಂಗ್–ಅನ್ ಲೋಡಿಂಗ್ ಕಾರ್ಮಿಕರಲ್ಲಿ ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕಾರ್ಮಿಕರು ಭಾಗವಹಿಸಿದರು. ಭಿಲಾಯಿ ಉಕ್ಕು ಕಾರ್ಖಾನೆಯಲ್ಲಿ ಭಾಗಶಃ ಮುಷ್ಕರ ನಡೆಯಿತು.

ಮಹಾರಾಷ್ಟ್ರದಲ್ಲಿ, ಮುಂಬೈಯಲ್ಲಿ ಬಸ್ ಸಂಚಾರ ಸಂ ಪೂರ್ಣಸ್ಥಗಿತಗೊಂಡಿತು. ಬೋಷ್, ಸಿಯಟ್, ಕ್ರಾಂಪ್ಟನ್ ಮುಂತಾದ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಸಂಪೂರ್ಣ ಮುಷ್ಕರ ನಡೆಯಿತು. ರಿಲಯಂಸ್ ಇಂಡಸ್ಟ್ರೀಸ್ ನ ಸಾವಿರಾರು ಖಾಯಂ ಮತ್ತು ಕಾಂಟ್ರಾಕ್ಟ್ ಕಾರ್ಮಿಕರೂ ಮುಷ್ಕರದಲ್ಲಿ ಭಾಗವಹಿಸಿದರು. ಪುಣೆ, ನಾಶಿಕ್, ಔರಂಗಾಬಾದ್, ಕೊಲ್ಹಾಪುರ, ಇಚಲ್ ಕರಂಜಿ ಕೈಗಾರಿಕಾ ಪ್ರದೇಶಗಳಲ್ಲಿ ಮುಷ್ಕರ ಪ್ರಭಾವ ಬೀರಿತು. ಹೆದ್ದಾರಿಗಳಲ್ಲಿ ಹಲವೆಡೆ ರಸ್ತೆ ತಡೆಗಳು ನಡೆದವು. ಶೋಲಾಪುರದಲ್ಲಿ ಒಂದು ಬೃಹತ್ ರ್‍ಯಾಲಿ ಯೋಜಿಸಲಾಗಿತ್ತು. ಆದರೆ ಪ್ರಧಾನಿಗಳ ಭೇಟಿಯಿಂದಾಗಿ ಅದಕ್ಕೆ ಅನುಮತಿ ನಿರಾಕರಿಸಲಾಯಿತು.

ಮಣಿಪುರದಲ್ಲಿ ಬೀದಿಗಳು ಬಿಕೋ ಅನ್ನುತ್ತಿದ್ದವು. ವಾಹನ ಸಂಚಾರ ಸ್ಥಗಿತಗೊಂಡಿತು, ಶಿಕ್ಷಣ ಸಂಸ್ಥೆಗಳು ಮುಚ್ಚಿದ್ದವು. ಎಲ್ಲ ಮಾರುಕಟ್ಟೆಗಳು ಮುಚ್ಚಿದ್ದವು. ಹಲವೆಡೆಗಳಲ್ಲಿ ರಸ್ತೆ ತಡೆ– ಮತಪ್ರದರ್ಶನಗಳು ನಡೆದವು.

ಒಡಿಶಾದಲ್ಲಿ ಬಂದ್ ರೀತಿಯ ವಾತಾವರಣ ಉಂಟಾಯಿತು. ರಸ್ತೆ ಸಾರಿಗೆ ಸಂಪೂರ್ಣ ಸ್ಥಗಿತಗೊಂಡಿತು. ಸಿಮೆಂಟ್ ಮತ್ತು ಇಂಜಿನಿಯರಿಂಗ್ ವಲಯಗಳಲ್ಲಿ 80% ಕಾರ್ಮಿಕರು ಭಾಗವಹಿಸಿದರು, ನಾಲ್ಕೊ, ಬಂದರು ಮತ್ತು ಇಂಡಿಯನ್ ಆಯಿಲ್‌ನಲ್ಲೂ 80%ಕ್ಕಿಮತ ಹೆಚ್ಚು ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು. ಸ್ಕೀಮ್ ನೌಕರರಂತೂ ಪೂರ್ಣವಾಗಿ ಭಾಗವಹಿಸಿದರು. ಬಿಜೆಪಿ ಬಿಟ್ಟು ಎಲ್ಲ ರಾಜಕೀಯ ಪಕ್ಷಗಳು, ರಾಜ್ಯದ ಆಳುವ ಪಕ್ಷವಾದ ಬಿಜೆಡಿ ಕೂಡ ಕಾರ್ಮಿಕರಿಗೆ ಬೆಂಬಲ ನೀಡಿದವು. ಹಲವೆಡೆಗಳಲ್ಲಿ ರಾಸ್ತಾರೋಕೋ, ರೈಲ್ ರೋಕೋಗಳು ನಡೆದವು.

ಪಂಜಾಬಿನಲ್ಲಿ ಮತ್ತು ಚಂಡೀಗಡದಲ್ಲಿ ಸಾರಿಗೆ ಮತ್ತು ವಿದ್ಯುಚ್ಛಕ್ತಿ ನೌಕರರು ಸಂಪೂರ್ಣವಾಗಿ ಭಾಗವಹಿಸಿದರು. ಲುಧಿಯಾನ, ಭಟಿಂಡ, ಅಮೃತಸರದ ಕೈಗಾರಿಕಾ ಪ್ರದೇಶಗಳಲ್ಲಿನ ಕಾರ್ಮಿಕರು ಮುಷ್ಕರ ನಡೆಸಿದರು. ರಾಜ್ಯಾದ್ಯಂತ ಖಾಸಗಿ ಆಸ್ಪತ್ರೆಗಳ ಕಾಂಟ್ರಾಕ್ಟ್ ಕಾರ್ಮಿಕರು ಮುಷ್ಕರ ನಡೆಸಿದರು. ಸಾವಿರಾರು ಸಂಖ್ಯೆಯಲ್ಲಿ ಸ್ಕೀಮ್ ನೌಕರರು ಭಾಗವಹಿಸಿದರು. ಮತಪ್ರದರ್ಶನಗಳು, ರ್‍ಯಾಲಿಗಳು, ರಾಸ್ತಾ–ರೋಕೋಗಳು ಹಲವೆಡೆಗಳಲ್ಲಿ ನಡೆದವು.


ತಮಿಳುನಾಡಿನಲ್ಲಿ ಮುಷ್ಕರ ಅಗಾಧ ಪ್ರಮಾಣದಲ್ಲಿ ನಡೆದಿದೆ. ಪುದುಚೇರಿಯಲ್ಲಿ ಬಂದ್‌ನಂತ್ ವಾತಾವರಣ ನಿರ್ಮಾಣವಾಯಿತು. ಸೇಲಂ ಉಕ್ಕು ಸ್ಥಾವರದಲ್ಲಿ 85%, ಬಿಹೆಚ್‌ಇಎಲ್ ನಲ್ಲಿ 70% ಕಾರ್ಮಿಕರು ಮುಷ್ಕರ ನಡೆಸಿದರು. ನೈವೇಲಿ ಲಿಗ್ನೈಟ್, ತೂತುಕುಡಿ ಬಂದರು ಕಾರ್ಮಿಕರೂ ಮುಷ್ಕರದಲ್ಲಿ ಭಾಗವಹಿಸಿದರು. ಎನ್ ಟಿ ಸಿ ಮಿಲ್ಲುಗಳು ಸೇರಿದಂತೆ ಜವಳಿ ಉದ್ದಿಮೆಯನ್ನು ಮುಷ್ಕರ ಬಹುವಾಗಿ ತಟ್ಟಿತು. ಮದ್ರಾಸ್ ರಫ್ತು ಸಂಸ್ಕರಣ ವಲಯದಲ್ಲಿ, ಉತ್ತರ ಮತ್ತು ದಕ್ಷಿಣ ಚೆನ್ನೈ ನಲ್ಲಿನ ಕೈಗಾರಿಕಾ ಘಟಕಗಳಲ್ಲಿ ಮುಷ್ಕರ ನಡೆದಿದೆ. ಇಂಜಿನಿಯರಿಂಗ್ ಉದ್ದಿಮೆಗಳಲ್ಲಿ ಅರ್ಧದಷ್ಟು ಕಾರ್ಮಿಕರು ಮುಷ್ಕರ ನಡೆಸಿದರು. ಹೆಚ್ಚಿನ ಮಾರುಕಟ್ಟೆಗಳು ಮುಚ್ಚಿದ್ದವು. ತಿರುವಳ್ಳುವರ್ ಉಷ್ಣ ಸ್ಥಾವರ ದಲ್ಲಿ ಸಂಪೂರ್ಣ ಮುಷ್ಕರ ನಡೆಯಿತು. ಚಹಾ, ರಬ್ಬರ್, ಕಾಫಿ ತೋಟಗಳಲ್ಲಿ, ರೈಲ್ವೆ ಗೂಡ್ಶೆಡ್ ಗಳಲ್ಲಿ, ತಿರುಪ್ಪುರ್ ನ ಪ್ರಖ್ಯಾತ ನಿಟ್‌ವೇರ್ ಉದ್ದಿಮೆಯಲ್ಲಿ, ಅಶೋಕ ಲೈಲ್ಯಾಂಡ್ ಮುಂತಾದೆಡೆಗಳಲ್ಲಿ ಮುಷ್ಕರ ನಡೆಯಿತು. 80% ಆಟೋಗಳ ಓಡಾಟ ನಿಂತಿತು.

ತೆಲಂಗಾಣದಲ್ಲಿ 21 ಲಕ್ಷ ಕಾರ್ಮಿಕರು ಮತ್ತು ನೌಕರರು ಮುಷ್ಕರದಲ್ಲಿ ಭಾಗವಹಿಸಿದರು. ಹೈದರಾಬಾದಿನ ಸುತ್ತ–ಮುತ್ತ ಕೈಗಾರಿಕಾ ಘಟಕಗಳಲ್ಲಿ 80% ಮುಷ್ಕರ ನಡೆದಿದೆ. ಎನ್ ಟಿ ಪಿ ಸಿ ಯ 90% ಕಾರ್ಮಿಕರು ಮುಷ್ಕರ ನಡೆಸಿದರು. ಟಿಆರ್‌ಎಸ್ ಸರಕಾರ ಮತ್ತು ಅಡಳಿತದ ಬೆದರಿಕೆಯ ನಡುವೆಯೂ 60% ಸ್ಕೀಮ್ ನೌಕರರು ಮುಷ್ಕರದಲ್ಲಿ ಭಾಗವಹಿಸಿದರು.

ತ್ರಿಪುರಾದಲ್ಲಿ ಬಿಜೆಪಿ ಸರಕಾರ ಬಲಪ್ರಯೋಗ ನಡೆಸಿದರೂ ಅಗರ್ತಲಾ ಸೇರಿದಂತೆ ಹೆಚ್ಚಿನ ಜಿಲ್ಲೆಗಳಲ್ಲಿ ಕೇವಲ 30% ದಷ್ಟು ಬಸ್ ಗಳ ಸಂಚಾರವಿತ್ತು, ಮೂರನೇ ಎರಡಕ್ಕಿಂತಲೂ ಹೆಚ್ಚು ಅಂಗಡಿಗಳು ಮುಚ್ಚಿದ್ದವು. ಶಾಲೆಗಳನ್ನು ತೆರೆದಿಡಲಾಗಿತ್ತು, ಅಧ್ಯಾಪಕರಿದ್ದರು, ಆದರೆ ವಿದ್ಯಾರ್ಥಿಗಳಿರಲಿಲ್ಲ.

ಉತ್ತರಾಖಂಡದಲ್ಲಿ ಸ್ಕೀಮ್ ನೌಕರರಲ್ಲದೆ, ಸರಕಾರೀ ನೌಕರರೂ ಮುಷ್ಕರದಲ್ಲಿ ಭಾಗವಹಿಸಿದರು. ಕೆಲವೆಡೆಗಳಲ್ಲಿ ಹೋಟೆಲ್, ಕಟ್ಟಡ, ಕಾಂಟ್ರಾಕ್ಟ್ ಕಾರ್ಮಿಕರು ಭಾಗವಹಿಸಿದರು. ಸುಮಾರಾಗಿ ಎಲ್ಲ ಜಿಲ್ಲೆಗಳಲ್ಲಿ ರ್‍ಯಾಲಿಗಳು ನಡೆದವು.

ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ಗೂಂಡಾಗಳ ಭಯೋತ್ಪಾದನೆಯಿದ್ದರೂ ಮುಷ್ಕರವನ್ನು ವಿಫಲಗೊಳಿಸುವುದು ಅವರಿಂದಾಗಲಿಲ್ಲ. ಕೊಲ್ಕತಾದ ದೊಡ್ಡ ಉದ್ದಿಮೆಗಳು ಮುಷ್ಕರದಿಂದಾಗಿ ಮುಚ್ಚಿದವು. ಒಂದನ್ನು ಬಿಟ್ಟು ಎಲ್ಲ ಸಣಬು ಗಿರಣಿಗಳು, ಇಂಜಿನಿಯರಿಂಗ್ ವಲಯದ ಉದ್ದಿಮೆಗಳು ಮುಚ್ಚಿದ್ದವು. ಸಾರಿಗೆ ಸುಮಾರಾಗಿ ಸಂಪೂರ್ಣವಾಗಿಯೇ ಸ್ಥಗಿತಗೊಂಡಿತು. 24 ಪರಗಣ, ಹೂಗ್ಲಿ, ಹೌರಾ ಕೈಗಾರಿಕಾ ಪ್ರದೇಶಗಳಲ್ಲಿ ಸಂಪೂರ್ಣ ಮುಷ್ಕರ ನಡೆಯಿತು. ಚಹಾ ತೋಟದ ಕಾರ್ಮಿಕರು ಮುಷ್ಕರ ನಡೆಸಿ ರಾಸ್ತಾರೋಕೋಗಳಲ್ಲಿ ಭಾಗವಹಿಸಿದರು. ಕೊಲ್ಕತಾ ಬಂದರು, ಕಲ್ಲಿದ್ದಲು ಮತ್ತು ಉಕ್ಕು ವಲಯಗಳಲ್ಲಿ ಉತ್ತಮ ಸ್ಪಂದನವಿತ್ತು. ಬೀದಿ ವ್ಯಾಪಾರಿಗಳು ಮುಷ್ಕರದಲ್ಲಿ ಭಾಗವಹಿಸಿದರು. ವಿಶ್ವವಿದ್ಯಾಲಯಗಳು, ಕಾಲೇಜುಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮುಷ್ಕರದಲ್ಲಿ ಭಾಗವಹಿಸಿದರು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಯವರೂ ಸೇರಿದಂತೆ ನೂರಾರು ಕಾರ್ಯಕರ್ತರು ಮತ್ತು ಮುಖಂಡರನ್ನು ಬಂಧಿಸಿ, ಪೋಲೀಸರೊಡನೆ, ಟಿಎಂಸಿ ಗೂಂಡಾಗಳು ದಾಳಿ ನಡೆಸಿದರೂ ಅದನ್ನು ಕಾರ್ಮಿಕರು ಎದುರಿಸಿ ನಿಂತರು. ○



ಚಿರಸ್ಮರಣೀಯ 'ಗೆಲಿಲಿಯೊ' ಲೋಕನಾಥ್

ಲೋಕನಾಥ್ ಬಗ್ಗೆ ಅವರ ನಿಧನದ ನಂತರ ಅವರ ಬಗ್ಗೆ ಬಂದ ಬರಹಗಳಲ್ಲಿ ಅವರ ರಂಗಭೂಮಿಯ ನೆಂಟು ಮಸಕಾಗಿತ್ತು. 'ಸಮುದಾಯ' ಮತ್ತು ರಂಗಭೂಮಿಯ ಜತೆ ಅವರ ಒಡನಾಟದ ಬಗ್ಗೆ ಅವರ ಜತೆ ಹಲವು ನಾಟಕಗಳಲ್ಲಿ ಪಾತ್ರ ವಹಿಸಿದ್ದ ಮತ್ತು 'ಸಮುದಾಯ'ದ ಪ್ರಮುಖ ಸಂಘಟಕರಲ್ಲೊಬ್ಬರೂ ಪ್ರಧಾನ ಕಾರ್ಯದರ್ಶಿಯಾಗಿಯೂ ಹಲವು ವರ್ಷಗಳ ಕಾಲ ದುಡಿದಿದ್ದ ಎಂ.ಜಿ. ವೆಂಕಟೇಶ್ ತಮ್ಮ ನೆನಪನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಇತಿಹಾಸದ 2018 ವರ್ಷದ ಪುಟ ಕೊನೆಗೊಳ್ಳುವಾಗಲೇ ಲೋಕನಾಥ್‌ರ 91 ವರ್ಷಗಳ ಬಾಳಪುಟವನ್ನು ಮುಗಿಸಿದರು. ಲೋಕನಾಥ್‌ರನ್ನು ಅಥವಾ ಯಾವುದೇ ಸಿನಿಮಾ ನಟರನ್ನು ನೆನಪಿಸಿಕೊಳ್ಳುವುದು ಸಿನಿಮಾದಲ್ಲಿ ಅವರು ವಹಿಸಿದ ಪಾತ್ರಗಳ ಮುಖಾಂತರ. ಹಾಗಾಗಿ ಅವರನ್ನು 'ಭೂತಯ್ಯನ ಮಗ ಅಯ್ಯು' ಉಪ್ಪಿನಕಾಯಿ ಖಯಾಲಿಯವನ ಪಾತ್ರ ಅಥವಾ ನಾಗರಹಾವು ಪ್ರಿನ್ಸಿಪಾಲ್ ಪಾತ್ರಗಳ ಮುಖಾಂತರ. ಲೋಕನಾಥ್ ಬಗ್ಗೆ ಅವರ ನಿಧನದ ನಂತರ ಬಂದ ಪರಿಚಯಗಳಲ್ಲಿ ಅವರ ರಂಗಭೂಮಿಯ ನೆಂಟು ಮಸಕಾಗಿತ್ತು. 1977ರ ಮಹತ್ತರ ಕಾಲಘಟ್ಟ ತುರ್ತು ಪರಿಸ್ಥಿತಿಯನ್ನು ಕಿತ್ತೊಗೆದು ರಾಜಕೀಯ ಸಾಂಸ್ಕೃತಿ ಪರ್ಯಾಯಗಳಿಗೆ ಹುಡುಕಾಟ ಪ್ರಾರಂಭಿಸಿದ ದಿನಗಳು. ಅದೇ ಹಾದಿಯಲ್ಲಿ ಸಮುದಾಯ 1977 ರ ಮೇ/ಜೂನ್ ತಿಂಗಳಲ್ಲಿ "ಕತ್ತಲೆ ದಾರಿ ದೂರ" (ನಾಟಕ ರಚನೆ: ಡಿ.ಆರ್. ನಾಗರಾಜ್; ನಿರ್ದೇಶಕ : ಟಿ.ಎನ್. ನರಸಿಂಹನ್) ಪ್ರದರ್ಶನಗಳು ಪ್ರೇಕ್ಷಕರಲ್ಲಿ ತಲ್ಲಣ ಉಂಟು ಮಾಡಿದ್ದವು. ಆಗ ಸಮುದಾಯ ಕೈಗೆತ್ತಿಕೊಂಡಿದ್ದ ನಾಟಕ "ಗೆಲಿಲಿಯೊ" ಮತ್ತು ನಿರ್ದೇಶಿಸಬೇಕಾಗಿದ್ದವರು ಬಿ.ವಿ. ಕಾರಂತ್. ಕಾರಣಾಂತರಗಳಿಮದ ಅದು ಸಾಧ್ಯವಾಗದಿದ್ದಾಗ ಪ್ರಸನ್ನ ನಿರ್ದೇಶನದ ಹೊಣೆ ಹೊತ್ತರು. ನಾಟಕದ ರೀಡಿಂಗ್ ನಡೆಯುವ ವೇಳೆಗೆ ಲೋಕನಾಥ್ ಸಣ್ಣ ಅಘಘಾತಕ್ಕೆ ಈಡಾಗಿ, ಬಹಳ ಕಡಿಮೆ ಅವಧಿಯಲ್ಲೇ ಚೇತರಿಸಿಕೊಂಡು ಪ್ಲಾಸ್ಟರ್ ಸಮೇತ ರಂಗ ತಾಲೀಮಿಗೆ ಹಾಜರಾಗುತ್ತಿದ್ದರು.

ಮುಂದೆ ನಾಟಕ ಪ್ರದರ್ಶನಕ್ಕೆ ಸಿದ್ದವಾಗಿ (ನವೆಂಬರ್ 1977) ಹಲವಾರು ಪ್ರದರ್ಶನಗಳು ನಡೆದ ಮೇಲೆ ನಮಗೆ ಲೋಕನಾಥ್ ವ್ಯಕ್ತಿ ಮತ್ತು ವ್ಯಕ್ತಿತ್ವ ಬಗ್ಗೆ ತಿಳಿಯಿತು. ಗೆಲಿಲಿಯೊ ನಾಟಕ ತಯಾರಿ ಮತ್ತು ಪ್ರದರ್ಶನ ಎರಡೂ ಒಂದು ರೀತಿಯ ರಂಗಭೂಮಿ ಕಾರ್ಯಾಗಾರದ ರೀತಿಯಲ್ಲೇ ನಡೆಯಿತು. ಅದರಲ್ಲಿ ನಟಿಸಿದ ಎಲ್ಲರೂ ತಮ್ಮ ತಮ್ಮ ಕಛೇರಿ/ಕಾರ್ಖಾನೆ/ಕಾಲೇಜಿನ ಕೆಲಸ ಕಾರ್ಯಗಳನ್ನು ಪೂರೈಸಿಕೊಂಡು ಸಿದ್ದವಿರುತ್ತಿದ ಬ್ರೆಡ್ ತಿಂದು ಪ್ರದರ್ಶನಕ್ಕೆ ನಟ ನಟಿಯರೇ ತಮ್ಮ ತಮ್ಮ ಮೇಕಪ್ ಹಾಕಿಕೊಳ್ಳುತ್ತಿದ್ದೆವು, ಸಿದ್ದರಾಗುತ್ತಿದ್ದೆವು. ಅಲ್ಲಿ ಲೋಕನಾಥ್‌ರವರ ವ್ಯಕ್ತಿತ್ವ ಮತ್ತು ಪಾತ್ರಕ್ಕೆ ಬೇಕಾದ ಸಿದ್ದತೆ, ತಲ್ಲೀನತೆ ಎದ್ದು ಕಾಣುತ್ತಿತ್ತು. ಸಮಯ ಪರಿಪಾಲನೆ, ಕಾಲ ನಿರ್ವಹಣೆ ಎಲ್ಲವೂ ಅವರಿಂದ ಕಲಿಯಬೇಕಿತ್ತು. ಆ ಶಿಸ್ತಿನ ಸಿಪಾಯಿ ಮುಂದೆ ವೃಥಾ ಪೊಳ್ಳು ಹರಟೆ, ಮಾತುಕತೆಗಳಿಗೆ ಅವಕಾಶವಿರಲಿಲ್ಲ. ಆ ನಾಟಕದ ವಸ್ತು ವಿಜ್ಞಾನ ಮತ್ತು ಧರ್ಮ ಮುಖಾಮುಖಿ, ರಾಜಕೀಯ ಮತ್ತು ಧರ್ಮದ ನೆಂಟಿನಿಂದ ಗೆಲಿಲಿಯೊಗೆ ಉಂಟಾದ ಕ್ಷಣಗಳ (ಇಂದಿಗೂ ಹೇಳ ಮಾಡಿಸಿರುವ ವಸ್ತು) ಬಗ್ಗೆ ಚರ್ಚೆ.

ನಾಟಕಗಳಲ್ಲಿ ಲೋಕನಾಥರ ಉಚ್ಚಾರಣೆ ರೀತಿ ಮನಮುಟ್ಟುವ ರೀತಿಯಲ್ಲಿರುತ್ತಿತ್ತು. ಲೋಕನಾಥರ ಅದ್ಭುತ ಅಭಿನಯದಿಂದ ಈಗಲೂ ಮರೆಯಲಾಗದ ಕೆಲವನ್ನು ಉದಾಹರಿಸುವುದಾದರೆ,

* ಗೆಲಿಲಿಯೋ ತನ್ನ ಸ್ನೇಹಿತನೊಡನೆ ಮಾತನಾಡುವಾಗ, "ಟೇಬಲ್ ಮುಂದೆ ಕೂತು ಬ್ರೆಡ್ ತಿನ್ನೋವಾಗ ಆ ಮುಂಡೆ ಮಕ್ಕಳು ಆ ದೇವರನ್ನು ನೆನಪಿಸಿಕೊಳ್ಳುತಾರೆ ಹೊರತು ಬ್ರೆಡ್ ಮಾಡೋವವನ್ನಲ್ಲ."

* ದೇವರೆಲ್ಲಿದ್ದಾನೆ ಎಂಬ ಪ್ರಶ್ನೆಗೆ "ನನ್ನನ್ನು ಯಾಕೆ ಕೇಳುತ್ತಿಯಾ, ಆ ಚರ್ಚ್‌ನವರನ್ನು ಕೇಳು"

* ಶಿಷ್ಯನೊಂದಿಗೆ ಮಾತನಾಡುತ್ತಿದ್ದಾಗ ಶಿಷ್ಯ ಗೆಲಿಲಿಯೊವನ್ನು ಮೂದಲಿಸಿ ಹೇಳುವ "ಧೀರರಿಲ್ಲದ ನಾಡು

ಭಾಗ್ಯಹೀನವಾದದ್ದು", ಅದಕ್ಕೆ ಗೆಲಿಲಿಯೊ ಪ್ರತಿಕ್ರಿಯೆ, "ಧೀರರನ್ನು ಬಯಸುವ ನಾಡು ಭಾಗ್ಯಹೀನವಾದದ್ದು"

ಹೀಗೆ ಯೂನಿವರ್ಸಿಟಿಗಳಲ್ಲಿ, ಕಾಲೇಜ್ ಆವರಣದಲ್ಲಿ, ಜನಸಾಮಾನ್ಯರೇ ತುಂಬಿದ್ದ ಪ್ರೇಕ್ಷಕ ವರ್ಗವಿದ್ದಾಗಲೂ ಉಂಟಾಗುತ್ತಿದ್ದ ಪ್ರತಿಕ್ರಿಯೆ ಪರಿಣಾಮ ಒಂದೇ ರೀತಿಯದಾಗಿರುತ್ತಿತ್ತು. ನಮ್ಮ ಒಂದು ಪ್ರದರ್ಶನ ದೊಡ್ಡಬಳ್ಳಾಪುರ ಕಾಲೇಜಿನ ಚಾವಣಿಯಲ್ಲಿದ್ದು ಪ್ರೇಕ್ಷಕರಲ್ಲಿ ಬಹುಪಾಲು ಮಹಿಳೆಯರು ಇದ್ದರು. ನಾಟಕದ ಒಟ್ಟು ಪರಿಣಾಮದಲ್ಲಿ ಮಾನಸಗಂಗೋತ್ರಿಯಲ್ಲಿ ನಡೆದ ಅಥವಾ ಆ ಪ್ರದರ್ಶನದ ನಡುವೆ ಯಾವ ವ್ಯತ್ಯಾಸವು ಇರಲಿಲ್ಲ. ಅದರಲ್ಲಿ ಲೋಕನಾಥರ ಅಭಿನಯದ ಪಾತ್ರ ದೊಡ್ಡದಾಗಿತ್ತು.

ಸಮುದಾಯದೊಂದಿಗೆ ಲೋಕನಾಥ್‌ರವರ ನೆಂಟು ಮೊದಲ ನಾಟಕ "ಹುತ್ತವ ಬಡಿದರೆ" (1975)ಯಿಂದಲೇ ಪ್ರಾರಂಭವಾಯಿತು. ಅದರಲ್ಲೂ ಅವರು ವಿಕ್ರಮರಾಯನಾಗಿ ಛಾಪು ಮೂಡಿಸಿ ದ್ದಾರೆ. ತದನಂತರ 1981 ರ ವೇಳೆಯಲ್ಲಿ ಬೆಂಗಳೂರು ಸಮುದಾಯದ ಅಧ್ಯಕ್ಷರು ಆಗಿದ್ದರು ಮತ್ತು ಬೆಂಗಳೂರು ಜಿಲ್ಲೆಯಲ್ಲಿ ನಡೆದ 1981 ರ ಜಿಲ್ಲಾ ಜಾಥಾ ಸಮಿತಿಯ ಅಧ್ಯಕ್ಷರು ಆಗಿದ್ದರು. ಆಗ ನಮ್ಮ ನಾಟಕಗಳಿಗೆ ಸಿಗುತ್ತಿದ್ದ ಸಂಭಾವನೆ ಅತ್ಯಲ್ಪ. ಅದರಲ್ಲೇ ಎಲ್ಲ ಖರ್ಚುಗಳನ್ನು ನಿರ್ವಹಿಸಬೇಕಾಗಿತ್ತು. ನಟರಾಗಿ ತಮಗೋಸ್ಕರ ಯಾವ ಹೆಚ್ಚಿನ ಸೌಲಭ್ಯವನ್ನು ಬಯಸದೇ ಎಲ್ಲರ ಜತೆಯಲ್ಲೇ ಬೆರೆಯುತ್ತಿದ್ದರು ಮತ್ತು ಇರುವ ವ್ಯವಸ್ಥೆಯಲ್ಲೇ ಹೊಂದಿಕೊಳ್ಳುತ್ತಿದ್ದರು. ಆಗ ಹವ್ಯಾಸಿ ರಂಗಭೂಮಿಯಲ್ಲಿ ಯಾವ ನಟರಿಗೂ ಸಂಭಾವನೆ ಕೊಡುವ ಪದ್ಧತಿಯಿರಲಿಲ್ಲ. ಗೆಲಿಲಿಯೋ ಪಾತ್ರದ ಪ್ರಭಾವ ಎಷ್ಟರ ಮಟ್ಟಿಗೆ ಆವರಿಸಿತ್ತು ಎಂದರೆ, ಅವರ ನಂತರದ ಸಿನಿಮಾ ಪಾತ್ರಗಳ ಅಭಿನಯವನ್ನು ನಾವು ಗೆಲಿಲಿಯೋದ ದೃಶ್ಯಗಳ ಅಭಿನಯದ ಮಾನದಂಡದಿಂದ ಅಳೆಯುತ್ತಿದ್ದೆವು.

ಆ ನಾಟಕದ ಅವಧಿ ಒಟ್ಟು 2 ಗಂಟೆ 40 ನಿಮಿಷ ಅದರಲ್ಲಿ 2 ಗಂಟೆ 20 ನಿಮಿಷವೂ ರಂಗದ ಮೇಲೆ ಇರಬೇಕಿದ್ದ ಪಾತ್ರ. ಒಬ್ಬ ನಟನನ್ನು ಸ್ಮರಿಸಬೇಕಾದರೇ ಒಂದು ನಾಟಕದಿಂದಲೇ ಹೇಳುವುದು ಸಮರ್ಪಕವೇ ಎಂಬ ಪ್ರಶ್ನೆ ಏಳಬಹುದು. ಒಂದು ನಾಟಕ ಸಮಾಜದ ದಿಕ್ಕನ್ನು ಬದಲಿಸುವುದು ಆಶಯವಾದರೂ, ವ್ಯಕ್ತಿಗತವಾಗಿ 'ಗೆಲಿಲಿಯೋ' ಎಷ್ಟರ ಮಟ್ಟಿಗೆ ಪ್ರಭಾವ ಬೀರಿತ್ತೆಂದರೆ ನವ ತರುಣ ಪೀಳಿಗೆ ಸಮುದಾಯ ಸಂಘಟನೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು. ಹಾಗಾಗಿ ಒಂದು ಪೀಳಿಗೆಯನ್ನು ಪ್ರಭಾವಿಸಿದ ನಾಟಕ ಗೆಲಿಲಿಯೋ. ಅವರ ಅಂತ್ಯ ಕ್ರಿಯೆಯ ಕೊನೆ ಘಳಿಗೆಯಲ್ಲಿ ಅವರ ಎಲ್ಲ ಮಕ್ಕಳು ನೆನಪಿಸಿಕೊಂಡಿದ್ದು 'ಗೆಲಿಲಿಯೊ'. ಕಾರಣ ಅವರ ಮನೆಯಲ್ಲಿನ ಪಾತ್ರದ ತಯಾರಿಗೆ ಸಹಕರಿಸಿದ್ದ ಅವರ ಮಕ್ಕಳಿಗೂ ನಾಟಕ ಕಂಠಪಾಠವಾಗಿತ್ತು.

ಅದಕ್ಕೆ ಮುಖ್ಯ ಕಾರಣ ನಿರ್ದೇಶಕ ಪ್ರಸನ್ನ ಮತ್ತು ಅಭಿನಯಿಸಿದ ಲೋಕನಾಥ್. ಹಾಗಾಗಿ ನಮ್ಮೆಲ್ಲರ ಚಿರಸ್ಮರಣೆಯಲ್ಲಿ ಲೋಕನಾಥ್ ಅವರು 'ಗೆಲಿಲಿಯೊ' ಆಗಿ ಉಳಿಯುತ್ತಾರೆ. ●

ನನ್ನ ಮೊದಲ ಮತ ಉದ್ಯೋಗಕ್ಕೆ, ರಾಷ್ಟ್ರೀಯ ಸಮಗ್ರತೆಗೆ... ಪುಟ 3 ರಿಂದ

ಇಮ್ಮೈಲ್ ಇತ್ಯಾದಿ) ವಿವರಗಳನ್ನು ವೈವಿಧ್ಯಮಯ ವಿಧಾನಗಳಿಂದ (ಎಲ್ಲಾ ಎನ್.ಸಿ.ಸಿ. ಕ್ಯಾಡೆಟ್ ಗಳನ್ನು ಉದ್ದೇಶಿಸಿ ಪ್ರಧಾನಿ ಮಾತನಾಡುವುದು ಇತ್ಯಾದಿ) ಸಂಗ್ರಹಿಸುವ, ಅವರನ್ನು ಮುಟ್ಟುವ ಪೂರ್ವಭಾವಿ ಕೆಲಸವನ್ನು ಈಗಾಗಲೇ ಮುಗಿಸಿದೆ. ಅವರನ್ನು ಗುರಿ ಮಾಡಿ 'ನನ್ನ ಮೊದಲ ಮತ ಮೋದಿಗೆ' ಎಂಬ ಪ್ರಚಾರಾಂದೋಲನ ಸದ್ದಿಲ್ಲದೇ ಆರಂಭವಾಗಲಿದೆ.

2014ರಲ್ಲಿ ಮೋದಿಯ 'ಅಚ್ಛೇ ದಿನ'ದ ಭರವಸೆಗಳನ್ನು ಭಾರತದ ಬಹುಸಂಖ್ಯಾತರು (ಶೇ. 60ಕ್ಕೂ ಹೆಚ್ಚು) ನಂಬಿರಲಿಲ್ಲ. ಆದರೆ ಮೋದಿಯ ವಿರುದ್ಧ ಮತ ಹಾಕಿದವರ ನಿರೀಕ್ಷೆಯನ್ನೂ ಮೀರಿ ದೇಶದ ಸಮಸ್ಯೆಗಳನ್ನು ಉಲ್ಬಣಗೊಳಿಸುತ್ತಿರುವ, ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೂಲ ಆಶಯಗಳನ್ನು, ದೇಶದ ಐಕ್ಯತೆ–ಸಮಗ್ರತೆಗಳನ್ನೂ ನಾಶ ಮಾಡುತ್ತಿರುವ ಬಿಜೆಪಿಯನ್ನು ಸೋಲಿಸುವುದು ಎಲ್ಲಾ ಎಡ ಪ್ರಜಾಪ್ರಭುತ್ವ ಶಕ್ತಿಗಳ ಪ್ರಾಥಮಿಕ ಕರ್ತವ್ಯವಾಗಿದೆ. ಇದಕ್ಕಾಗಿ ಉಳಿದ ಹಲವು ಪ್ರಚಾರಾಂದೋಲನಗಳ ಜತೆಗೆ ಬಿಜೆಪಿಯ 'ನನ್ನ ಮೊದಲ ಮತ ಮೋದಿಗೆ' ಪ್ರಚಾರ ತಂತ್ರಕ್ಕೆ ತೀವ್ರ ಪ್ರತಿರೋಧ ಒಡ್ಡಿ ಅದನ್ನು ವಿಫಲಗೊಳಿಸುವುದು ಒಂದು ಪ್ರಮುಖ ಭಾಗವಾಗಬೇಕಾಗಿದೆ.

ಇದಕ್ಕಾಗಿ ಬಿಜೆಪಿಯ 'ನನ್ನ ಮೊದಲ ಮತ ಮೋದಿಗೆ' ಪ್ರಚಾರ ತಂತ್ರಕ್ಕೆ ಪ್ರತಿಯಾಗಿ 'ನನ್ನ ಮೊದಲ ಮತ ಉದ್ಯೋಗಕ್ಕೆ, ರಾಷ್ಟ್ರೀಯ ಸಮಗ್ರತೆಗೆ' ಎಂಬ ಪ್ರಚಾರಾಂದೋಲನವನ್ನು ಹರಿಯಬಿಡಬೇಕಾಗಿದೆ. ಈ ಪ್ರಚಾರಾಂದೋಲನದ ಗುರಿಯಾಗಲಿರುವ 'ಮೊದಲ ಮತದಾರ'ರನ್ನು ಗುರುತಿಸಿ ಮುಟ್ಟಲು ಬೇಕಾದ ವಿಧಾನಗಳನ್ನು ಹೊಂಚಬೇಕಾಗಿದೆ. ಅದಕ್ಕೆ ಬೇಕಾದ ಪ್ರಚಾರ ಸಾಮಗ್ರಿಗಳನ್ನೂ, ಅದನ್ನು ಆಕರ್ಷಕವಾಗಿ ಯುವಜನರಿಗೆ ಮುಟ್ಟಬೇಕಾದ ತಂತ್ರಗಳ ಬಗ್ಗೆ ಯೋಜಿಸಬೇಕಾಗಿದೆ. ಈ ಪ್ರಚಾರಾಂದೋಲನದ ಮುಖ್ಯ ಗುರಿಯಾದ ಯುವಜನರ ತಕ್ಷಣದ ಸಮಸ್ಯೆ ಉದ್ಯೋಗಗಳು. ಉದ್ಯೋಗ ಸೃಷ್ಟಿಯ ಯಾವುದೇ ಯೋಜನೆಯ ಕನಿಷ್ಠ ಪ್ರಾಮಾಣಿಕ ಇಚ್ಛೆ ಸಹ ಇಲ್ಲದ ಮತ್ತು ವಾಸ್ತವಿಕವಾಗಿ ಮೋದಿ ಸರಕಾರದ ನೀತಿಗಳು ಹೇಗೆ ಉದ್ಯೋಗ–ನಾಶ ಮಾಡಿವೆ ಎಂಬುದನ್ನು ಈ ಪ್ರಚಾರಾಂದೋಲನದಲ್ಲಿ ಮನದಟ್ಟು ಮಾಡಬೇಕಾಗಿದೆ. 'ಮೊದಲ ಮತದಾರ'ರನ್ನು ಮೋದಿ–ಬಿಜೆಪಿ ಅಥವಾ ಯಾವುದೇ ಪಕ್ಷವನ್ನು 'ನನ್ನ ಉದ್ಯೋಗ ಎಲ್ಲಿ?' ಮತ್ತು 'ನನಗೆ ಉದ್ಯೋಗ ಕೊಡಲು ಏನು ಕ್ರಮ ಕೈಗೊಳ್ಳುವರಿದ್ದೀರಿ' ಎಂದು ಕೇಳುವಂತೆ ಮಾಡಬೇಕಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಸರಕಾರಗಳು ಅನುಸರಿಸುತ್ತಾ ಬಂದಿರುವ ವಿನಾಶಕಾರಿ ನವ–ಉದಾರವಾದಿ ನೀತಿಗಳ ಹೂರಣ ಅವರ ಮುಂದೆ ಬಯಲು ಮಾಡಬೇಕಾಗಿದೆ. ಇದಕ್ಕಾಗಿ ಎಲ್ಲಾ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು 'ನನ್ನ ಮೊದಲ ಮತ ಉದ್ಯೋಗಕ್ಕೆ, ರಾಷ್ಟ್ರೀಯ ಸಮಗ್ರತೆಗೆ' ಪ್ರಚಾರಾಂದೋಲನಕ್ಕೆ ತೊಡಗಬೇಕಾಗಿದೆ. ●



"ಭಾರತ್ ಬಂದ್ ನಲ್ಲಿ ಗೆದ್ದಿದ್ಯಾರು ಸೋತಿದ್ಯಾರು ?

ಮೋದಿ ವಿರುದ್ಧ ಕಮ್ಯುನಿಸ್ಟರ ಹೋರಾಟ ಸಫಲವಾಯ್ತಾ ? ನಾಳೆ ಬಂದ್ ಸಫಲವಾಗುತ್ತಾ? ಜನಸಾಮಾನ್ಯರು ಬಂದ್ ಗೆ ಬೆಂಬಲ ನೀಡ್ತಾರಾ? ಇಂತಹ ಅಪ್ರಬುದ್ಧ ಪ್ರಶ್ನೆಗಳನ್ನು ವಿಚಿತ್ರವಾದ ವಿಕೃತ ದನಿಯಲ್ಲಿ ಕೇಳುತ್ತಲೇ ಇಂದಿನ ಕಾರ್ಮಿಕ ಮುಷ್ಕರವನ್ನು ತಮ್ಮ ಪರದೆಗಳ ಮೇಲೆ ಬಿತ್ತರಿಸಿದ ಕನ್ನಡ ಮಾಧ್ಯಮಗಳು ಕೇವಲ ಸಂವೇದನೆಯನ್ನು ಕಳೆದುಕೊಂಡಿಲ್ಲ, ತಮ್ಮ ಪ್ರಜ್ಞೆಯನ್ನೂ ಕಳೆದುಕೊಂಡಿವೆ ಎನ್ನುವುದು ನಿಸ್ಸಂದೇಹ. ಕಾರ್ಮಿಕರು ನಡೆಸುವ ಬಂದ್ ರಾಜಕೀಯ ಪಕ್ಷಗಳ ಬಂದ್ ರೀತಿಯಲ್ಲಿ ಯಶಸ್ವಿಯಾಗುವುದಿಲ್ಲ. ಏಕೆಂದರೆ ಬಾಡಿಗೆ ಹೋರಾಟಗಾರರು, ಅಂಧಾಭಿಮಾನಿಗಳು, ಉನ್ಮತ್ತ ಓರಾಟಗಾರರು ಇಲ್ಲಿ ಇರುವುದಿಲ್ಲ. ಸಾಮಾಜಿಕ ತಾಣಗಳಲ್ಲಿ ಬಂದ್ ಮಾಡಿಸಲು ಬಂದವರನ್ನು ಬಾಯಿ ಮುಚ್ಚಿಸಿದ ಅಂಗಡಿಯ ಮಾಲಿಕನೊಬ್ಬನನ್ನು ಹೀರೋನಂತೆ ವಿಜೃಂಭಿಸಲಾಗುತ್ತಿದೆ. ಇದು ಪ್ರಜ್ಞಾಹೀನ ಮಾಧ್ಯಮದ ಮತ್ತೊಂದು ಅವತಾರವಷ್ಟೆ. ನವ ಉದಾರವಾದ ಮತ್ತು ಜಾಗತೀಕರಣ ಈ ದೇಶದ ಕೋಟ್ಯಂತರ ಕಾರ್ಮಿಕರ ಬದುಕಿನಲ್ಲಿ ಸೃಷ್ಟಿಸಿರುವ ಬಿಕ್ಕಟ್ಟುಗಳನ್ನು ಗ್ರಹಿಸಲು ಮೂಲತಃ ಸಂವೇದನೆ ಇರಬೇಕು ಮತ್ತು ಅರ್ಥಶಾಸ್ತ್ರದ ಪರಿವೆ ಇರಬೇಕು. ಉನ್ಮಾದ ಮತ್ತು ಆರಾಧನಾ ಮನೋಭಾವ ಇದ್ದವರು ಮೋದಿ ಭಜನೆ ಮಾಡಬಹುದಷ್ಟೆ. ಇದು ಮೋದಿ ವಿರುದ್ಧದ ಹೋರಾಟವಲ್ಲ ಪ್ರಭುತ್ವದ ಆಡಳಿತ ಮತ್ತು ಆರ್ಥಿಕ ನೀತಿಗಳ ವಿರುದ್ಧ ಹೋರಾಟ. ದೆಹಲಿಯಲ್ಲಿ ಸೇರಿದ್ದ ಒಂದು ಲಕ್ಷ ರೈತರು, ಕೇರಳದಲ್ಲಿ ಮಹಾಗೋಡೆ ನಿರ್ಮಿಸಿದ 50 ಲಕ್ಷ ಮಹಿಳೆಯರು, ಇಂದು ಮುಷ್ಕರ ಹೂಡಿದ ಕೋಟ್ಯಂತರ ಕಾರ್ಮಿಕರು ಉನ್ಮತ್ತ ಕಂಗಳಿಗೆ ದೇಶದ್ರೋಹಿಗಳಂತೆ ಕಾಣಬಹುದು. ಆದರೆ ಈ ಉನ್ಮಾದಕ್ಕೆ ಬಲಿಯಾಗಿರುವವರು ಬದುಕಿರುವುದೇ ಈ ಶ್ರಮಿಕರ ಪರಿಶ್ರಮದಿಂದ ಎಂಬ ವಾಸ್ತವ ಗ್ರಹಿಕೆ ಮನುಷ್ಯರಾದವರಿಗೆ ಇರಬೇಕು. ಇದು ಸೋಲು ಗೆಲುವಿನ ಅಖಾಡ ಅಲ್ಲ. ಬದುಕು ಮತ್ತು ಸಾವಿನ ನಡುವಿನ ಸಂಘರ್ಷ. ಆಳುವ ವರ್ಗಗಳು ಉತ್ತರ ನೀಡದಿರಬಹುದು ಆದರೆ ಇತಿಹಾಸ ನೀಡಿಯೇ ತೀರುತ್ತದೆ. ಮಾಧ್ಯಮಗಳ ಪ್ರಜ್ಞೆ ಸತ್ತುಹೋಗಿದೆ. ನಾಗರಿಕ ಪ್ರಜ್ಞೆಯೂ ....?"

– ನಾ. ದಿವಾಕರ್

‘ಅಚ್ಛೇ ದಿನ್’ಗಳಲ್ಲೊಂದು ‘ನವರತ್ನ’ ಕಂಪನಿಯ ಕತೆ: ಸಂಬಳ ಕೊಡಲೂ ಹಣವಿಲ್ಲದಂತೆ ಮಾಡಿದ ಸರಕಾರೀ ‘ಬೆಂಬಲ’



ಕಳೆದ ವಾರ, ಜನವರಿ 4ರಂದು ರಕ್ಷಣಾ ಮಂತ್ರಿಗಳು(ಸಂಸದೀಯ ಭಾಷೆಯಲ್ಲಿ ‘ರಕ್ಷಾ ಮಂತ್ರಿ ಅಥವ ಆರ್‌ಎಂ) ಸಂಸತ್ತಿನಲ್ಲಿ ರಫೆಲ್ ವ್ಯವಹಾರವನ್ನು ರಕ್ಷಿಸುವ ಕೆಲಸವನ್ನು ಮಾಡುವ ಭರದಲ್ಲಿ ಹೆಚ್‌ಎಎಲ್ ಬಗ್ಗೆ ಹೇಳಿದ ಮಾತುಗಳು ನಿಜವಾಗಿ ಇವರು ಯಾರನ್ನು ರಕ್ಷಿಸಲಿಕ್ಕಾಗಿ ಮಂತ್ರಿಯಾಗಿದ್ದಾರೆ ಎಂದು ಇಡೀ ದೇಶವೇ ಪ್ರಶ್ನಿಸುವಂತಾಗಿದೆ. ಹೆಚ್‌ಎಎಲ್ ತನ್ನ ಕಾರ್ಯಾಚರಣೆಗಳ ಪ್ರಮಾಣವನ್ನು ಹೆಚ್ಚಿಸಿಲ್ಲವಾದ್ದರಿಂದ ರಫೆಲ್ ಆಫ್‌ಸೆಟ್ ಗುತ್ತಿಗೆ ಅಂಬಾನಿ ಕಂಪನಿಗೆ ಹೋಯ್ತು ಎಂದು ಅವರು ದೂರಿದರು. ಇದಕ್ಕೆ ಮೊದಲು ಹೆಚ್‌ಎಎಲ್ ಗೆ ರಫೆಲ್ ವಿಮಾನವನ್ನು ತಯಾರಿಸುವಲ್ಲಿ ಭಾಗೀದಾರನಾಗುವ ಸಾಮರ್ಥ್ಯ ಇಲ್ಲ ಎಂದಿದ್ದರು. ಆಗ ಹೆಚ್‌ಎಎಲ್‌ನ ನಿವೃತ್ತ ಮುಖ್ಯಸ್ಥರು ಅದಕ್ಕೆ ಸವಾಲು ಹಾಕಿದ್ದರು. ನಾಲ್ಕನೇ ತಲೆಮಾರಿನ 25 ಟನ್ ಸುಖೋಯ್–30 ಯುದ್ಧವಿಮಾನವನ್ನು ನಾವು ಸಂಪೂರ್ಣವಾಗಿ ತಯಾರಿಸಿ ಕೊಟ್ಟಿರುವಾಗ ಈ ಮಾತಿನ ಅರ್ಥವಾದರೂ ಏನು ಎಂದು ಖಾರವಾಗಿ ಪ್ರಶ್ನಿಸಿದರು. ಆದ್ದರಿಂದ ಈ ಬಾರಿ ‘ಸಾಮರ್ಥ್ಯ’ದ ಮಾತಾಡದೆ ‘ಸ್ಕೇಲ್’ ಅಥವ ಪ್ರಮಾಣದ ಮಾತೆತ್ತಿದರು(ಈ ಸಾಮರ್ಥ್ಯ ಅಥವ ಪ್ರಮಾಣ ಅಂಬಾನಿ ಕಂಪೆನಿಯ ಬಳಿ ಇದೆಯೆಂದೇನೂ ಅವರು ಹೇಳಲಿಲ್ಲ)

ಮುಂದುವರೆದು ಅವರು ತಮ್ಮ ಸರಕಾರ ಈ ಕಂಪನಿಯನ್ನು ಬೆಂಬಲಿಸುತ್ತ ಬಂದಿದೆ, 1ಲಕ್ಷ ಕೋಟಿ ರೂ.ಗಳಷ್ಟು ಆರ್ಡರ್‌ಗಳನ್ನು ಕೊಡಿಸಿದೆ ಎಂದು ಹೇಳಿದರು. ಇದು ಪೂರ್ಣ ಸುಳ್ಳಲ್ಲದಿದ್ದರೂ, ಅರೆ ಸತ್ಯ ಎಂಬುದು ಬೇಗನೇ ಬಯಲಿಗೆ ಬಂತು. ಇದುವರೆಗೆ ಈ ನಾಲ್ಕು ವರ್ಷಗಳಲ್ಲಿ ಹೆಚ್‌ಎಎಲ್‌ಗೆ ದೊರೆತದ್ದು 26,000 ಕೋಟಿ ರೂ. ಮಾತ್ರ. ಉಳಿದದ್ದು ‘ಪೈಪ್‌ಲೈನ್’ನಲ್ಲಿದೆ ಎಂದು ಸ್ಪಷ್ಟೀಕರಣ ಆಗ ಬಂತು. ಅಂದರೆ ಬರಬಹುದು ಎಂಬ ನಿರೀಕ್ಷೆಯಷ್ಟೇ. ರಫೆಲ್‌ನ ನಿರೀಕ್ಷಿತ ಆರ್ಡರ್ ಕೈಬಿಟ್ಟಿರುವಂತೆ ಅವೂ ಆಗುವುದಿಲ್ಲ ಎಂಬ ಗ್ಯಾರಂಟಿಯೇನೂ ಇಲ್ಲ.

ಅಷ್ಟಕ್ಕೂ ಇವು ವಾಣಿಜ್ಯ ವ್ಯವಹಾರಗಳು, ಇದರಲ್ಲಿ ಸರಕಾರ ‘ಕೊಡುವಂತದ್ದು’ ಏನಿದೆ ಎಂದು ಪರಿಣಿತರು ಪ್ರಶ್ನಿಸುತ್ತಿದ್ದಾರೆ. ರಫೆಲ್ ವಿಮಾನ ತಯಾರಿಸುವ ಕಂಪನಿಗೆ ರಫೆಲ್ ವಿಮಾನಕ್ಕಾಗಿ 20,000 ಕೋಟಿ ರೂ. ಕೊಟ್ಟಿದ್ದರೆ ಅದು ಆ ಕಂಪನಿಗೆ ಸರಕಾರದ ಬೆಂಬಲ ಎಂದಾಗುತ್ತದೆಯೇ ಎಂದು ಅವರು ಒಂದು ಗಹನವಾದ ಪ್ರಶ್ನೆಯನ್ನು ಎತ್ತಿದ್ದಾರೆ. ವಾಸ್ತವವಾಗಿ ಸರಕಾರದ ಬೆಂಬಲ ಇರಬೇಕಾದ್ದು ಅದು ಇಲ್ಲವೆಂದು ದೂರುತ್ತಿರುವ ಸಾಮರ್ಥ್ಯ, ಪ್ರಮಾಣವನ್ನು ಹೆಚ್ಚಿಸುವಲ್ಲಿ, ತಂತ್ರಜ್ಞಾನದ ಮಟ್ಟವನ್ನು ಹೆಚ್ಚಿಸುವಲ್ಲಿ ನೆರವಾಗುವಲ್ಲಿ. ಆ ಕೆಲಸ ಮಾಡಿದ್ದೇವೆ ಎಂದು ‘ರಕ್ಷಾಮಂತ್ರಿ’ಗಳೇನೂ ಹೇಳಿಲ್ಲ.

ಈ ‘ಪೈಪ್‌ಲೈನ್’ ಚರ್ಚೆ ನಡೆಯುತ್ತಿದ್ದಂತೆಯೇ, ಒಂದೊಮ್ಮೆ ಕ್ಯಾಶ್–ರಿಚ್’ ಅಂದರೆ ದೈನಂದಿನ ಅಗತ್ಯಗಳಿಗೆ ಹಣದ ಕೊರತೆಯೇ ಇಲ್ಲದ ಸಾರ್ವಜನಿಕ ವಲಯದ ಈ ‘ನವರತ್ನ’ ಸಂಸ್ಥೆ ತನ್ನ 29000 ಸಿಬ್ಬಂದಿಗೆ ಸಂಬಳ ಕೊಡಲು ಹಣವಿಲ್ಲದೆ 1000 ಕೋಟಿ ರೂ.ಗಳ ಓವರ್‌ಡ್ರಾಫ್ಟ್ ಪಡೆಯಬೇಕಾಗಿ ಬಂದಿದೆ ಎಂಬ ಸುದ್ದಿ ಬಂತು. ಇದರ ಬೆನ್ನಲ್ಲೇ ಈ ‘ಅಚ್ಛೇ ದಿನ್’ಗಳಲ್ಲಿ ಅದಕ್ಕೆ ಸರಕಾರದಿಂದ ಸಿಕ್ಕ ‘ಬೆಂಬಲ’ದ ನಿಜಚಿತ್ರವೂ ಬಯಲಿಗೆ ಬಂದಿದೆ.

ವಾಸ್ತವವಾಗಿ, ಇದು ಸಾರ್ವಜನಿಕ ವಲಯದ ಕಂಪನಿಯಾದ್ದರಿಂದ ಸರಕಾರದ ಒಡೆತನದ್ದು. ಆದರೆ ಸಾರ್ವಜನಿಕ ವಲಯದ ಬಗ್ಗೆ ನಂಬಿಕೆಯಿಲ್ಲದ ಈ ‘ಅಚ್ಛೆ ದಿನ್’ಗಳಲ್ಲಿ ಸರಕಾರ ತನ್ನ ವೆಚ್ಚಗಳಿಗೆ ಕಾರ್ಪೊರೇಟ್ ಕುಳಗಳಿಂದ ತೆರಿಗೆ ವಸೂಲಿ ಮಾಡುವ ಬದಲು, ಅವರಿಗೆ ರಿಯಾಯ್ತಿಗಳನ್ನು ದಯಪಾಲಿಸಿ, ತನ್ನ ಬಳಿಯಿರುವ ಈ ಕಂಪನಿಗಳ ಶೇರುಗಳನ್ನು ಅವೇ ‘ಖರೀದಿಸುವಂತೆ’ ಮಾಡುವ ‘ಬೈಬ್ಯಾಕ್’ ಎಂಬ ‘ಸಾಧನೆ’ಯನ್ನು ಮಾಡಿದೆ(ಇದು ತನ್ನ ದೊಡ್ಡ ಖಾಸಗಿ ಕಾರ್ಪೊರೇಟ್ ಮಿತ್ರರುಗಳ ಲಾಭ ಹೆಚ್ಚಳಕ್ಕಾಗಿ ಎಂದು ಬೇರೆ ಹೇಳಬೇಕಾಗಿಲ್ಲ). ಈ ಬೈಬ್ಯಾಕ್ ವಿಧಾನದಲ್ಲಿ ಸರಕಾರ ಹೆಚ್‌ಎಎಲ್‌ನಿಂದ 11,000 ಕೋಟಿ ರೂ.ಗಳನ್ನು ಪಡೆದಿದೆ.

ಈ ನಕಾರಾತ್ಮಕ ‘ಬೆಂಬಲ’ ಇಷ್ಟಕ್ಕೇ ನಿಂತಿಲ್ಲ. ಐಎಎಫ್ ಅಂದರೆ ಭಾರತೀಯ ವಿಮಾನಪಡೆ ಹೆಚ್‌ಎಎಲ್ ಕಂಪನಿಯ ಪ್ರಮುಖ ಗಿರಾಕಿ. ಅದಕ್ಕೆ ಈಗಾಗಲೇ ಹೆಚ್‌ಎಎಲ್ ತಯಾರಿಸಿ ಕೊಟ್ಟಿರುವ ವಿಮಾನಗಳು, ಹೆಲಿಕಾಪ್ಟರುಗಳು ಮತ್ತು ಇತರ ಸೇವೆಗಳಿಗಾಗಿ ಒಟ್ಟು 14,500 ಕೋಟಿ ರೂ. ಬರಬೇಕಾಗಿದೆ. ಕಳೆದ ಹಣಕಾಸು ವರ್ಷದ ಕೊನೆಯಲ್ಲಿ ಅದು 7000 ಕೋಟಿ ಇತ್ತು. ಇದಲ್ಲದೆ ಭಾರತೀಯ ಸೇನಾಪಡೆ, ಕೋಸ್ಟ್ ಗಾರ್ಡ್(ಕರಾವಳಿ ಕಾವಲು ಪಡೆ)ಯಿಂದಲೂ ಹಣ ಬರಬೇಕಾಗಿದೆ, ಹೆಚ್‌ಎಎಲ್‌ಗೆ ಒಟ್ಟು 15,700 ಕೋಟಿ ರೂ.ಬರಬೇಕಾಗಿದೆ. ಈ ಹಣಕಾಸು ವರ್ಷದ ಕೊನೆಗೆ ಅದು 20,000 ಕೋಟಿ ರೂ.ಗೆ ಏರಲಿದೆ ಎನ್ನಲಾಗಿದೆ. ‘ಬೆಂಬಲ’ ಕೊಡುತ್ತಿದ್ದೇನೆ ಎಂದಿರುವ ಸರಕಾರ ಈ ಬಗ್ಗೆ ಏನೂ ಹೇಳುತ್ತಿಲ್ಲ. ವಾಸ್ತವವಾಗಿ ಅದರ ಆದೇಶದ ಮೇರೆಗೇ ಈ ಬಾಕಿಯನ್ನು ಇಟ್ಟುಕೊಂಡಿರಬಹುದು ಎಂಬುದು ಕೆಲವರ ಗುಮಾನಿ. ಏಕೆಂದರೆ ಇದೇ ಐಎಎಫ್ ದಸ್ಸಾಲ್ ಸೇರಿದಂತೆ ಖಾಸಗಿ ಕಂಪನಿಗಳ ಬಾಕಿಯನ್ನು ಇಟ್ಟುಕೊಂಡಿಲ್ಲ ಎಂದು ಹೇಳಲಾಗಿದೆ.

ರಫೆಲ್ ವ್ಯವಹಾರದಲ್ಲಿ ಹೆಚ್‌ಎಎಲ್ ನ್ನು ಹೊರಹಾಕಿದ್ದರ ವ್ಯಾಪಕ ಚರ್ಚೆಯಾಗುವಾಗ ಮಧ್ಯಪ್ರವೇಶ ಮಾಡದ ಹೆಚ್‌ಎಎಲ್ ನೌಕರರು ಇದೀಗ ನಿಜಚಿತ್ರವನ್ನು ಮುಂದಿಡುತ್ತಿದ್ದಾರೆ. 1 ಲಕ್ಷ ಕೋಟಿ ರೂ. ಆರ್ಡರ್ ಕೊಡಿಸಿ ‘ಬೆಂಬಲ’ ನೀಡಿದ್ದೇನೆ ಎನ್ನುತ್ತಿರುವ ಸರಕಾರ ವಾಸ್ತವವಾಗಿ ಅದರ ರಕ್ತ ಹೀರಿ ಸಾಯುವಂತೆ ಮಾಡುವ ಪಿತೂರಿ ನಡೆಸಿದೆ ಎಂದು ಇನ್ನೂ ಹಲವು ಸಂಗತಿಗಳನ್ನು ಹೊರಗೆಡಹಿದ್ದಾರೆ(ನ್ಯೂಸ್‌ಕ್ಲಿಕ್, ಜನವರಿ 10). ಈ ಕಂಪನಿ ತನಗೆ ಬರಬೇಕಾದ ಬಾಕಿಗಳು ಬರದಿದ್ದರೆ ಸಿಬ್ಬಂದಿಗೆ ಸಂಬಳ ಕೊಡಲು ಪ್ರತಿ ತಿಂಗಳು ಬ್ಯಾಂಕ್‌ಗಳ ಎದುರು ಓವರ್‌ಡ್ರಾಫ್ಟ್‌ಗೆ ಕೈಯೊಡ್ಡಬೇಕಾಗುತ್ತದೆ ಎಂಬ ಸಂಗತಿ ನೋಡಿದರೆ ಈ ದೂರಿನಲ್ಲಿ ಬಹಳಷ್ಟು ಸತ್ಯಾಂಶ ಇದೆ ಎಂದನಿಸುತ್ತದೆ.

ನಿಜ ಹೇಳಬೇಕೆಂದರೆ, ಬಿಜೆಪಿ ಸರಕಾರ ಯಾವ ‘ಬೆಂಬಲ’ವನ್ನೂ ಕೊಟ್ಟಿಲ್ಲ. ಐಎಎಫ್ ಒಂದೂ ವಿಮಾನವನ್ನು ಇನ್ನೂ ಪೂರೈಕೆ ಮಾಡದ ದಸ್ಸಾಲ್ ಕಂಪನಿಗೆ 20,000 ಕೋಟಿ ರೂ. ತೆತ್ತಿದೆ. ಅದರೆ ಈಗಾಗಲೇ ವಿಮಾನಗಳನ್ನು ,ಹೆಲಿಕಾಪ್ಟರುಗಳನ್ನು ತಯಾರಿಸಿ ಕೊಟ್ಟಿರುವ ಹೆಚ್‌ಎಎಲ್‌ಗೆ 14,500 ಕೋಟಿ ರೂ.ಗಳನ್ನು ಏಕೆ ಪಾವತಿ ಮಾಡುತ್ತಿಲ್ಲ. ಎಂದು ಹೆಚ್‌ಎಎಲ್ ನೌಕರರು ಕೇಳುತ್ತಿದ್ದಾರೆ.


ಹೆಚ್‌ಎಎಲ್ ಬಳಿ ಈಗ 1.28ಲಕ್ಷ ಕೋಟಿ ರೂ.ಗಳ ಆರ್ಡರ್ ಇದೆ. ಇದರಲ್ಲಿ ಬಿಜೆಪಿ ಸರಕಾರದ ಅವಧಿಯಲ್ಲಿ ಬಂದದ್ದು ಕೇವಲ 26,570 ಕೋಟಿ. ಅಂದರೆ ಹೆಚ್‌ಎಎಲ್ ಈಗ ನಡೆಯುತ್ತಿರುವುದು ಹಿಂದಿನ ಯುಪಿಎ ಸರಕಾರ ಕೊಟ್ಟ ‘ಬೆಂಬಲ’ದ ಮೇಲೆಯೇ.

“ನಾವು ಸರಕಾರದಿಂದ 19,334 ಕೋಟಿ ರೂ, ಕೇಳಿದ್ದೆವು, ಸರಕಾರ ಕೊಟ್ಟದ್ದು ಕೇವಲ 6415 ಕೋಟಿ. ಆದರೆ ಮೋದಿ ಸರಕಾರ ಹೆಚ್‌ಎಎಲ್ ನಿಂದ 11,024 ಕೋಟಿ ರೂ. ಪಡೆದಿದೆ. 2015–16ರಲ್ಲಿ ‘ರಕ್ಷಾಮಂತ್ರಿ’ಗಳು ಹೆಚ್‌ಎಎಲ್ ಸರಕಾರಕ್ಕೆ 6393 ಕೋಟಿ ರೂ. ವರ್ಗಾಯಿಸಬೇಕು ಎಂದು ಆದೇಶ ನೀಡಿದರು” ಎಂದು ನೌಕರರ ಪ್ರತಿನಿಧಿಗಳು ಹೇಳಿರುವುದಾಗಿ ನ್ಯೂಸ್‌ಕ್ಲಿಕ್ ವರದಿ ಮಾಡಿದೆ.

ಒಟ್ಟಿನಲ್ಲಿ ಅಚ್ಛೇದಿನ್‌ಗಳಲ್ಲಿ ಹೆಚ್‌ಎಎಲ್ ಗೆ ರಕ್ಷಾಮಂತ್ರಿಗಳ ‘ಬೆಂಬಲ’

= (–) 11024)+(–)15,700 ಕೋಟಿ

= (–) 26,724) ಕೋಟಿ



ಶಾಭಾಷ್, ಅಭಿನಂದನೆಗಳು ಅ.ಅ.+ ರಕ್ಷಣೆಗೆ
–ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಭ್ರಷ್ಟಾಚಾರ ನಿರ್ಮೂಲನೆಯ ಹೆಸರಲ್ಲಿ ಅಧಿಕಾರಕ್ಕೆ ಬಂದ ಸರಕಾರಕ್ಕೆ ಲೋಕಪಾಲ ನೇಮಕ ವಿಳಂಬಕ್ಕೆ ಸುಪ್ರಿಂ ಕೋರ್ಟ್ ತರಾಟೆ

2014ರಿಂದ ನೆನೆಗುದಿಯಲ್ಲಿರುವ ಲೋಕಪಾಲ ನೇಮಕದಲ್ಲಿ ಸತತವಾಗಿ ವಿಳಂಬವಾಗುತ್ತಿದೆ ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ಕೇಂದ್ರ ಸರಕಾರವನ್ನು ತರಾಟೆಗೆ ತಗೊಂಡಿದೆ., ಜನವರಿ 17ರ ಒಳಗೆ ಈ ಬಗ್ಗೆ ಕಳೆದ ಸೆಪ್ಟಂಬರ್‌ನಿಂದ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ಹೊಸದೊಂದು ಅಫಿಡವಿಟ್ ಸಲ್ಲಿಸಬೇಕು ಎಂದು ತಾಕೀತು ಮಾಡಲಾಗಿದೆ.

ಜನವರಿ 2014ರಲ್ಲಿ ಲೋಕಪಾಲ ಮತ್ತು ಲೋಕಾಯುಕ್ತ ಕಾಯ್ದೆ ಜಾರಿಗೆ ಬಂತು. ಇದರ ಪ್ರಕಾರ ಪ್ರಧಾನ ಮಂತ್ರಿ, ಲೋಕಸಭಾಧ್ಯಕ್ಷರು, ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕರು, ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರು(ಅಥವ ಅವರು ನೇಮಿಸಿದವರು) ಹಾಗೂ ಈ ನಾಲ್ಕು ಮಂದಿ ಆರಿಸಿದ ಒಬ್ಬ ನ್ಯಾಯವೇತ್ತ ಇರುವ ಆಯ್ಕೆ ಸಮಿತಿ ಒಂದು ಶೋಧನಾ ಸಮಿತಿಯ ನೆರವಿನಿಂದ ಲೋಕಪಾಲರನ್ನು ಮತ್ತು ಈ ಸಂಸ್ಥೆಯ ಇತರರನ್ನು ಹೆಸರಿಸಬೇಕು. ಆದರೆ ಭ್ರಷ್ಟಾಚಾರವನ್ನು ಚುನಾವಣಾ ಪ್ರಚಾರದ ವಿಷಯವಾಗಿ ಮಾಡಿ ಅಧಿಕಾರಕ್ಕೆ ಬಂದ ಅಚ್ಛೇ ದಿನ್ ಪ್ರಧಾನಿಗಳು ಆರಂಭದಲ್ಲಿ ಈ ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕ ಎಂಬವರು ಇಲ್ಲ ಎನ್ನುತ್ತ ಅದನ್ನು ತಳ್ಳಿ ಹಾಕುತ್ತ ಬಂತು. ನಂತರ ಪ್ರತಿಪಕ್ಷದ ನಾಯಕನ ಕುರಿತಾದ ನಿಯಮವನ್ನು ತಿದ್ದುಪಡಿ ಲೋಕಸಭೆಯಲ್ಲಿ ಅತಿ ದೊಡ್ಡ ಪ್ರತಿಪಕ್ಷದ ನಾಯಕನನ್ನು ನೇಮಿಸಲು ಒಪ್ಪಿದರೂ ಆ ತಿದ್ದುಪಡಿಯನ್ನು ತರಲೇ ಇಲ್ಲ. ಈ ನಡುವೆ ಆಯ್ಕೆ ಸಮಿತಿಯಲ್ಲಿ ಸ್ಥಾನ ತೆರವಾಗಿದ್ದರೂ ಆಯ್ಕೆಯ ಕೆಲಸವನ್ನು ಮುಂದುವರೆಸಬಹುದು ಎಂದು ನ್ಯಾಯಾಲಯ ಹೇಳಿದ ಮೇಲೂ ಈ ದಿಕ್ಕಿನಲ್ಲಿ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಕಳೆದ ಜುಲೈ 24ರ ವಿಚಾರಣೆಯ ಮೊದಲು ಜುಲೈ 19ರಂದು ಆಯ್ಕೆ ಸಮಿತಿ ಸಭೆ ಸೇರಿ ಶೋಧನಾ ಸಮಿತಿಯ ಬಗ್ಗೆ ಚರ್ಚಿಸಿತು ಎಂದು ಸರಕಾರ ಸುಪ್ರಿಂ ಕೋರ್ಟಿಗೆ ತಿಳಿಸಿತು. ಆದರೆ ಇನ್ನೂ ಶೋಧನಾ ಸಮಿತಿಯನ್ನು ರಚಿಸಿದ ಬಗ್ಗೆ ಮಾಹಿತಿಯೂ ಇಲ್ಲ ಎಂದು ಲೋಕಪಾಲ ನೇಮಕದ ಬಗ್ಗೆ ಸರಕಾರಕ್ಕೆ ನಿರ್ದೇಸನ ನೀಡಬೇಕು ಎಂದು ಅರ್ಜಿ ಹಾಕಿದ್ದ ಸಂಘಟನೆಯ ವಕೀಲರು ಹೇಳಿದರು. ಈ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟ್ ಸರಕಾರವನ್ನು ತರಾಟೆಗೆ ತಗೊಂಡಿದೆ. ಜನವರಿ 17ರಂದು ವಿಚಾರಣೆ ಮುಂದುವರೆಯಲಿದೆ. ಆ ವೇಳೆಗೆ ಲೋಕಪಾಲ ಕಾಯ್ದೆ ಬಂದು ಐದು ವರ್ಷಗಳಾಗುತ್ತವೆ, ಭ್ರಷ್ಟಾಚಾರ ನಿರ್ಮೂಲನೆಯ ಭರವಸೆ ಕೊಟ್ಟವರ ಅಧಿಕಾರಾವಧಿ ಮುಗಿಯುತ್ತ ಬರುತ್ತಿದೆ.

5 ವರ್ಷಗಳಲ್ಲಿ 27 ವ್ಯಾಪಾರೀ ಕುಳಗಳು ಪರಾರಿ

ಕಳೆದ ಐದು ವರ್ಷಗಳಲ್ಲಿ ಬ್ಯಾಂಕ್ ಸಾಲಗಳ ಮರುಪಾವತಿ ಮಾಡದ ಮತ್ತು ಆರ್ಥಿಕ ಅಪರಾಧಗಳನ್ನು ಎಸಗಿದ 27 ವ್ಯಾಪಾರೀ ಕುಳಗಳು ದೇಶ ಬಿಟ್ಟು ಪರಾರಿಯಾಗಿದ್ದಾರೆ. ಇದು ಸರಕಾರವೇ ಸಂಸತ್ತಿನಲ್ಲಿ ಜನವರಿ 4ರಂದು ನೀಡಿರುವ ಮಾಹಿತಿ. ಇವರಲ್ಲಿ 20 ಮಂದಿಯ ಮೇಲೆ ರೆಡ್ ಕಾರ್ನರ್ ನೋಟೀಸುಗಳನ್ನು ನೀಡಲು ಇಂಟರ್‌ಪೋಲ್‌ನ್ನು ಕೇಳಲಾಗಿದ್ದು 8 ಕುಳಗಳ ಮೇಲೆ ಈ ನೋಟೀಸು ಕೊಡಲಾಗಿದೆಯಂತೆ. ಉಳಿದ 19 ಕುಳಗಳ ಬಗ್ಗೆ ಹೇಳಿಲ್ಲ. ಈ 27ರಲ್ಲಿ 7 ಮಂದಿಯ ಮೇಲೆ ಪರಾರಿ ಆರ್ಥಿಕ ಅಪರಾಧಿಗಳ ಕಾಯ್ದೆಯ ಅಡಿಯಲ್ಲಿ ಜಾರಿ ನಿರ್ದೇಶನಾಲಯ ಅರ್ಜಿಗಳನ್ನು ಹಾಕಿದೆಯಂತೆ. ಉಳಿದ 20 ಮಂದಿಯ ಬಗ್ಗೆ ಹೇಳಿಲ್ಲ. 50 ಕೋಟಿ ರೂ.ಗಿಂತ ಹೆಚ್ಚು ಸಾಲ ಪಡೆಯುವ ಕಂಪನಿಗಳ ಪ್ರಾಯೋಜಕರು ಅಥವ ಡೈರೆಕ್ಟರುಗಳಿಂದ ಅವರ ಪಾಸ್‌ಪೋರ್ಟುಗಳ ಪ್ರಮಾಣೀಕೃತ ನಕಲು ಕೇಳಬೇಕು ಎಂದು ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಹೇಳಲಾಗಿದೆ ಎಂದೂ ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ.

ಎಲ್ಲವೂ ಪೈಪ್‌ಲೈನ್‌ನಲ್ಲಿ......

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ



ಒಂದು ಕಥನದೊಳಗೆ ಸಿಲುಕಿಸಿ ದಿಕ್ಕು ತಪ್ಪಿಸುವ ನವ–ಉದಾರವಾದದ ವಿಧಾನ



ಸರ್ಕಾರವು ತನಗೆ ಬೇಕಾಗುವ ಹೆಚ್ಚುವರಿ ಖರ್ಚಿನ ಹಣ ಹೊಂದಿಸಿಕೊಳ್ಳಲು ರಿಸರ್ವ್ ಬ್ಯಾಂಕಿನ ಮೀಸಲು ನಿಧಿಯನ್ನು ಬಳಸಿಕೊಳ್ಳುವ ಕ್ರಮದ ಸುತ್ತ ನಡೆಯುತ್ತಿರುವ ಚರ್ಚೆಯಲ್ಲಿ ನವ–ಉದಾರ ಅರ್ಥವ್ಯವಸ್ಥೆಯನ್ನು ಮತ್ತು ಅದು ಸರ್ಕಾರದ ಮೇಲೆ ಹೇರುತ್ತಿರುವ ನಿರ್ಬಂಧಗಳನ್ನು ಎರಡೂ ಕಡೆಯವರು ಪ್ರಶ್ನಿಸುವುದಿಲ್ಲ. ಆದರೆ ಈ ಚರ್ಚೆಗಳು ನವ–ಉದಾರ ಆಳ್ವಿಕೆಯ ಸನ್ನಿವೇಶದಲ್ಲಿ ನಡೆಯುತ್ತಿವೆ ಎಂಬ ಅಂಶವನ್ನು ಎಲ್ಲಿಯೂ ಗುರುತಿಸಿಯೇ ಇಲ್ಲ. ನವ–ಉದಾರ ಆಳ್ವಿಕೆಯ ಸಂದರ್ಭದ ಮಿತಿಗೆ ಒಳಗಾಗಿರುವ ಕಥನವನ್ನು ಒಂದು ಸಾರ್ವತ್ರಿಕವಾದ ತಾತ್ವಿಕ ಕಥನ ಎಂಬಂತೆ ಬಿಂಬಿಸಲಾಗುತ್ತಿದೆ. ಈ ಕಥನವನ್ನು ಒಂದು ಸಾರ್ವತ್ರಿಕವಾದ ತಾತ್ವಿಕ ಕಥನ ಎಂಬಂತೆ ಬಿಂಬಿಸಲಾಗುತ್ತಿದೆ. ದಿಕ್ಕು ತಪ್ಪಿಸುವ ಇಂತಹ ಕಥನಗಳನ್ನು ಎಡಪಂಥೀಯರು ಬಯಲಿಗೆಳೆಯಲೇಬೇಕು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ನವ–ಉದಾರವಾದವು ತನ್ನ ಯಜಮಾನಿಕೆಯನ್ನು ಊರ್ಜಿತಗೊಳಿಸಿಕೊಳ್ಳುವ ಉದ್ದೇಶದಿಂದ ಸಾಮಾನ್ಯವಾಗಿ ಅತಿ ಹೆಚ್ಚಾಗಿ ಬಳಸಿಕೊಳ್ಳುವ ವಿಧಾನ ಎಂದರೆ, ಒಂದು ವಿಷಯದ ಬಗ್ಗೆ ನಡೆಯುವ ಎಲ್ಲಾ ಬೌದ್ಧಿಕ ಚರ್ಚೆಗಳನ್ನೂ ಒಂದು ನಿರ್ದಿಷ್ಟ ಕಥನದ ಬಲೆಯಲ್ಲಿ ಸಿಗಿಸಿ ಇಡೀ ಚರ್ಚೆಯನ್ನೇ ದಿಕ್ಕು ತಪ್ಪಿಸುವುದು. ಈ ಮಾತಿಗೆ ಇತ್ತೀಚಿನ ಒಂದು ಉದಾಹರಣೆಯನ್ನು ಗಮನಿಸಬಹುದು. ರಿಸರ್ವ್ ಬ್ಯಾಂಕಿನ "ಸ್ವಾಯತ್ತತೆ"ಗೆ ಸಂಬಂಧಿಸಿದಂತೆ ಜರುಗಿದ ಇತ್ತೀಚಿನ ಚರ್ಚೆಗಳಲ್ಲಿ, ಸರ್ಕಾರ ಹೇಳಿದಂತೆ ರಿಸರ್ವ್ ಬ್ಯಾಂಕ್ ಕೇಳಬೇಕು (ಸರ್ಕಾರದ ನಿಯಂತ್ರಣ) ಎಂದು ಬಯಸುವ ಸರ್ಕಾರ ಮತ್ತು ಅದರ 'ಚೇಲಾ' ಬಂಡವಾಳಶಾಹಿಗಳ ಪರವಾಗಿ ಒಂದು ಗುಂಪು ವಾದಿಸಿದರೆ, ವಿಶ್ವ ಬ್ಯಾಂಕ್–ಐಎಂಎಫ್ ತಾಳಕ್ಕೆ ತಕ್ಕಂತೆ ರಿಸರ್ವ್ ಬ್ಯಾಂಕ್ ಕುಣಿಯಬೇಕು ಎಂದು ಬಯಸುವ ಹಣಕಾಸು ಬಂಡವಾಳದ ಪರವಾಗಿ ಇನ್ನೊಂದು ಗುಂಪು ವಾದಿಸಿತು. ಈ ಎರಡು ಬಯಕೆಗಳಿಗೇ ಚರ್ಚೆ ಸೀಮಿತವಾಯಿತೇ ವಿನಃ, ರಿಸರ್ವ್ ಬ್ಯಾಂಕ್, ಸಂಸದೀಯ ನಿಯಂತ್ರಣದಲ್ಲಿರಬೇಕು ಎಂಬ ಪ್ರಶ್ನೆ ಈ ಚರ್ಚೆಗಳಲ್ಲಿ ಸುಳಿಯಲೇ ಇಲ್ಲ. ತನ್ನ ಬೊಕ್ಕಸ ತುಂಬಿಸಿಕೊಳ್ಳಲು ರಿಸರ್ವ್ ಬ್ಯಾಂಕಿನ "ಮೀಸಲು ನಿಧಿ"ಯ ಮೇಲೆ ಸರ್ಕಾರ ವಕ್ರ ದೃಷ್ಠಿ ಹಾಯಿಸಿದಾಗ ಮೇಲೆದ್ದ ಚರ್ಚೆಯಲ್ಲಿಯೂ ಇದೇ ದಿಕ್ಕು ತಪ್ಪಿಸುವ ವಿದ್ಯಮಾನವನ್ನು ಗಮನಿಸಬಹುದು.

ತೆರಿಗೆ ವಿಧಿಸುವ ಮತ್ತು ಸಾಲ ಪಡೆಯುವ ಮೂಲಕ ತನಗೆ ಬೇಕಾಗುವ ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವ ಅಧಿಕಾರ ಹೊಂದಿರುವ ಸರ್ಕಾರವು ತನ್ನ ಕಾರ್ಯಕ್ರಮಗಳಿಗೆ ಖರ್ಚು ಮಾಡಬೇಕಾದ ಹಣ ಹೊಂದಿಸಿಕೊಳ್ಳಲು ರಿಸರ್ವ್ ಬ್ಯಾಂಕಿನ "ಮೀಸಲು ನಿಧಿ"ಯ ಮೇಲೆ ಕಣ್ಣು ಹಾಕುವ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ನವ–ಉದಾರ ಆಳ್ವಿಕೆಯಲ್ಲಿ, ಹಣಕಾಸು ಬಂಡವಾಳವು ಇಷ್ಟಪಡದ ಯಾವ ಕೆಲಸವನ್ನೂ ಮಾಡುವ ನೈಜ ಅಧಿಕಾರವನ್ನು ಸರ್ಕಾರ ಕಳೆದುಕೊಂಡಿದೆ ಎಂಬುದೇ ಇದಕ್ಕೆ ಉತ್ತರ, ಈ ಪ್ರಶ್ನೆಗೆ. ವಿತ್ತೀಯ ಕೊರತೆ (ಅಂದರೆ, ಸಾಲ ಪಡೆಯುವುದು) ಮತ್ತು ಬಂಡವಾಳಗಾರರ ಮೇಲೆ ತೆರಿಗೆ ವಿಧಿಸುವ ಈ ಎರಡೂ ಕ್ರಮಗಳನ್ನು ಹಣಕಾಸು ಬಂಡವಾಳವು ಇಷ್ಟಪಡುವುದಿಲ್ಲ. (ಮೇಲಾಗಿ, ಮಾಡಬೇಕಾದ ಖರ್ಚುಗಳಿಗಾಗಿ ಹಣ ಹೊಂದಿಸಿಕೊಳ್ಳಲು ದುಡಿಯುವ ಜನತೆಯ ಮೇಲೆ ತೆರಿಗೆ ಹೆಚ್ಚಿಸುವುದರಿಂದ, ಉದ್ಯೋಗಗಳೂ ಹೆಚ್ಚುವುದಿಲ್ಲ ಮತ್ತು ಜನತೆಯ ಕ್ಷೇಮವೂ ಆಗುವುದಿಲ್ಲ). ಹಾಗಾಗಿ, ಸರ್ಕಾರ ತನ್ನ ಕೈಗಳನ್ನು ತಾನೇ ಕಟ್ಟಿಹಾಕಿಕೊಂಡಿದೆ. ಈ ಕಾರಣದಿಂದಾಗಿ, ಚುನಾವಣಾ ವರ್ಷದ ಸಂದರ್ಭದಲ್ಲಿ, ತಾನು ಹಮ್ಮಿಕೊಳ್ಳಬಯಸುವ ಹೊಸ ಕಾರ್ಯಕ್ರಮಗಳ ಖರ್ಚಿಗೆ ಹಣ ಹೊಂದಿಸಿಕೊಳ್ಳಲು ಪರದಾಡುತ್ತಿರುವ ಸರ್ಕಾರವು ರಿಸರ್ವ್ ಬ್ಯಾಂಕಿನ "ಮೀಸಲು ನಿಧಿ"ಯ ಮೇಲೆ ಕಣ್ಣು ಹಾಕಿದೆ. ಹೇಗಾದರೂ ಸರಿ, ಹಣ ಹೊಂದಿಸಿಕೊಳ್ಳಲೇಬೇಕು ಎಂಬ ಒತ್ತಡಕ್ಕೆ ಸರ್ಕಾರ ಒಳಗಾಗಿದೆ. ಸರ್ಕಾರ ಒಳಗಾಗಿರುವ ಈ ಒತ್ತಡದ ಬೇರುಗಳು ನವ–ಉದಾರ ಆಳ್ವಿಕೆಯ ವಾಸ್ತವದಲ್ಲಿ ನೆಲೆಸಿವೆ.

ವಿತ್ತೀಯ ಕೊರತೆಯನ್ನು ಮರೆಮಾಚುವ ಯತ್ನ

ಇನ್ನೂ ಒಂದು ಅಂಶವನ್ನೂ ಇಲ್ಲಿ ಗಮನಿಸಬೇಕಾಗುತ್ತದೆ. ರಿಸರ್ವ್ ಬ್ಯಾಂಕಿನ ಮೀಸಲು ನಿಧಿಯ ಹಣ ಬಳಸಿಕೊಳ್ಳವ ಕ್ರಮವೂ ಸಹ, ವಾಸ್ತವವಾಗಿ, ವಿತ್ತೀಯ ಕೊರತೆಯನ್ನು ಹೆಚ್ಚಿಸುತ್ತದೆ, ಬಜೆಟ್‌ನಲ್ಲಿ ಅದು ಕೊರತೆ ಎಂದು ಕಾಣಿಸಿಕೊಳ್ಳದಿದ್ದರೂ ಸಹ. ಆದರೆ, ರಿಸರ್ವ್ ಬ್ಯಾಂಕಿನ ಒಡೆತನ ಸರ್ಕಾರಕ್ಕೆ ಸೇರಿದೆ ಎಂಬ ನೆಲೆಯಲ್ಲಿ, ಅದೇ ಮೀಸಲು ನಿಧಿಯ ಹಣವನ್ನು ಲಾಭಾಂಶದ ರೂಪದಲ್ಲಿ ಪಡೆಯುವುದೇ ಸುಲಭದ ಮಾರ್ಗ ಎಂಬುದು ಸ್ಪಷ್ಟವಾಗುತ್ತದೆ. ಈ ಲಾಭಾಂಶವು ಬಜೆಟ್‌ನಲ್ಲಿ, ಸರ್ಕಾರದ ಒಂದು ಹೆಚ್ಚುವರಿ ವರಮಾನವಾಗಿ ಕಾಣಿಸಿಕೊಳ್ಳುತ್ತದೆ. ಒಂದು ವೇಳೆ, ವೆಚ್ಚಗಳು ಈ ವರಮಾನಕ್ಕೆ ಸರಿಸಮನಾಗಿ ಹೆಚ್ಚಿದರೂ ಸಹ ವಿತ್ತೀಯ ಕೊರತೆಯಲ್ಲಿ ವ್ಯತ್ಯಾಸ ಇರುವುದಿಲ್ಲ. ಅಂದರೆ, ವಿತ್ತೀಯ ಕೊರತೆ ಏರದಿದ್ದರೂ, ಹೆಚ್ಚಿನ ಖರ್ಚುಗಳಿಗೆ ಹಣ ಹೊಂದಿಸಿಕೊಳ್ಳಲಾಯಿತು.

ಆದರೆ, ಸರ್ಕಾರದ ಖರ್ಚುಗಳಷ್ಟರ ಬಗ್ಗೆಯೇ ನಮ್ಮ ಗಮನ ನೆಟ್ಟಿದ್ದರಿಂದಾಗಿ ಇಂತಹ ಒಂದು ತೀರ್ಮಾನಕ್ಕೆ ಬಂದಿರುತ್ತೇವೆ. ಸರ್ಕಾರ ಮಾತ್ರವಲ್ಲದೆ ರಿಸರ್ವ್ ಬ್ಯಾಂಕಿನಂತಹ ಸರ್ಕಾರದ ಎಲ್ಲ ಅಂಗ ಸಂಸ್ಥೆಗಳನ್ನೂ ಒಳಗೊಂಡ ಇಡೀ ಸರಕಾರೀ ವಲಯವನ್ನು ಗಣನೆಗೆ ತೆಗೆದುಕೊಂಡಾಗ, ಒಟ್ಟು ಖರ್ಚುಗಳು ಏರಿಕೆಯಾಗಿರುತ್ತವೆ (ಸರ್ಕಾರದ ಖರ್ಚುಗಳ ಹೆಚ್ಚಳದಿಂದಾಗಿ), ಒಟ್ಟು ವರಮಾನಗಳು ಏರಿರುವುದಿಲ್ಲ.

ರಿಸರ್ವ್ ಬ್ಯಾಂಕ್, ತನ್ನ ಲಾಭಾಂಶವನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಿದಾಗ ಅದು ಸರಕಾರೀ ವಲಯದೊಳಗಿನ ಒಂದು ಸಂಸ್ಥೆಯಿಂದ ಇನ್ನೊಂದು ಸಂಸ್ಥೆಗೆ ಆದ ವರ್ಗಾವಣೆ, ಅಷ್ಟೇ. ಇಡೀ ಸರಕಾರೀ ವಲಯದ ಒಟ್ಟು ವರಮಾನದಲ್ಲಿ ಏರಿಕೆ ಇರುವುದಿಲ್ಲ. ಆದ್ದರಿಂದ, ಇಡೀ ಸರಕಾರೀ ವಲಯದ ವರಮಾನದ ಕೊರತೆಯು, ಸರ್ಕಾರದ ಖರ್ಚುಗಳ ಹೆಚ್ಚಳದ ಮೊತ್ತಕ್ಕೆ ಸಮನಾಗಿರುತ್ತದೆ. ಸರಕಾರೀ ವಲಯದ ವರಮಾನದ ಈ ಕೊರತೆಯ ಅಂಶವನ್ನು ಸರ್ಕಾರದ ಬಜೆಟ್‌ನಲ್ಲಿ ವಿತ್ತೀಯ ಕೊರತೆಯಲ್ಲಿ ಆದ ಹೆಚ್ಚಳ ಎಂದು ತೋರಿಸುವುದಿಲ್ಲ. ಆದರೆ ಸ್ಥೂಲ ಆರ್ಥಿಕ ದೃಷ್ಠಿಯಲ್ಲಿ, ಇದು ವಿತ್ತೀಯ ಕೊರತೆಯು ಉಂಟುಮಾಡುವಷ್ಟೇ ಪರಿಣಾಮ ಬೀರುತ್ತದೆ. ಅಂದರೆ, ರಿಸರ್ವ್ ಬ್ಯಾಂಕಿನ ಮೀಸಲು ನಿಧಿಯ (ಲಾಭಾಂಶ) ಹಣ ಬಳಸಿಕೊಂಡು ಸರ್ಕಾರವು ತನ್ನ ಖರ್ಚುಗಳನ್ನು ಹೆಚ್ಚಿಸಿಕೊಳ್ಳುವ ಕ್ರಮವು ವಿತ್ತೀಯ ಕೊರತೆಯನ್ನು ಮರೆಮಾಚುವ ಕೆಲಸವಾಗುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ತಕ್ಷಣ ಒಂದು ಪ್ರಶ್ನೆ ಏಳುತ್ತದೆ: ವಿತ್ತೀಯ ಕೊರತೆಯನ್ನು ಸರ್ಕಾರವು, ಬಹಿರಂಗವಾಗಿಯೇ, ವಿತ್ತೀಯ ಕೊರತೆ ಎಂದೇ ಏಕೆ ಒಪ್ಪಿಕೊಳ್ಳುತ್ತಿಲ್ಲ? ಈ ಪ್ರಶ್ನೆಗೆ ಸರಿ ಸುಮಾರು ಉತ್ತರವಾಗಿ, ಹಣ ಕಾಸು ಬಂಡವಾಳವು ವಿತ್ತೀಯ ಕೊರತೆಯನ್ನು ಇಷ್ಟಪಡುವುದಿಲ್ಲ ಎಂಬುದನ್ನು ಈಗಾಗಲೆ ಹೇಳಲಾಗಿದೆ. ಹಣಕಾಸು ಬಂಡವಾಳವು ಜಾಗತೀಕರಣಗೊಂಡಿದೆ, ಆದರೆ ಪ್ರಭುತ್ವವು ರಾಷ್ಟ್ರ–ಪ್ರಭುತ್ವವಾಗಿಯೇ ಉಳಿದಿದೆ. ಹಾಗಾಗಿ, ಹಣಕಾಸು ಬಂಡವಾಳದ ಹುಕುಂಗಳು ಜಾರಿಯಾಗುತ್ತವೆ. ಜಾರಿಮಾಡದಿದ್ದರೆ, ಹಣಕಾಸು ಬಂಡವಾಳವು ಆ ದೇಶದಿಂದ ಕಂಬಿ ಕೀಳುತ್ತದೆ. ಆಗ ಆ ದೇಶದಲ್ಲಿ ಒಂದು ಬಿಕ್ಕಟ್ಟು ಉಂಟಾಗುತ್ತದೆ. ಅದೇನೇ ಇರಲಿ, ಹಣಕಾಸು ಬಂಡವಾಳವು ವಿತ್ತೀಯ ಕೊರತೆಯನ್ನು ಇಷ್ಟಪಡುವುದಿಲ್ಲ, ಏಕೆ? ಈ ಪ್ರಶ್ನೆಗೆ ಉತ್ತರವಾಗಿ ಸಾಮಾನ್ಯವಾಗಿ ಮಂಡಿಸುವ 'ಅದು ಹಣದುಬ್ಬರ ಉಂಟುಮಾಡುತ್ತದೆ' ಎಂಬ ತಾತ್ವಿಕ ವಿವರಣೆಯನ್ನು ಒರೆಗೆ ಹಚ್ಚಿದಾಗ ಸೋಲುತ್ತದೆ.

ಉತ್ಪಾದನೆಗೆ ಬಳಸುವ ಮೂಲ ಸಾಮಗ್ರಿಗಳ ಬೆಲೆ ಹೆಚ್ಚಳದಿಂದಾಗುವ ಹಣದುಬ್ಬರಕ್ಕೂ ಮತ್ತು ವಿತ್ತೀಯ ಕೊರತೆಗೂ ಯಾವ ಸಂಬಂಧವೂ ಇಲ್ಲದಿರುವುದರಿಂದ ಇಂತಹ ಹಣದುಬ್ಬರವನ್ನು ಒತ್ತಟ್ಟಿಗಿಟ್ಟು ನೋಡಿದರೆ, ಹಣದುಬ್ಬರವು, ಹಣದುಬ್ಬರ ಪೂರ್ವ ಬೆಲೆಗಳ ಮಟ್ಟದಲ್ಲೇ ಉಂಟಾದ ಅತಿಯಾದ ಒಟ್ಟು ಬೇಡಿಕೆಯಿಂದ (excess aggregate demand) ಉಂಟಾಗುತ್ತದೆ. ಪೂರೈಕೆಯನ್ನು (supply) ಹೆಚ್ಚಿಸುವ ಮೂಲಕ ಈ ಬೇಡಿಕೆಯನ್ನು ತಣಿಸಲಾಗುವುದಿಲ್ಲ. ಆದ್ದರಿಂದ, ವಿತ್ತೀಯ ಕೊರತೆಯಿಂದಾಗಿ ಹಣದುಬ್ಬರ ಉಂಟಾಗುತ್ತದೆ ಎಂಬ ಹೇಳಿಕೆಯು ಅರ್ಥವ್ಯವಸ್ಥೆಯು ಸದಾ ಕಾಲವೂ "ಪೂರ್ಣ ಉದ್ಯೋಗ" ಸ್ಥಿತಿಯಲ್ಲಿಯೇ ಇದೆ ಎಂಬ ಊಹೆಯ ಮೇಲೆ ನಿಂತಿದೆ. ಅಂದರೆ, ಅರ್ಥವ್ಯವಸ್ಥೆಯಲ್ಲಿ ಒಟ್ಟು ಬೇಡಿಕೆಯ ಕೊರತೆ ಇರಲೇ ಇಲ್ಲ ಎಂದಾಗುತ್ತದೆ. ``Say's Law'' (ಜೀನ್–ಬ್ಯಾಪ್ಟಿಸ್ಟ್ ಸೇ–ಫ್ರೆಂಚ್ ಅರ್ಥಶಾಸ್ತ್ರಜ್ಞ) ಕೂಡ ಹೇಳುವುದು ಇದನ್ನೇ. ಇಂತಹ ಒಂದು ವಿವೇಚನಾಶೂನ್ಯ ವಿಚಾರವನ್ನು "ಮುಖ್ಯಧಾರೆಯ ಅರ್ಥಶಾಸ್ತ್ರ"ವೂ ಧಾರಾಳವಾಗಿ ಬಳಸುತ್ತದೆ.

ವಾಸ್ತವವಾಗಿ, ಬಂಡವಾಳಶಾಹಿಯು ಒಂದು ಬೇಡಿಕೆಯ ಮಿತಿಗೊಳಪಟ್ಟಿರುವ ವ್ಯವಸ್ಥೆ. ಮಾಮೂಲು ಪರಿಸ್ಥಿತಿಯ ಮಾತಿರಲಿ, ಆರ್ಥಿಕ ಚಟುವಟಿಕೆಗಳು ಒಂದು ಉತ್ತುಂಗ ಮಟ್ಟ ತಲುಪಿದಾಗಲೂ "ಪೂರ್ಣ ಉದ್ಯೋಗ" ಸ್ಥಿತಿ ಬಂಡವಾಳಶಾಹಿ ಪದ್ಧತಿಯಲ್ಲಿ ಯಾವತ್ತೂ ಇರಲೇ ಇಲ್ಲ. ಇಂತಹ ಪರಿಸ್ಥಿತಿಗಳಲ್ಲಿ, ವಿತ್ತೀಯ ಕೊರತೆಯನ್ನು ಹಿಗ್ಗಿಸುವ ಮೂಲಕ, ಬೆಲೆಗಳು ಗಣನೀಯಯವಾಗಿ ಏರದಂತೆ ನೋಡಿಕೊಂಡು, ಉದ್ಯೋಗ ಮತ್ತು ಉತ್ಪಾದನೆಗಳನ್ನು ಹೆಚ್ಚಿಸಬಹುದು. ಆರ್ಥಿಕ ಉದಾರೀಕರಣ ನೀತಿಗಳ ಆರಂಭ ಕಾಲದಿಂದಲೂ, ಕೈಗಾರಿಕೆಯಲ್ಲಿ ಉತ್ಪಾದನಾ ಸಾಮರ್ಥ್ಯವು ಪೂರ್ಣವಾಗಿ ಬಳಕೆಯಾಗಿಲ್ಲದ ಮತ್ತು ಸಾಧಾರಣಕ್ಕಿಂತಲೂ ಉನ್ನತ ಮಟ್ಟದಲ್ಲಿರುವ ಆಹಾರ ಧಾನ್ಯಗಳ ದಾಸ್ತಾನುಗಳ ಪರಿಸ್ಥಿತಿ ಭಾರತದಲ್ಲಿದೆ. ಆದ್ದರಿಂದ, ವಿತ್ತೀಯ ಕೊರತೆಯನ್ನು ಹಿಗ್ಗಿಸುವುದರಿಂದಾಗಿ ಒಟ್ಟು ಬೇಡಿಕೆಯಲ್ಲಿ ಹೆಚ್ಚಳವಾಗುವ ಕಾರಣದಿಂದ ಹಣದುಬ್ಬರವಾಗುವುದಿಲ್ಲ. ಬದಲಿಗೆ, ಉತ್ಪಾದನೆ ಮತ್ತು ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಈ ಸಂದರ್ಭದಲ್ಲಿ, ಆಮದುಗಳು ಹೆಚ್ಚುವ ಕಾರಣದಿಂದ ಚಾಲ್ತಿ ಖಾತೆಯಲ್ಲಿ ಕೊರತೆ ಉಂಟಾಗಿ ಹೊರ ದೇಶಗಳಿಗೆ ಪಾವತಿ ಚುಕ್ತಾ ಮಾಡುವ ಸಮಸ್ಯೆ ಏಳುತ್ತದೆ ಎಂಬುದು ನಿಜ. ಆಗ, ಬೇಡಿಕೆಯನ್ನು ತಗ್ಗಿಸುವ ಬದಲು, ಅಮೇರಿಕಾದಲ್ಲಿ ಡೊನಾಲ್ಡ್ ಟ್ರಂಪ್ ಜಾರಿಗೆ ತಂದಿರುವಂತೆ ಆಮದುಗಳನ್ನು ನಿಯಂತ್ರಿಸಬಹುದು.

ಆದ್ದರಿಂದ, ವಿತ್ತೀಯ ಕೊರತೆಯನ್ನು ಹಣಕಾಸು ಬಂಡವಾಳವು ಇಷ್ಟಪಡದಿರುವುದಕ್ಕೂ ಮತ್ತು ಬಂಡವಾಳಶಾಹಿಯ ಒಂದು ಬೇಡಿಕೆ–ಮಿತಿಯ ವ್ಯವಸ್ಥೆಯಲ್ಲಿ, ವಿತ್ತೀಯ ಕೊರತೆಯಿಂದಾಗಿ ಉಂಟಾಗುತ್ತವೆ ಎಂದು ಹೇಳಲಾಗುವ ಅಡ್ಡ ಪರಿಣಾಮಗಳಿಗೂ ಸಂಬಂಧವೇ ಇಲ್ಲ. ಒಂದು ವೇಳೆ, ಸರ್ಕಾರವು ತನ್ನ ಖರ್ಚುಗಳನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ, ತೆರಿಗೆ ವಿಧಿಸುವ ಬದಲು, ತಕ್ಷಣದಲ್ಲಿ ಯಾರಿಗೂ ಹಾನಿಯಾಗದ ರೀತಿಯಲ್ಲಿ ಅರ್ಥವ್ಯವಸ್ಥೆಯ ಕಾರ್ಯಾಚರಣೆಯ ಒಂದು ಅವಶ್ಯ ಅಂಶವಾಗಿ ಬೃಹತ್ ಸಾಲ ಪಡೆಯುವ ಒಂದು ಸಾಂಸ್ಥಿಕ ಏರ್ಪಾಡನ್ನು ನಿರ್ಮಿಸಿಕೊಂಡರೆ, ಬಂಡವಾಳಗಾರರು ದಂಡ ಪಿಂಡಗಳಾಗುತ್ತಾರೆ. ಆಗ, ಹೂಡಿಕೆ ಮಾಡುವ ಬಂಡವಾಳಗಾರರ "ಮೃಗೀಯ ಹುಮ್ಮಸ್ಸು" ಉತ್ತೇಜಿಸುವ ಸಲುವಾಗಿ, ರಿಯಾಯ್ತಿ ಮತ್ತು ಸಬ್ಸಿಡಿಗಳನ್ನು ಒದಗಿಸುವ ಅವಶ್ಯಕತೆಯೂ ಬರುವುದಿಲ್ಲ.

ಬಂಡವಾಳಗಾರರ ಕಾರ್ಯಾಚರಣೆಗೆ ಸಮರ್ಥನೆಯೇ ಇಲ್ಲದಂತಾಗುವ ಒಂದು ಮೂಲಭೂತ ಕಾರಣದಿಂದಾಗಿ ಹಣಕಾಸು ಬಂಡವಾಳವು ವಿತ್ತೀಯ ಕೊರತೆಯನ್ನು ವಿರೋಧಿಸುತ್ತದೆ. ಹಣಕಾಸು ಬಂಡವಾಳದ ಈ ವಿರೋಧವನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಎಲ್ಲ ರೀತಿಯ ಹುಸಿ ತಾತ್ವಿಕ ವಾದಗಳನ್ನು ಮಂಡಿಸಲಾಗುತ್ತಿದೆ. ಈ ಹುಸಿ ತಾತ್ವಿಕ ವಾದಗಳಿಗೆ ಒಂದು ಸಾಂಸ್ಥಿಕ ಸ್ವರೂಪ ಕಲ್ಪಿಸುವ ಉದ್ದೇಶದಿಂದ "ವಿತ್ತೀಯ ಹೊಣೆಗಾರಿಕೆ"ಯಂತಹ ಕಾಯ್ದೆಗಳನ್ನು ಎಲ್ಲೆಡೆಯೂ ರೂಪಿಸಲಾಗಿದೆ. ಹಾಗಾಗಿ, ವಿತ್ತೀಯ ಕೊರತೆಯನ್ನು ಮರೆಮಾಚುವ ಅವಶ್ಯಕತೆ ಬಂದಿದೆ. ಹೆಚ್ಚಿನ ಖರ್ಚುಗಳಿಗೆ ಹಣ ಹೊಂದಿಸಿಕೊಳ್ಳುವ ಸಲುವಾಗಿ ಸರ್ಕಾರವು ರಿಸರ್ವ್ ಬ್ಯಾಂಕಿನ ಮೀಸಲು ನಿಧಿಯ ಹಣ ಬಳಸಿಕೊಳ್ಳವ ಕ್ರಮವು, ವಾಸ್ತವವಾಗಿ, ವಿತ್ತೀಯ ಕೊರತೆಯೇ ಆಗಿದ್ದರೂ ಸಹ, ಬಜೆಟ್‌ನಲ್ಲಿ ಅದು ಕೊರತೆ ಎಂದು ಕಾಣಿಸಿಕೊಳ್ಳದ ಕಾರಣದಿಂದ ಅದರಿಂದ ಹಾನಿ ಇಲ್ಲ ಎಂದು ಹೇಳಲಾಗುತ್ತಿದೆ.

ಸರ್ಕಾರವು ತನಗೆ ಬೇಕಾಗುವ ಹೆಚ್ಚುವರಿ ಖರ್ಚಿನ ಹಣ ಹೊಂದಿಸಿಕೊಳ್ಳಲು ರಿಸರ್ವ್ ಬ್ಯಾಂಕಿನ ಮೀಸಲು ನಿಧಿಯನ್ನು ಬಳಸಿಕೊಳ್ಳುವ ಕ್ರಮದ ಸುತ್ತ ನಡೆಯುತ್ತಿರುವ ಈ ಚರ್ಚೆಯಲ್ಲಿ ನವ–ಉದಾರ ಅರ್ಥವ್ಯವಸ್ಥೆಯನ್ನು ಮತ್ತು ಅದು ಸರ್ಕಾರದ ಮೇಲೆ ಹೇರುತ್ತಿರುವ ನಿರ್ಬಂಧಗಳನ್ನು ಒಪ್ಪಿಕೊಳ್ಳಲಾಗಿದೆ. ಆದರೆ, ಚುನಾವಣಾ ಒತ್ತಡಗಳಿಂದಾಗಿ ಇಂತಹ ನಿರ್ಬಂಧಗಳಿಂದ ಹೊರ ಬರುವ ದಾರಿ ಹುಡುಕಲಾಗಿದೆ. ಹಣದುಬ್ಬರ ಉಂಟಾಗುವ ಕಾರಣದಿಂದ ವಿತ್ತೀಯ ಕೊರತೆ ಸಲ್ಲ ಎಂಬ ತತ್ವವನ್ನು ಒಪ್ಪಿಕೊಂಡಿರುವವರು, ರಿಸರ್ವ್ ಬ್ಯಾಂಕಿನ ಮೀಸಲು ನಿಧಿಯನ್ನು ಬಳಸಿಕೊಳ್ಳುವ ಕ್ರಮ ಮತ್ತು ವಿತ್ತೀಯ ಕೊರತೆ ಎರಡೂ ಒಂದೇ ಅಲ್ಲ, ಬೇರೆ ಬೇರೆ ಎಂದು ವಾದಿಸುತ್ತಾರೆ. ಅದೇ ರೀತಿಯಲ್ಲಿ, ಈ ವಾದದ ವಿರೋಧಿಗಳು, ನವ–ಉದಾರ ಅರ್ಥವ್ಯವಸ್ಥೆಯನ್ನು ಮತ್ತು ಅದು ಸರ್ಕಾರದ ಮೇಲೆ ಹೇರುತ್ತಿರುವ ನಿರ್ಬಂಧಗಳನ್ನು ಒಪ್ಪಿಕೊಳ್ಳುತ್ತಾರೆ. ಇವರ ತಕರಾರು ಏನೆಂದರೆ, ಸರ್ಕಾರ ರಿಸರ್ವ್ ಬ್ಯಾಂಕಿನ ಮೇಲೆ ನಿರ್ಬಂಧ ಹೇರುವಂತಿಲ್ಲ ಎಂಬುದು.

ಈ ಚರ್ಚೆಗಳು ನವ–ಉದಾರ ಆಳ್ವಿಕೆಯ ಸನ್ನಿವೇಶದಲ್ಲಿ ನಡೆಯುತ್ತಿವೆ. ಆದರೆ, ಈ ಅಂಶವನ್ನು ಎಲ್ಲಿಯೂ ಗುರುತಿಸಿಯೇ ಇಲ್ಲ. ನವ–ಉದಾರ ಆಳ್ವಿಕೆಯ ಸಂದರ್ಭದ ಮಿತಿಗೆ ಒಳಗಾಗಿರುವ ಕಥನವನ್ನು ಒಂದು ಸಾರ್ವತ್ರಿಕವಾದ ತಾತ್ವಿಕ ಕಥನ ಎಂಬಂತೆ ಬಿಂಬಿಸಲಾಗುತ್ತಿದೆ. ಅಂದರೆ, ನವ–ಉದಾರ ಆಳ್ವಿಕೆಯೇ ಒಂದು ಸಮಸ್ತ ಪ್ರಪಂಚ, ಅದನ್ನು ಬಿಟ್ಟರೆ ಗತಿ ಇಲ್ಲ ಎಂಬಂತೆ ಬಿಂಬಿಸಲಾಗುತ್ತಿದೆ. ಈ ವಿಷಯವನ್ನು ಚರ್ಚಿಸುವಾಗ ಎಲ್ಲರೂ ತಮ್ಮ ಗಮನವನ್ನು ನವ–ಉದಾರ ಆಳ್ವಿಕೆಯ ಬಗ್ಗೆಯೇ ಕೇಂದ್ರೀಕರಿಸಿರುತ್ತಾರೆ. ಅದರಾಚೆಗೆ ನೋಡುವುದೇ ಇಲ್ಲ. ಹಾಗಾಗಿ, ಎಲ್ಲರನ್ನೂ ಇಂತಹ ಒಂದು ಕಥನದೊಳಗೆ ಸಿಗಿಸಿ ದಿಕ್ಕು ತಪ್ಪಿಸುವ ಮೂಲಕ ನವ–ಉದಾರವಾದದ ಯಜಮಾನಿಕೆಯನ್ನು ಖಾತ್ರಿಗೊಳಿಸಿಕೊಳ್ಳುವ ಹುನ್ನಾರ ಇದಾಗಿದೆ.

ರಿಸರ್ವ್ ಬ್ಯಾಂಕಿನ ಮೀಸಲು ನಿಧಿಯನ್ನು ಬಳಸಿಕೊಳ್ಳುವ ಕ್ರಮ ಮತ್ತು ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವ ಕ್ರಮಗಳು ಬೇರೆ ಬೇರೆ ಅಲ್ಲ, ಎರಡೂ ಒಂದೇ, ಮತ್ತು, ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವ ಕ್ರಮವು ಅವಶ್ಯವಾಗಿ ಹಾನಿಕರವಾಗಿರಲೇಬೇಕು ಎಂದೇನಿಲ್ಲ (ಸರ್ಕಾರವು ತೆರಿಗೆ ಸಂಗ್ರಹದ ಮೂಲಕ ಮಾಡುವ ಖರ್ಚುಗಳಿಗಿಂತಲೂ ವಿತ್ತೀಯ ಕೊರತೆಯ ಮೂಲಕ ಮಾಡುವ ಖರ್ಚುಗಳು ಕೆಟ್ಟದ್ದು ಎಂಬುದರಲ್ಲಿ ಅನುಮಾನವಿಲ್ಲ) ಎಂಬ ಅಂಶವನ್ನು ನಾವು ಒಪ್ಪಿಕೊಂಡಾಗ, ನವ–ಉದಾರ ಆಳ್ವಿಕೆಯನ್ನೇ ವಿಮರ್ಶಾತ್ಮಕವಾಗಿ ಚರ್ಚಿಸುವುದು ಸಾಧ್ಯವಾಗುತ್ತದೆ. ಜನತೆಯ ಕ್ಷೇಮಾಭಿವೃದ್ಧಿ ಮತ್ತು ಸಾಮಾಜಿಕ–ವಲಯದ ಕಾರ್ಯಕ್ರಮಗಳಿಗೆ ಖರ್ಚುಮಾಡುವ ಸಲುವಾಗಿ, ಸರ್ಕಾರವು ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ವಿಧಿಸಿ ಆದಾಯ ಹೆಚ್ಚಿಸಿಕೊಳ್ಳುವ ಮೂಲಕ, ಅದು ಸಾಧ್ಯವಾಗದಿದ್ದಲ್ಲಿ ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವ ಮೂಲಕವಾದರೂ ಸರಿಯೇ, ಅಥವಾ, ಈ ಉದ್ದೇಶಕ್ಕಾಗಿ ರಿಸರ್ವ್ ಬ್ಯಾಂಕಿನ ಮೀಸಲು ನಿಧಿಯನ್ನು ಬಳಸಿಕೊಂಡರೂ ಸರಿಯೇ, ಸರ್ಕಾರದ ಖರ್ಚುಗಳನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ ಎಂಬುದನ್ನು ಚರ್ಚಿಸುವುದು ಸಾಧ್ಯವಾಗುತ್ತದೆ.

ಬಡ ಜನತೆಗೆ ಜೀವನಾಧಾರವಾಗಿರುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನೂ ಸರ್ಕಾರ ನಿತ್ರಾಣಗೊಳಿಸಿರುವುದು ಸಂಪನ್ಮೂಲಗಳ ಕೊರತೆಯಿಂದಾಗಿಯೇ ಅಲ್ಲ, ಬದಲಿಗೆ, ಸರ್ಕಾರದ ಖರ್ಚುಗಳ ಹಾದಿಯಲ್ಲಿ ಹಣಕಾಸು ಬಂಡವಾಳದ ತಿಕ್ಕಲುತನ ಅಡ್ಡ ಬರುತ್ತದೆ ಎಂಬ ಅಂಶವನ್ನು ಮರೆಯುವಂತಿಲ್ಲ. ನವ–ಉದಾರವಾದವು ಉತ್ತೇಜಿಸುತ್ತಿರುವ ಈ ಅಂಶವನ್ನು ಸಾರ್ವಜನಿಕ ಕಥನಗಳಲ್ಲಿ ಮರೆ ಮಾಡಲಾಗುತ್ತಿದೆ. ದಿಕ್ಕು ತಪ್ಪಿಸುವ ಇಂತಹ ಕಥನಗಳನ್ನು ಎಡಪಂಥೀಯರು ಬಯಲಿಗೆಳೆಯಲೇಬೇಕು.

ಬುಲಂದ್‌ಶಹರ್ ತನಿಖೆ: ಎಸ್‌ಐಟಿ ಮತ್ತು ಉತ್ತರಪ್ರದೇಶ ಆಡಳಿತದಿಂದ ಮುಚ್ಚಿ ಹಾಕುವ ಪ್ರಯತ್ನ

ಪುಟ 2 ರಿಂದ


ಜನವರಿ 5ರಂದು ಜಿಲ್ಲೆಯ ಸಿಯಾನ ಬ್ಲಾಕ್‌ನ ನಯಾಬಾಸ್ ಮತ್ತು ಚಿಂದ್ರಾವತಿ ಹಳ್ಳಿಗಳಿಗೆ ಭೇಟಿ ನೀಡಿ ಕಲೆ ಹಾಕಿದ ಮಾಹಿತಿಯ ಆಧಾರದಲ್ಲಿ ಡಿಸೆಂಬರ್ 3ರ ಘಟನೆಯ ತನಿಖೆಯ ಮೇಲೆ ಉತ್ತರಪ್ರದೇಶದ ಸರಕಾರದ ಸಂಕುಚಿತ ಅಜೆಂಡಾ ತನ್ನ ಪ್ರಭಾವ ಬೀರುತ್ತಿದೆ ಎಂಬ ತೀರ್ಮಾನಕ್ಕೆ ಬಂದಿದೆ.

ಈ ಹಿಂದೆ ಘಟನೆ ನಡೆದ ಕೆಲವೇ ದಿನಗಳೊಳಗೆ ಮೊದಲ ಸಿಪಿಐ(ಎಂ) ನಿಯೋಗ ಭೇಟಿ ನೀಡಿತ್ತು. ಮಹ್ವ, ನಯಾಬಾಸ್ ಮತ್ತು ಚಿಂದ್ರಾವತಿ ಈ ಘಟನೆಯ ಪರಿಣಾಮ ನೇರವಾಗಿ ತಟ್ಟಿರುವ ಹಳ್ಳಿಗಳು. ಸುಮಾರು ಒಂದು ತಿಂಗಳು ತಲೆಮರೆಸಿಕೊಂಡಿದ್ದು, ಕೊನೆಗೂ ಪೋಲೀಸರು ಬಂಧಿಸಿದ ಈ ಘಟನೆಯ ಪ್ರಮುಖ ಆರೋಪಿ, ಭಜರಂಗ ದಳದ ಮುಖಂಡ ಯೋಗೇಶ್ ರಾಜ್ ನಯಾಬಾಸ್ ಹಳ್ಳಿಯ ನಿವಾಸಿ.

ನಿಯೋಗ ಈ ಪ್ರದೇಶದಲ್ಲಿ ಹಲವರನ್ನು ಭೇಟಿ ಮಾಡಿತು. ಇದರಲ್ಲಿ ಸುಳ್ಳು ಆಪಾದನೆ ಹೇರಲ್ಪಟ್ಟವರು, ಈಗ ಗೋವಧೆಯ ಆಪಾದನೆಯ ಮೇಲೆ ಬಂಧಿತರಾದವರ ಕುಟುಂಬದವರು, ದನದ ಅವಶೇಷಗಳು ಕಾಣಬಂದ ಮಹ್ವದ ಗ್ರಾಮ ಪ್ರಧಾನರು ಮತ್ತು ಪೋಲೀಸ್ ಅಧಿಕಾರಿಯೊಂದಿಗೆ ಕೊಲ್ಲಲ್ಪಟ್ಟ ಯುವಕ ಸುಮೀತ್‌ನ ಕುಟುಂಬದವರೂ ಸೇರಿದ್ದಾರೆ. ವಿವರವಾದ ಚರ್ಚೆಗಳ ನಂತರ ಸಿಪಿಐ(ಎಂ) ನಿಯೋಗಕ್ಕೆ ಕಂಡು ಬಂದ ಸಂಗತಿಗಳು/ ತೀರ್ಮಾನಗಳು ಹೀಗಿವೆ:

1. ರಾಜ್ಯ ಸರಕಾರ ಈ ಕೇಸಿನ 'ಗೋವಧೆ'ಯ ಅಂಶದ ಮೇಲೆ ಗಮನ ಕೇಂದ್ರೀಕರಿಸಲು ಮತ್ತು ಆ ದಿನ ನಡೆದ ಹೀನ ಕೊಲೆ ಕೃತ್ಯದಿಂದ ಗಮನ ಬೇರೆಡೆಗೆ ಸೆಳೆಯಲು ದುರುದ್ದೇಶಪೂರ್ವಕ ಪ್ರಯತ್ನ ನಡೆಸುತ್ತಿದೆ. ಎಸ್‌ಐಟಿಯನ್ನು ನೇಮಿಸಿದ್ದೇ ಇದಕ್ಕಾಗಿ.
2. ಎಸ್‌ಐಟಿ ರಾಜ್ಯ ಸರಕಾರದ ಒತ್ತಡದ ಅಡಿಯಲ್ಲಿ ಕೆಲಸ ಮಾಡುತ್ತಿದೆಯಾದ್ದರಿಂದ ಒಂದು ನಿಷ್ಪಕ್ಷಪಾತ ತನಿಖೆಯನ್ನು ನಿರೀಕ್ಷಿಸುವಂತಿಲ್ಲ. ತಥಾಕಥಿತ ಗೋವಧೆಗಾಗಿ ಯೋಗೇಶ್ ರಾಜ್ ದೂರಿನ ಮೇಲೆ ಮೊದಲನೇ ಸುತ್ತಿನಲ್ಲಿ ಬಂಧಿಸಿದವರನ್ನು 15 ದಿನಗಳೊಳಗೇ ಅಮಾಯಕರು ಎಂದು ಬಿಡುಗಡೆ ಮಾಡಬೇಕಾಗಿ ಬಂದಿತ್ತು. ಈಗ ಎರಡನೇ ಸುತ್ತಿನ ಬಂಧನಗಳಾಗಿವೆ. ಇವೂ ಕೂಡ ಮೊದಲಿನ ಸುತ್ತಿನಂತೆಯೇ ದೋಷಪೂರಿತವಾಗಿವೆ. ಹೀಗೆ ಬಂಧಿಸಿರುವ ಏಳು ಮಂದಿಯಲ್ಲಿ ಒಬ್ಬಾತ ಅರವಿಂದ ಶರ್ಮ, ಇಲ್ಲಿನ ಬ್ರಾಹ್ಮಣ ಸಮಾಜದ ಅಧ್ಯಕ್ಷರಾಗಿರುವ ಖೇಮ್‌ಚಂದ್ ಶರ್ಮರವರ ಮಗ. ಆತನ ಏಕೈಕ 'ಅಪರಾಧ'ವೆಂದರೆ ಈ ಪ್ರದೇಶದಲ್ಲಿ ಹೆಸರಾಗಿರುವ ಸಾಮಾಜಿಕ ಕಾರ್ಯಕರ್ತ ಮೆಹಬೂಬ್ ಆತನ ನಿಕಟ ಮಿತ್ರ. ನಾವು ಭೇಟಿ ಮಾಡಿ ಮಾತಾಡಿದ ಪ್ರತಿಯೊಬ್ಬರೂ ಈ ಬಂಧನಗಳ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಅಂದರೆ ಆದಿತ್ಯನಾಥ ಸರಕಾರದ ಅಡಿಯಲ್ಲಿ ಉತ್ತರಪ್ರದೇಶದಲ್ಲಿ ಅಂತರ-ಧರ್ಮೀಯ ಮದುವೆಗಳು 'ಲವ್ ಜಿಹಾದ್' ಅಡಿಯಲ್ಲಿ ಅಪರಾಧಗಳಷ್ಟೇ ಅಲ್ಲ, ಅಂತರ-ಧರ್ಮೀಯ ಗೆಳೆತನಗಳೂ ಶಿಕ್ಷಾರ್ಹ ಅಪರಾಧಗಳೇ ಆಗುತ್ತವೆ.
3. ಎಸ್‌ಐಟಿ ಹರಿಯ ಬಿಟ್ಟಿರುವ ಹೊಸ ಸಿದ್ಧಾಂತ ಎಂದರೆ ದನಗಳಿಗೆ ಗುಂಡಿಕ್ಕಿ ಸಾಯಿಸಿ ತುಣುಕುಗಳಾಗಿ ಮಾಡಲಾಯಿತು. ಲೈಸೆನ್ಸ್ ಪಡೆದ ಬಂದೂಕುಗಳಿರುವ ಮೆಹಬೂಬ್‌ನಂತಹ ಮುಸ್ಲಿಮರ ಮೇಲೆ ಗುರಿಯಿಡಲಾಗಿದೆ. ಇನ್ನೊಂದು ಉದಾಹರಣೆಯೆಂದರೆ ರೈಫಲ್ ಶೂಟಿಂಗ್‌ನ ರಾಷ್ಟ್ರೀಯ ತಂಡದ ಆಟಗಾರ ನದೀಮ್‌ನ್ನು ಕೂಡ ಬಂಧಿಸಲಾಗಿದೆ. ಏಕೆಂದರೆ ಆತನ ಬಳಿಯೂ ಲೈಸೆನ್ಸ್ ಪಡೆದಿರುವ ಬಂದೂಕು ಇದೆ. ಹಲವು ತಿಂಗಳುಗಳಿಂದ ಬಳಸದೇ ಬಿಟ್ಟಿರುವ ಆತನ ಹಳೆಯ ಜಿಪ್ಸಿ ಕಾರನ್ನು ಈ 'ಅಪರಾಧ'ಕ್ಕೆ ಬಳಸಲಾಗಿದೆ ಎಂಬುದು ಪೋಲೀಸರ ಕತೆ.
4. ನಿಜವಾಗಿ ಹೇಳಬೇಕೆಂದರೆ, ಈ ಗೋವಧೆಯೆಂಬ ಇಡೀ ಘಟನೆಯ ಬಗ್ಗೆಯೇ ಒಂದು ನಿಷ್ಪಕ್ಷಪಾತ ತನಿಖೆಯ ಅಗತ್ಯವಿದೆ. ಘಟನಾವಳಿಗಳನ್ನು ಜಾಗರೂಕತೆಯಿಂದ ಪರೀಕ್ಷಿಸಿದರೆ, ದನದ ಮಾಂಸವನ್ನು ಡಿಸೆಂಬರ್ 2ರ ರಾತ್ರಿ ತರಲಾಯಿತು, ಮತ್ತು ಹಿಂಸಾಚಾರ ಹಾಗೂ ಗಲಭೆ ಸೃಷ್ಟಿಸಬೇಕೆಂದು ದೃಢನಿರ್ಧಾರ ಮಾಡಿದ್ದವರು ಅದನ್ನು ಕಣ್ಣಿಗೆ ಕಾಣುವಂತೆ ಪ್ರದರ್ಶಿಸಿರುವ ಸಾಧ್ಯತೆ ಬಹಳ ಇದೆ. ಈ ದನಗಳು ಯಾರದ್ದು? ಹಳ್ಳಿಯಲ್ಲಿ ಯಾರದ್ದಾದರೂ ದನ ಕಳೆದು ಹೋಗಿರುವ ಬಗ್ಗೆ ದೂರುಗಳೇನಾದರೂ ಇವೆಯೇ?
5. ಮುಸ್ಲಿಮರ ಒಂದು ಗುಂಪು ಮಹ್ವ ಗ್ರಾಮದ ಒಬ್ಬ ರೈತನ ಗದ್ದೆಗೆ ಹೋಗಿ ದನಗಳನ್ನು ಕೊಂದರು ಎಂಬುದನ್ನು ಒಪ್ಪುವುದು ಬಹಳ ಕಷ್ಟದ ಸಂಗತಿ. ಈ ಪ್ರದೇಶದಲ್ಲಿನ ಎಲ್ಲ ಗದ್ದೆಗಳೂ ಹಿಂದೂಗಳ ಒಡೆತನದಲ್ಲಿ ಇವೆ. ಬಿಡಾಡಿ ದನಗಳು ತಮ್ಮ ಬೆಳೆಗಳನ್ನು ಹಾಳುಗೆಡವುತ್ತಿರುವುದರಿಂದಾಗಿ ರೈತರೇ ಸ್ವತಃ ಅಥವ ಕೂಲಿಗಳ ಮೂಲಕ ತಮ್ಮ ಬೆಳೆಗಳನ್ನು ದನಗಳಿಂದ ರಕ್ಷಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ. ಮಾಜಿ ಗ್ರಾಮ ಪ್ರಧಾನ ಮತ್ತು ಯಾರ ಗದ್ದೆಯಲ್ಲಿ ದನದ ಅವಶೇಷಗಳು ಕಂಡು ಬಂದವೋ ಆ ರೈತನ ಸೋದರ ಪ್ರೇಂಜಿತ್ ಈ ಗದ್ದೆಯಲ್ಲಿ ಕೂಲಿಯಾಳುಗಳು ಇದ್ದರು, ಡಿಸೆಂಬರ್ 3ರ ಮುಂಜಾನೆ ಅವರೇ ಈ ಅವಶೇಷಗಳನ್ನು ಮೊದಲು ನೋಡಿದವರು. ಗೋವಧೆಯೆಂಬುದು ಅಲ್ಲಿ ನಡೆದಿದ್ದರೆ ಗುಂಡಿನ ಸಪ್ಪಳ ಅಥವ ಇನ್ನಾವುದೇ ವಧೆಯ ವಿಧಾನ ಅವರ ಗಮನಕ್ಕೆ ಬರುತ್ತಿತ್ತು ಎಂದಿದ್ದಾರೆ.
6. ಡಿಸೆಂಬರ್ 2 ರಂದು ಸಿಯಾನ ಮತ್ತು ನಯಾಬಾಸ್‌ನಲ್ಲಿ ಸಂಘ ಪರಿವಾರದ ಸಭೆಗಳು ನಡೆದಿವೆ, ಅವನ್ನು ಉದ್ದೇಶಿಸಿ ಅದೇ ಯೋಗೇಶ್ ರಾಜ್ ಮಾತಾಡಿರುವುದಾಗಿ ನಿಯೋಗಕ್ಕೆ ತಿಳಿದು ಬಂತು. ಇದರಿಂದಾಗಿ ಈ ಘಟನೆಯ ಹಿಂದೆ ಒಂದು ಪಿತೂರಿಯ ಸಾಧ್ಯತೆ ಇದೆಯೆಂದಾಗುತ್ತದೆ. ಈ ಸಭೆಗಳಲ್ಲಿ ಬುಲಂದ್ ಶಹರಿನಲ್ಲಿ ಲಕ್ಷಾಂತರ ಮುಸ್ಲಿಮರು ಭಾಗವಹಿಸುವ ಎಜಿತಿಮಾನ್ ನಡೆಯುತ್ತದೆ ಎಂದು ಪ್ರಸ್ತಾವಿಸಲಾಯಿತು ಎಂದೂ ವರದಿಯಾಗಿದೆ.
7. ಸಾರ್ವಜನಿಕ ಹೇಳಿಕೆಗಳು, ಮೊದಲಿಗೆ, ತಹಸಿಲ್ದಾರ್ ರಾಜಕುಮಾರ್ ಭಾಸ್ಕರ್ ನೀಡಿದ ಹೇಳಿಕೆಯಲ್ಲಿಯೂ (ಹಿಂದುಸ್ತಾನ್ ಟೈಮ್ಸ್, ಡಿಸೆಂಬರ್ 4) 'ಪಿತೂರಿ' ಎಂಬ ಪದ ಬಂದಿದೆ. ಆದರೆ ಅವರು ಈ ಬಗ್ಗೆ ಸಿಪಿಐ(ಎಂ) ನಿಯೋಗದೊಂದಿಗೆ ಮಾತಾಡಲು ನಿರಾಕರಿಸಿದರು. ಅವರಿಗೆ ಕೇವಲ ಎಸ್‌ಐಟಿಯೊಂದಿಗೆ ಮಾತ್ರ ಮಾತಾಡಬೇಕು ಎಂದು ಹೇಳಲಾಗಿದೆಯಂತೆ. ಇಂತಹ ಪರಿಸ್ಥಿತಿಯಲ್ಲಿ, ಈ ಹಳ್ಳಿಗಳ ಮಾರ್ಗವಾಗಿ ಮರಳಬೇಕಾಗಿದ್ದ ಸಾವಿರಾರು ಜನರನ್ನು ಬೇರೆ ದಾರಿಯಲ್ಲಿ ಹೋಗುವಂತೆ ಮಾಡಿ 2013ರಲ್ಲಿ ಮುಝಫ್ಫರ್‌ನಗರದಲ್ಲಿ ನಡೆದಂತಹ ಭೀಕರ ಕೋಮು ಗಲಭೆಗಳನ್ನು ತಪ್ಪಿಸಲಾಯಿತು. ಆದರೆ ಗೋವಿನ ಕಳೇಬರವನ್ನು, ಎದ್ದು ಕಾಣುವಂತೆ ಪ್ರದರ್ಶಿಸಿದ್ದು ಇಂತಹ ಕೋಮು ಜ್ವಾಲೆ ಹೊತ್ತಿಕೊಳ್ಳುವಂತೆ ಮಾಡಲಿಕ್ಕಾಗಿಯೇ ಇರಬಹುದು.
8. ಈ ಎಲ್ಲ ಕಾರಣಗಳಿಂದಾಗಿ, ಒಂದು ನಿಷ್ಪಕ್ಷಪಾತೀ ತನಿಖೆ ಅಗತ್ಯವಾಗಿದೆ, ಇದಕ್ಕೆ ಸಮಯಮಿತಿಯಿರಬೇಕು, ಹೈಕೋರ್ಟಿನ ಒಬ್ಬ ಹಾಲಿ ನ್ಯಾಯಾಧೀಶರ ಅಡಿಯಲ್ಲಿ ಈ ತನಿಖೆ ನಡೆಯುವುದು ಅಗತ್ಯವಾಗಿದೆ.
9. ಸಂಘ ಪರಿವಾರದ ವಿಷಭರಿತ ರಾಜಕೀಯದ ಒಟ್ಟಾರೆ ಪ್ರಭಾವ ಮತ್ತು ಸಾಮಾನ್ಯ ಜನಗಳ ಬದುಕಿನ ಮೇಲೆ ಪ್ರಭಾವ ರೈತರು ತಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹೇಳಿಕೊಂಡುದರಲ್ಲಿಯೂ ಸ್ಪಷ್ಟವಾಗುತ್ತದೆ. ದುಡಿಯಬಲ್ಲ ಗಂಡಸರೆಲ್ಲರೂ ಪೋಲೀಸ್ ಬಂಧನದ ಭಯದಿಂದ ಊರು ಬಿಟ್ಟಿದ್ದಾರೆ. ಕೂಲಿಯಾಳುಗಳನ್ನು ಬೆದರಿಸಲಾಗುತ್ತಿದೆ. ಅವರೂ ಈ ಪ್ರದೇಶ ಬಿಟ್ಟು ಓಡಿಹೋಗಿದ್ದಾರೆ. ರೈತರಿಗೆ ಕಬ್ಬಿನ ಬೆಳೆಗಳ ಕಟಾವಿಗೆ ಜನಗಳೇ ಸಿಗದಂತಾಗಿದೆ.

   ಹೈನು ವ್ಯವಸಾಯದಲ್ಲಿ ಇರುವವರ ಮೇಲೂ ಈ ರಾಜಕೀಯದ ಪರಿಣಾಮ ಬಿದ್ದಿದೆ. ಶರೀಫ್ ಖಾನ್ ಎಂಬ ಹಿರಿಯ ನಾಗರಿಕರೊಬ್ಬರ ಅನುಭವ ಇದಕ್ಕೆ ಉದಾಹರಣೆ. ಅವರು ತಪ್ಪಾಗಿ ಬಂಧಿಸಿ ನಂತರ ಬಿಡುಗಡೆ ಮಾಡಿದ ಶಪ್ರುದ್ದೀನ್ ಎಂಬಾತನ ಸೋದರ ಮಾವ. ಮುಸ್ಲಿಂ ಸಮುದಾಯದಲ್ಲಿ ಭೀತಿ ಎಷ್ಟು ವ್ಯಾಪಕವಾಗಿದೆಯೆಂದರೆ ಅವರು ತಮ್ಮ ಹೈನುಗಾರಿಕೆ ಬಿಡಬೇಕಾಗಿ ಬಂದಿದೆ ಎನ್ನುತ್ತಾರೆ ಇವರು. ಅವರೇ ಸ್ವತಃ 34,000 ರೂ.ಗೆ ಒಂದು ದನ ಖರೀದಿಸಿದರು. ಅದಕ್ಕೆ ಏನಾದರೂ ಆದರೆ ತನ್ನನ್ನು ಬಂಧಿಸಬಹುದು ಎಂಬ ಭೀತಿಯಿಂದ ಅದನ್ನು ತಮ್ಮ ಹಳ್ಳಿಯ ಒಬ್ಬ ಬ್ರಾಹ್ಮಣ ವಿಧವೆಗೆ ಪುಕ್ಕಟೆಯಾಗಿ ಕೊಟ್ಟಿರುವುದಾಗಿ ಹೇಳಿದರು.



ವ್ಯಂಗ್ಯಚಿತ್ರ: ಮಂಜುಲ್

10. ಡಿಸೆಂಬರ್ 3 ರಂದು ಕೊಲ್ಲಲ್ಪಟ್ಟ ಯುವಕ ಸುಮೀತ್‌ನ ಕುಟುಂಬದ ಶೋಚನೀಯ ಸ್ಥಿತಿಯೂ ಸಂಘ ಪರಿವಾರದ ರಾಜಕೀಯ ಹೇಗೆ ಯುವ ಬದುಕುಗಳನ್ನು ಹಾಳುಗೆಡವುತ್ತಿದೆ ಎಂಬುದಕ್ಕೆ ಸಾಕ್ಷಿ. ನೋಯ್ಡ ದಲ್ಲಿ ವಿದ್ಯಾರ್ಥಿಯಾಗಿರುವ ಆತ ಚಿಕಿತ್ಸೆಗೆಂದು ಮನೆಗೆ ಬಂದಿದ್ದ, ಸದ್ದು ಕೇಳಿ ಆತ ಜನಜಂಗುಳಿಯಲ್ಲಿ ಸೇರಿಕೊಂಡ. ಆತ ಸೇರಿಕೊಂಡ ಬಗೆಯ ಬಗ್ಗೆ ವಿವಾದವಿದೆ. ಆತನ ಕುಟುಂಬದವರ ಪ್ರಕಾರ ಆತ ಸಂದರ್ಭವಶಾತ್ ಅಲ್ಲಿದ್ದ. ಆದರೆ ಹಳ್ಳಿಯ ಕೆಲವರ ಪ್ರಕಾರ ಆತ ಗೊತ್ತಿದ್ದೇ ಗಲಭೆಕೋರ ಜನಜಂಗುಳಿಯಲ್ಲಿ ಸೇರಿಕೊಂಡ. ಇಲ್ಲಿರುವ ಅಂಶ ಎಂದರೆ ಹೇಗೆ ಸಂಘ ಪರಿವಾರ ಮತ್ತು ಯೋಗೇಶ್ ರಾಜ್ ನಂತಹ ಅವರ ಮುಖಂಡರ ಉದ್ದೇಶಪೂರ್ವಕವಾದ ಯೋಜನೆ ಯುವ ಬದುಕುಗಳನ್ನು ನಾಶಮಾಡುತ್ತಿವೆ ಎಂಬುದು.
11. ಪ್ರಮುಖ ಆರೋಪಿ ಯೋಗೇಶ್ ರಾಜ್‌ನನ್ನು ಕಂಡು ಹಿಡಿಯಲು ಪೋಲೀಸರಿಗೆ ಹಲವು ವಾರಗಳು ಬೇಕಾದರೆ, ಹಿಂಸಾಚಾರದಲ್ಲಿ ನೇರವಾಗಿ ಇದ್ದ "ಗುರೂಜಿ" ಎನಿಸಿಕೊಂಡಿರುವ ಉಪೇಂದ್ರ ಯಾದವ್ ನಂತವರನ್ನು ಇನ್ನೂ ಬಂಧಿಸಲ್ಲವಾದರೆ, ಇನ್ನೊಂದೆಡೆಯಲ್ಲಿ ತಾವು ತ್ವರಿತ ಕಾರ್ಯಾಚರಣೆ ನಡೆಸಿದ್ದೇವೆ ಎಂದು ತೋರಿಸಲು ಈ ಹಿಂಸಾಚಾರದಲ್ಲಿ ಇಲ್ಲದವರನ್ನು ಬಂಧಿಸಲಾಗಿದೆ. ಉದಾಹರಣೆಗೆ, 80 ವರ್ಷದ ಹಿರಿಯ ನಾಗರಿಕ ಚಂದ್ರಪಾಲ್ ಸಿಂಗ್ ಮತ್ತು ದನದ ಕಳೇಬರ ಕಾಣಿಸಿಕೊಂಡ, ಅದರ ಬಗ್ಗೆ ಮೊದಲಿಗೆ ತಿಳಿಸಿದ್ದ ರೈತ ರಾಜ್ ಸಿಂಗ್ ಬಂಧನ ವಿಚಿತ್ರ ಎಂದು ಪರಿಗಣಿಸಲಾಗುತ್ತಿದೆ. ಪೋಲೀಸರ ಇಂತಹ ಕೃತ್ಯಗಳು ಈ ತನಿಖೆಯ ವಿಶ್ವಾಸಾರ್ಹತೆಯ ಬಗ್ಗೆಯೇ ಪ್ರಶ್ನೆ ಹುಟ್ಟಿಸಿವೆ. ಈ ತನಿಖೆಯನ್ನು ಪ್ರಮುಖ ಅಪರಾಧಿಗಳನ್ನು ರಕ್ಷಿಸಲೆಂದೇ ರೂಪಿಸಿದಂತಿದೆ. ಏಕೆಂದರೆ ಇವರು ಸಂಘ ಪರಿವಾರಕ್ಕೆ ಸೇರಿದವರು ಮತ್ತು ಇವಿಧ ಸಂಘಟನೆಗಳ ಹೆಸರಲ್ಲಿ ಈ ಪ್ರದೇಶದಲ್ಲಿ ಸಕ್ರಿಯರಾಗಿರುವವರು.

ಈ ಎಲ್ಲ ಅಂಶಗಳ ಆಧಾರದಲ್ಲಿ ಸಿಪಿಐ(ಎಂ) ನಿಯೋಗ ಈ ವರದಿಯ ಆರಂಭದಲ್ಲಿ ಹೇಳಿರುವಂತೆ, ಎಸ್‌ಐಟಿ ಮತ್ತು ಉತ್ತರಪ್ರದೇಶ ಆಡಳಿತದಿಂದ ಇದನ್ನು ಮುಚ್ಚಿ ಹಾಕುವ ಕೆಲಸ ನಡೆಯುತ್ತಿದೆ ಎಂಬ ತೀರ್ಮಾನಕ್ಕೆ ಬಂದು ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ನಿಷ್ಪಕ್ಷಪಾತೀ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿದೆ.

ಪೌರತ್ವ ತಿದ್ದುಪಡಿ ಮಸೂದೆಗೆ ಈಶಾನ್ಯ ಭಾರತದಲ್ಲಿ ಭುಗಿಲೆದ್ದ ಪ್ರತಿಭಟನೆ

ಈಶಾನ್ಯ ಭಾರತದಲ್ಲಿ ಒಂದೊಂದು ರಾಜ್ಯದಲ್ಲಿ ಒಂದೊಂದು ಸಮಯ ಸಾಧಕ ನಿಲುವು ತಳೆದು ಸಾಕಷ್ಟು ಯಶಸ್ಸನ್ನೂ ಗಳಿಸಿರುವ ಬಿಜೆಪಿ ಕಾಲೂರಿಯೇ ಬಿಟ್ಟಿದೆ ಎಂದುಕೊಂಡು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಪೌರತ್ವ ತಿದ್ದುಪಡಿ ಮಸೂದೆ ಮಂಡಿಸಿತು. ಆದರೆ ವಾಸ್ತವವಾಗಿ ಬಿಜೆಪಿ ಈ ಮೂಲಕ ತನ್ನ ಕೋಮುವಾದಿ ಅಜೆಂಡಾವನ್ನು ಮುಂದೊತ್ತುತ್ತಿದೆ ಎಂದು ಇತ್ತೀಚೆಗೆ ಅದನ್ನು ಬೆಂಬಲಿಸಲಾರಂಭಿಸಿದವರಿಗೂ ಅನಿಸಿದ್ದು ಅಸ್ಸಾಂ ಮತ್ತು ಇತರ ಎಲ್ಲ ಈಶಾನ್ಯ ರಾಜ್ಯಗಳಲ್ಲಿ ಇದರ ವಿರುದ್ಧ ವ್ಯಾಪಕ ಪ್ರತಿಭಟನೆ ಭುಗಿಲೆದ್ದಿದೆ. ಇದನ್ನು ಶಮನಗೊಳಿಸಲು ಅಸ್ಸಾಂ ಒಪ್ಪಂದದ 6ನೇ ಪರಿಚ್ಛೇದವನ್ನು ಜಾರಿಗೆ ತರುವ ಭರವಸೆ ನೀಡುವ ಪ್ರಯತ್ನವನ್ನು ಸ್ವತಃ ಪ್ರಧಾನ ಮಂತ್ರಿಗಳು ಮತ್ತು ಗೃಹಮಂತ್ರಿಗಳು ನಡೆಸಿದರೂ ಪ್ರತಿಭಟನೆ ತೀವ್ರಗೊಳ್ಳುತ್ತಿದೆ. ಬಾಂಗ್ಲಾದೇಶದ ಹಿಂದೂಗಳು ಯಾವ ಸಮಯ ಮಿತಿಯೂ ಇಲ್ಲದೆ ಭಾರತದ ಪೌರತ್ವ ಪಡೆಯಲು ಅಸ್ಸಾಂ ಒಪ್ಪಂದದ 5ನೇ ಪರಿಚ್ಛೇದವನ್ನು ರದ್ದು ಮಾಡಿದರೆ 6ನೇ ಪರಿಚ್ಛೇದ ಅರ್ಥಹೀನವಾಗುತ್ತದೆ ಎಂದು ಬಿಜೆಪಿ ಮುಖಂಡರಿಗೆ ಪ್ರತ್ಯುತ್ತರ ನೀಡಿದ್ದಾರೆ. ಧರ್ಮದ ಆಧಾರದಲ್ಲಿ ಪೌರತ್ವ ಕೊಡುವ, ಅಥವ ನಿರಾಕರಿಸುವ ನಡೆ ನಮ್ಮ ಸಂವಿಧಾನದ ಜಾತ್ಯತೀತ ಸ್ವರೂಪಕ್ಕೆ ಧಕ್ಕೆ ತಂದಿದೆ ಎಂಬ ಭಾವನೆ ವ್ಯಾಪಕವಾಗಿದೆ.

ಅಸ್ಸಾಂನಲ್ಲಿ ಪ್ರಮುಖ ಬುದ್ಧಿಜೀವಿಗಳು, ಸಾಹಿತಿಗಳು, ಕಲಾವಿದರು ಇದರ ವಿರುದ್ಧ ಸೆಟೆದು ನಿಂತಿದ್ದಾರೆ. "ಅಸ್ಸಾಂ ಉಳಿಸಿ, ಸಂವಿಧಾನ ಉಳಿಸಿ" ಚಳುವಳಿಯ ಬೆಂಬಲಕ್ಕೆ ನಿಂತಿದ್ದಾರೆ. ಇದುವರೆಗೆ ಬಿಜೆಪಿಯನ್ನು ಬೆಂಬಲಿಸಿ ಅದಕ್ಕೆ ಈಶಾನ್ಯ ಭಾರತದಲ್ಲಿ ಕಾಲೂರಲು ಅವಕಾಶ ಮಾಡಿಕೊಟ್ಟ ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ (ಎಎಎಸ್‌ಯು) ಮತ್ತು ಅಸ್ಸಾಂ ಗಣ ಪರಿಷದ್ ಈ ಪ್ರತಿಭಟನೆಗಳಿಂದಾಗಿ ಬಿಜೆಪಿಯಿಂದ ಸಂಬಂಧ ಕಡಿದುಕೊಳ್ಳುವ ಒತ್ತಡಕ್ಕೆ ಒಳಗಾಗಿವೆ. ಕಳೆದ ವಿಧಾನಸಭೆಯ ವೇಳೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿದ ಇಬ್ಬರು ಕಾನೂನು ತಜ್ಞರು ಈ ತಿದ್ದುಪಡಿಯನ್ನು ಬಲವಾಗಿ ಖಂಡಿಸಿದ್ದಾರೆ. ಮುಖ್ಯಮಂತ್ರಿಯ ಬೆಂಬಲಕ್ಕೆ ನಿಂತ ಕೆಲವು ಪ್ರಮುಖ ಚಿತ್ರಕಲಾವಿದರು, ಚಿತ್ರ ಸಾಹಿತಿಗಳೂ ಇದನ್ನು ವಿರೋಧಿಸಿ ಬಿಜೆಪಿ-ವಿರೋಧಿ ಚಳುವಳಿಗೆ ಬೆಂಬಲ ಸೂಚಿಸಿದ್ದಾರೆ. ಸ್ವತಃ ಬಿಜೆಪಿಯ ಒಬ್ಬ ರಾಜ್ಯ ವಕ್ತಾರರೇ ಈ ತಿದ್ದುಪಡಿಯನ್ನು ವಿರೋಧಿಸಿ ಬಿಜೆಪಿಗೆ ರಾಜೀನಾಮೆ ನೀಡಿದ್ದಾರೆ.




ಬಾಂಗ್ಲಾದೇಶ : ಹಸೀನಾ ಹ್ಯಾಟ್ರಿಕ್

ಒಟ್ಟು 298 ಸ್ಥಾನಗಳಲ್ಲಿ 288 ಸ್ಥಾನ ಗಳನ್ನು ಪ್ರಧಾನಿ ಹಸೀನಾ ನೇತೃತ್ವದ ಅವಾಮಿ ಲೀಗ್ ಮೈತ್ರಿ ಕೂಟ ಗೆದ್ದಿದೆ. ಬಿಎನ್‌ಪಿ ನೇತೃತ್ವದ ನ್ಯಾಷನಲ್ ಯೂನಿಟಿ ರಂಗ ಕೇವಲ 7 ಸ್ಥಾನಗಳನ್ನು ಗೆದ್ದಿದ್ದು, ಉಳಿದ 3 ಸ್ಥಾನಗಳು ಸ್ವತಂತ್ರ ಅಭ್ಯರ್ಥಿಗಳ ಪಾಲಾಗಿವೆ. ಅವಾಮಿ ಲೀಗ್ ಕೂಟ ಪಡೆದ ಶೇ. 80 ಮತ್ತು ವಿರೋಧಿ ಕೂಟದ ಶೇ. 15 ಮತಗಳಿಕೆ ಬಗ್ಗೆ ಆಶ್ಚರ್ಯ–ಅನುಮಾನ ವ್ಯಕ್ತಪಡಿಸಲಾಗಿದೆ. ಹಿಂದೆ ಅವಾಮಿ ಲೀಗ್ ಮತಗಳಿಕೆ ಶೇ. 37 ರಿಂದ 45 ಇದ್ದು, ಒಮ್ಮೆ ಮಾತ್ರ ಶೇ. 50 ದಾಟಿತ್ತು. ಹಿಂದೆ ವಿರೋಧಿ ಪಕ್ಷ ಬಿಎನ್‌ಪಿ ಯ ಮತಗಳಿಕೆ ಶೇ. 37 ರಿಂದ 45 ಇತ್ತು ಎಂಬುದು ಆಶ್ಚರ್ಯ–ಅನುಮಾನಕ್ಕೆ ಕಾರಣ. ಚುನಾವಣಾ ಆಯೋಗವು ಕೆಲವೊಂದು ಕಡೆ ಸಣ್ಣ ಪುಟ್ಟ ಘಟನೆಗಳು ನಡೆದಿರುವುದನ್ನು ಒಪ್ಪಿಕೊಂಡ್ಡಿದ್ದರು ಸಹಾ, ಒಟ್ಟಾರೆಯಾಗಿ ಚುನಾವಣೆ ಮುಕ್ತ ಹಾಗೂ ಬಹುತೇಕ ಶಾಂತಿಯುತ ವಾಗಿ ನಡೆದಿರುವುದರಿಂದ, ವಿರೋದ ಪಕ್ಷಗಳ ಹೊಸ ಚುನಾವಣೆಯ ನಡೆಸಬೇಕೆಂಬ ಬೇಡಿಕೆಯನ್ನು ತಳ್ಳಿ ಹಾಕಿದೆ. ರಾಜಧಾನಿ ಡಾಕಾ ಹೊರತು ಪಡಿಸಿದರೆ, ಉಳಿದ ಎಲ್ಲಾ ಜಿಲ್ಲೆಗಳ ಮತಕೇಂದ್ರಗಳಲ್ಲಿ ಒಂದಲ್ಲ ಒಂದು ರೀತಿಯಾಗಿ ಹಿಂಸಾಚಾರ, ಬೆದರಿಕೆ, ದೊಂಬಿ, ಆಡಳಿತ ರೂಢ ಪಕ್ಷದ ಬೆಂಬಲಿಗರಿಂದ ಮತಕೇಂದ್ರಗಳ ವಶ ಪಡಿಸುವಿಕೆಯ ವರದಿಗಳು ಇವೆ.

ನಾಗರಾಜ ನಂಜುಂಡಯ್ಯ

ಬಾಂಗ್ಲಾದೇಶದ ಸಂಸತ್ತಿಗೆ ಕಳೆದ ಡಿಸೆಂಬರ್ 30, 2018 ರಂದು ಚುನಾವಣೆ ನಡೆಯಿತು. ಪ್ರಧಾನ ಮಂತ್ರಿ ಶೇಖ್ ಹಸೀನಾ ಅವರ ಅವಾಮಿ ಲೀಗ್ ಪಕ್ಷದ ನೇತೃತ್ವದ ಮಹಾ ಮೈತ್ರಿಕೂಟ ಬಾಂಗ್ಲಾದೇಶದ ಚುನಾವಣಾ ಇತಿಹಾಸದಲ್ಲಿಯೇ ಕಂಡರಿಯದಂತಹ ಹೊಸ ದಾಖಲೆ ಬರೆದಿದೆ.

1971ರಲ್ಲಿ ನಡೆದ ಯುದ್ಧದ ನಂತರ ಬಾಂಗ್ಲಾದೇಶವು ಸ್ವತಂತ್ರ ದೇಶವಾಯಿತು. ಆ ನಂತರ ನಡೆದ ಎಲ್ಲಾ ಚುನಾವಣಾ ದಾಖಲೆಗಳನ್ನು ಶೇಕ್ ಹಸೀನಾ ರವರು ಮುರಿದು, ಸತತ ಮೂರನೆ ಬಾರಿಗೆ ಅಧಿಕಾರವನ್ನು ಪಡೆದಿದ್ದಾರೆ. ಬಾಂಗ್ಲಾದೇಶದ 11ನೇ ಸಂಸತ್ತಿಗೆ ಒಟ್ಟು 300 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಒಂದರಲ್ಲಿ ಅಭ್ಯರ್ಥಿಯ ನಿಧನದಿಂದಾಗಿ ಚುನಾವಣೆಯನ್ನು ಮುಂದಾಡಲಾಗಿತ್ತು. ಇನ್ನೊಂದರಲ್ಲಿ ಹಿಂಸೆ – ಗಲಭೆಗಳಿಂದಾಗಿ ಚುನಾವಣಾ ಆಯೋಗ ಫಲಿತಾಂಶ ವನ್ನು ತಡೆಹಿಡಿದಿದೆ.

ಅವಾಮಿ ಲೀಗ್ ಮೈತ್ರಿಕೂಟಕ್ಕೆ ಭಾರೀ ಬಹುಮತ

ಜಗತ್ತಿನ ಎಂಟನೇ ಅತಿ ದೊಡ್ಡ ಜನಸಂಖ್ಯೆಯನ್ನು ಹೊಂದಿರುವ ಈ ದೇಶದಲ್ಲಿ ಒಟ್ಟು 10.4 ಕೋಟಿ ನೊಂದಾಯಿತ ಮತದಾರರಿದ್ದಾರೆ. ಶೇಕಡಾ 80ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ಹೇಳಿಕೆ ನೀಡಿದೆ. 300 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಎಲ್ಲಾ ಪಕ್ಷಗಳನ್ನು ಒಳಗೊಂಡಂತೆ ಒಟ್ಟು 1861 ಅಭ್ಯರ್ಥಿಗಳು ಚುನಾವಣೆಯ ಕಣದಲ್ಲಿ ಸ್ಪರ್ಧಿಸಿದ್ದರು. ಅಂತಿಮವಾಗಿ ಆಯೋಗ ಪ್ರಕಟಿಸಿದ ಒಟ್ಟು 298 ಸ್ಥಾನಗಳಲ್ಲಿ 288 ಸ್ಥಾನ ಗಳನ್ನು ಪ್ರಧಾನಿ ಹಸೀನಾ ನೇತೃತ್ವದ ಅವಾಮಿ ಲೀಗ್ ಮೈತ್ರಿ ಕೂಟ ಗೆದ್ದಿದೆ. ಪ್ರಮುಖ ವಿರೋಧ ಪಕ್ಷ ವಾದ ಬಾಂಗ್ಲಾದೇಶ ರಾಷ್ಟ್ರೀಯ ಪಕ್ಷ (ಬಿಎನ್‌ಪಿ) ನೇತೃತ್ವದ ನ್ಯಾಷನಲ್ ಯೂನಿಟಿ ರಂಗ (ಎನ್‌ಯುಎಫ್) ಕೇವಲ 7 ಸ್ಥಾನಗಳನ್ನು ಗೆದ್ದಿದ್ದು, ಉಳಿದ 3 ಸ್ಥಾನಗಳು ಸ್ವತಂತ್ರ ಅಭ್ಯರ್ಥಿಗಳ ಪಾಲಾಗಿವೆ.

ಅವಾಮಿ ಲೀಗ್ ನ ಮೈತ್ರಿಕೂಟ ಶೇ.82 ರಷ್ಟು ಮತಗಳಿಸಿದ್ದು, 2008 ರಲ್ಲಿ ಪಡೆದಿದ್ದ ಶೇ.76 ರಷ್ಟು ಅಂದರೆ ಒಟ್ಟು 263 ಸ್ಥಾನಗಳ ತನ್ನದೇ ಹಳೆಯ ದಾಖಲೆಯನ್ನು ಮೀರಿ ಮತ್ತಷ್ಟು ಉತ್ತಮಪಡಿಸಿಕೊಂಡಿದೆ. ವಿರೋಧ ಪಕ್ಷವಾದ ಬಿಎನ್‌ಪಿ ನೇತೃತ್ವದ ನ್ಯಾಷನಲ್ ಯೂನಿಟಿ ಫ್ರಂಟ್ ಈ ಬಾರಿಯ ಚುನಾವಣೆಯಲ್ಲಿ ಶೇ.15 ರಷ್ಟು ಮತ ಪಡೆದು ಕೇವಲ 7 ಸ್ಥಾನಗಳನ್ನು ಪಡೆದು ಹೀನಾಯ ಸ್ಥಿತಿಗೆ ಕುಸಿದಿದೆ. ಬಾಂಗ್ಲಾ ದೇಶದ ಕಮ್ಯೂನಿಸ್ಟ್ ಪಕ್ಷ (ಸಿಪಿಬಿ) ನೇತೃತ್ವದ ಎಡ– ಪ್ರಜಾಸತ್ತಾತ್ಮಕ ಫ್ರಂಟ್ 83 ಸ್ಥಾನಗಳಿಗೆ ಸ್ಪರ್ಧಿಸಿತ್ತು ಶೇ.1.2 ರಷ್ಟು ಮತ ಪಡೆದಿದೆ. ಬಿಎನ್‌ಪಿ ಯ ನಾಯಕಿ ಖಲೀದಾ ಜಿಯಾ ಟ್ರಸ್ಟ್ ಒಂದರ ಹಣಕಾಸು ಅವ್ಯವಹಾರದ ಆರೋಪದ ಮೇಲೆ 17 ವರ್ಷಗಳ ಜೈಲು ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಸತ್ ಚುನಾವಣೆ ನಡೆದಿದೆ.

ಹಿಂಸೆ, ಬೆದರಿಕೆ, ನಕಲಿ ಮತದಾನ, ಕೊಲೆ ಆರೋಪ

ಚುನಾವಣೆಯ ಫಲಿತಾಂಶ ಹೊರಬಂದ ನಂತರ, ವಿರೋಧ ಪಕ್ಷಗಳು ದೊಡ್ಡ ಪ್ರಮಾಣದ ಆರೋಪಗಳ ಸುರಿಮಳೆ ಸುರಿಸಿದ್ದಾರೆ. ಇವರೊಂದಿಗೆ ಹಲವು ಪತ್ರಿಕಾ ವರದಿಗಾರರು, ಕೆಲವು ಆರ್ಥಿಕ ತಜ್ಞರು ಕೂಡ ಆರೋಪಗಳನ್ನು ಮಾಡಿದ್ದಾರೆ. ಇವುಗಳಲ್ಲಿ ಕೆಲವು ಸತ್ಯಾಂಶಗಳನ್ನು ಕಡೆಗಣಿಸುವಂತಿಲ್ಲವೆಂದು ಹಲವು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಾಜಧಾನಿ ಡಾಕಾ ಹೊರತು ಪಡಿಸಿದರೆ, ಉಳಿದ ಎಲ್ಲಾ ಜಿಲ್ಲೆಗಳ ಮತಕೇಂದ್ರಗಳಲ್ಲಿ ಒಂದಲ್ಲ ಒಂದು ರೀತಿಯಾಗಿ ಹಿಂಸಾಚಾರ, ಬೆದರಿಕೆ, ದೊಂಬಿ, ಆಡಳಿತ ರೂಢ ಪಕ್ಷದ ಬೆಂಬಲಿಗರಿಂದ ಮತಗಟ್ಟೆ ಕೇಂದ್ರಗಳ ವಶ ಪಡಿಸುವಿಕೆಯ ವರದಿಗಳು ಇವೆ. ಸಿಕ್ಕಿರುವ ಮಾಹಿತಿಗಳ ಪ್ರಕಾರ ಇಬ್ಬರು ಭದ್ರತಾ ಸಿಬ್ಬಂದಿ ಸೇರಿದಂತೆ ಕನಿಷ್ಠ 19 ಮಂದಿ ಮೃತಪಟ್ಟಿದ್ದಾರೆ. ಆದರೆ ಇವರಲ್ಲಿ ಹೆಚ್ಚಿನವರು ಅವಾಮಿ ಲೀಗ್ ನ ಬೆಂಬಲಿಗರು. ಬೆಳಿಗ್ಗೆ 8 ಗಂಟೆಗೆ ಮತದಾನ ಆರಂಭವಾದಾಗ, ಮಂದ ಗತಿಯಲ್ಲಿ ಮತದಾನವಾಗಿ ಎರಡು ಗಂಟೆಯ ವರೆವಿಗೆ ಕೇವಲ ಶೇ.10 ರಷ್ಟು ಮಾತ್ರ ಮತದಾನ ವಾಗಿತ್ತು. ಉಳಿದ ಸಮಯದಲ್ಲಿ ಶೇಕಡಾ 80ರಷ್ಟು ಮತದಾನ ಹೇಗಾಯಿತು? ಎಂಬ ಸಂಶಯವನ್ನು ಹಲವು ಪತ್ರಿಕಾ ವರದಿಗಾರರು ವ್ಯಕ್ತಪಡಿಸಿದ್ದಾರೆ.

ಈ ಮದ್ಯೆ ವಿರೋಧಿ ರಂಗ ಎನ್‌ಯುಎಫ್ ನ ಸುಮಾರು 68 ಅಭ್ಯರ್ಥಿಗಳು ಹಿಂಸಾಚಾರ, ಬೆದರಿಕೆಗಳಿಂದಾಗಿ, ಚುನಾವಣೆ ನಡೆಯುತ್ತಿದ್ದ ಸಂದರ್ಭದಲ್ಲಿಯೇ, ಚುನಾವಣೆಯಿಂದ ತಮ್ಮ ಅಭ್ಯರ್ಥಿ ವಾಪಸಾತಿ ಘೋಷಿಸಿದ್ದಾರೆ. ಕಳೆದ ಬಾರಿ ನಡೆದ ಚುನಾವಣೆಯಲ್ಲಿ ಬಿಎನ್‌ಪಿ ಚುನಾವಣೆಯನ್ನು ಬಹಿಷ್ಕರಿಸಿತ್ತು ಎಂಬುದನ್ನು ಗಮನಿಸಬೇಕು.

ಚುನಾವಣಾ ಆಯೋಗದ ನಿಯಮದಂತೆ, ಅಂದೇ ಸುಮಾರು 40,000 ಮತದಾನ ಕೇಂದ್ರಗಳಲ್ಲಿ ಎಣಿಕೆ ಕಾರ್ಯ ಆರಂಭಗೊಂಡಿತು. ಪ್ರಮುಖ ವಿರೋಧ ಪಕ್ಷವಾದ ಬಿಎನ್‌ಪಿ ಯ ವಕ್ತಾರರಾದ, ರಿಜ್ವಿ ಅಹಮ್ಮದ್ ಅವರು ಹೇಳಿಕೆ ನೀಡಿ, ತಮ್ಮ ಪಕ್ಷದ ಪೋಲಿಂಗ್ ಏಜೆಂಟ್ ರನ್ನು ಹಲವು ಕಡೆ ಮತಗಟ್ಟೆ ಕೇಂದ್ರಗಳ ಒಳಗೆ ಸೇರಿಸಲಿಲ್ಲ. ಅಂತಹ ಕಡೆ, ಯಥೇಚ್ಛವಾಗಿ ಅವಾಮಿ ಪಕ್ಷದವರು, ಬೂತ್ ಗಳನ್ನು ತಮ್ಮ ವಶಕ್ಕೆ ಪಡೆದು, ನಕಲಿ ಮತಗಳನ್ನು ಭಾರೀ ಪ್ರಮಾಣದಲ್ಲಿ ಬೂತ್ ಒಳಗೆ ತುಂಬಿದ್ದಾರೆ. ಹಲವು ಕಡೆ ಮತ ಚಲಾಯಿಸಲು ಬಂದಿದ್ದವರನ್ನು ಹಾಗೆ ವಾಪಸ್ಸು ಕಳುಹಿಸಲಾಗಿದೆ. ಮತ್ತಷ್ಟು ಕಡೆ, ನಿಮ್ಮ ಮತ ಚಲಾಯಿಸಲಾಗಿದೆ ಎಂದು ಕೇವಲ 'ಬೆರಳಿಗೆ ಶಾಯಿ ಗುರುತು ಹಚ್ಚಿ' ಹಾಗೆ ವಾಪಸ್ಸು ಕಳುಹಿಸಲಾಗಿದೆ ಎಂಬ ಆರೋಪವನ್ನು ಮಾಡಿದ್ದಾರೆ.

ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷರಾದ, ಸಲೀಮ್ ರವರು ಕೂಡ, ಪತ್ರಿಕಾ ಹೇಳಿಕೆಯಲ್ಲಿ, ನೇತ್ರಕೋನಾ, ರಂಗ್ಪುರ್, ಕಿಶೋರ್ಗಂಜ್, ಕುಷ್ಟಿಯಾ, ಬ್ರಾಹ್ಮಣ ಬರಿಯಾ, ಕುಲ್ನಾ, ಬ್ಯಾರಿಶಾಲ್ ಇನ್ನಿತರೆ ಜಿಲ್ಲೆಗಳಲ್ಲಿ, ಭಾರೀ ದೊಡ್ಡ ಪ್ರಮಾಣದಲ್ಲಿ ನಕಲಿ ಮತದಾನವಾಗಿದೆ. ಹಿಂಸೆ, ಬೆದರಿಕೆಗಳ ಮೂಲಕ ಮತಗಟ್ಟೆ ಗಳನ್ನು ವಶ ಪಡಿಸಿಕೊಂಡು. ಮತ ಪತ್ರಗಳನ್ನು ತುಂಬಲಾಗಿದೆ ಎಂಬುದಾಗಿ ಆರೋಪವೆಸಗಿ, ಹೊಸ ಚುನಾವಣೆಗೆ ಒತ್ತಾಯಿಸಿದ್ದಾರೆ. ಚುನಾವಣಾ ಫಲಿತಾಂಶ ಪ್ರಕಟಗೊಂಡ ನಂತರ, ಇದೊಂದು ನಕಲಿ ಮತದಾರರಿಂದ ಚುನಾಯಿತವಾದ "ನಕಲಿ ಸಂಸತ್ತು" ಎಂದು ಸಲೀಮ್ ವ್ಯಾಖ್ಯಾನಿಸಿದ್ದಾರೆ.

ಅವಾಮಿ ಲೀಗ್ ಕೂಟ ಪಡೆದ ಶೇ. 80 ಮತ್ತು ವಿರೋಧಿ ಕೂಟದ ಶೇ. 15 ಮತಗಳಿಕೆ ಬಗ್ಗೆ ಆಶ್ಚರ್ಯ–ಅನುಮಾನ ವ್ಯಕ್ತಪಡಿಸಲಾಗಿದೆ. ಅವಾಮಿ ಲೀಗ್ ಮತಗಳಿಕೆ ಶೇ. 37 ರಿಂದ 45 ಇದ್ದು ಒಮ್ಮೆ ಮಾತ್ರ ಶೇ. 50 ದಾಟಿತ್ತು. ವಿರೋಧಿ ಪಕ್ಷ ಬಿಎನ್‌ಪಿ ಯ ಮತಗಳಿಕೆ ಶೇ. 37 ರಿಂದ 45 ಇತ್ತು ಎಂಬುದು ಆಶ್ಚರ್ಯ–ಅನುಮಾನಕ್ಕೆ ಕಾರಣ.

ಚುನಾವಣಾ ಆಯೋಗವು ಕೆಲವೊಂದು ಕಡೆ ಸಣ್ಣ ಪುಟ್ಟ ಘಟನೆಗಳು ನಡೆದಿರುವುದನ್ನು ಒಪ್ಪಿಕೊಂಡ್ಡಿದ್ದರು ಸಹಾ, ಒಟ್ಟಾರೆಯಾಗಿ ಚುನಾವಣೆ ಮುಕ್ತ ಹಾಗೂ ಬಹುತೇಕ ಶಾಂತಿಯುತ ವಾಗಿ ನಡೆದಿರುವುದರಿಂದ, ವಿರೋದ ಪಕ್ಷಗಳ ಹೊಸ ಚುನಾವಣೆಯ ನಡೆಸಬೇಕೆಂಬ ಬೇಡಿಕೆಯನ್ನು ತಳ್ಳಿ ಹಾಕಿದೆ. ಜೊತೆಗೆ, ಹಿಂಸೆ, ದೊಂಬಿಗೆ ಕಾರಣಗಳನ್ನು ಹಾಗೂ ಬೂತ್ ವಶಪಡಿಸಿಕೊಂಡ ಆರೋಪಗಳ ಬಗ್ಗೆ ಕಾಳಜಿ ವ್ಯಕ್ತಪಡಿಸಿ, ಸೂಕ್ತ ತನಿಖೆ ನಡೆಸಿ, ತಪ್ಪು ಮಾಡಿದವರನ್ನು ಕಾನೂನು ರೀತ್ಯಾ ಶಿಕ್ಷೆಗೆ ಗುರಿಪಡಿಸಲಾಗುವುದು ಎಂಬ ಎಚ್ಚರಿಕೆಯ ಹೇಳಿಕೆಯನ್ನು ಚುನಾವಣಾ ಆಯೋಗ ನೀಡಿದೆ.

ಹಸೀನಾ ಪ್ರಕಾರ ವಿಜಯದ ಗುಟ್ಟು

ಫಲಿತಾಂಶ ಪ್ರಕಟವಾದ ನಂತರ, ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ 71 ವರ್ಷ ದ, ಪ್ರಧಾನಿ ಹಸೀನಾ ರವರು, ಅವಾಮಿ ಲೀಗ್ ನೇತೃತ್ವದ ಮೈತ್ರಿಕೂಟಕ್ಕೆ ದೇಶದ ಜನರು ತಂದು ಕೊಟ್ಟ ಅತ್ಯದ್ಭುತ ವಿಜಯವಿದಾಗಿದೆ. ಅವರಿಗೆ ನಾನು ತುಂಬಾ ಚಿರಋಣಿಯಾಗಿರುವೆನು ಎಂದು ಅಭಿನಂದಿಸಿದರು.

ಇದು ನನ್ನ ವೈಯಕ್ತಿಕ ವರ್ಚಸ್ಸಿನ ಜಯವಲ್ಲವೆಂದು ಪರಿಗಣಿಸದೆ, ಈ ಜಯವನ್ನು ಒಂದು ದೊಡ್ಡ ಜವಾಬ್ದಾರಿ ಎಂದು ಸ್ವೀಕರಿಸುವೆ ಹಾಗೂ ದೇಶದ ಜನರು ನಮ್ಮ ಮೇಲೆ ಇಟ್ಟಿರುವ ನಂಬಿಕೆ ಮತ್ತು ಅರ್ಹತೆಯೆಂದು ಭಾವಿಸುವೆ ಎಂದಿದ್ದಾರೆ. ವಿದೇಶಿ ಪತ್ರಕರ್ತರೊಬ್ಬರು ವಿರೋಧ ಪಕ್ಷಗಳ ಆರೋಪಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ, "ಬಾಂಗ್ಲಾದೇಶ ದ ಜನರಿಗೆ ವಿರೋಧ ಪಕ್ಷದವರ ಪರಿಚಯವೇ ಸರಿಯಾಗಿ ತಿಳಿದಿಲ್ಲ. ಆದ್ದರಿಂದಲೇ, ಜನರು ಅವರನ್ನು ಗುರುತಿಸುವಲ್ಲಿ ವಿಫಲವಾಗಿದ್ದಾರೆ" ಎಂದು ಸರಳವಾಗಿ ಉತ್ತರಿಸಿದ್ದಾರೆ. ಚುನಾವಣೆ ಯಲ್ಲಿ ಬೂತ್ ಗಳನ್ನು ವಶ ಪಡಿಸಿಕೊಂಡು, ಮೋಸವೆಸಗಿಸಲಾಗಿದೆ ಎಂಬ ವಿರೋಧ ಪಕ್ಷಗಳ ಆರೋಪಗಳು ಸತ್ಯಕ್ಕೆ ದೂರವಾದುವುಗಳು. ಚುನಾವಣಾ ಆಯೋಗವು ತುಂಬ ಮುಕ್ತ ಹಾಗೂ ಶಾಂತಿಯುತವಾಗಿ ಚುನಾವಣೆಯನ್ನು ನಡೆಸಿಕೊಟ್ಟಿದೆ. ಮತದಾರರು ಸೂಕ್ತ ವಾಗಿ ಸ್ಪಂದಿಸುವ ಮೂಲಕ ಸಹಕರಿಸಿದ್ದಾರೆ. ವಿರೋಧ ಪಕ್ಷಗಳೇ ಹಿಂಸೆ ನಡೆಸಿರುವುದರಿಂದ ನಮ್ಮ ಅವಾಮಿ ಲೀಗ್ ಮೈತ್ರಿಕೂಟದ 17 ಮಂದಿ ಈ ಗಲಭೆಗಳಲ್ಲಿ ಮೃತ ಪಟ್ಟಿದ್ದಾರೆ. ಹಾಗಾಗಿಯೇ, ಹೊಸ ಚುನಾವಣೆ ನಡೆಸುವ ಅಗತ್ಯ ಖಂಡಿತ ಇಲ್ಲವೆಂದಿದ್ದಾರೆ.

ಪಶ್ಚಿಮ ಪಾಕಿಸ್ತಾನದ ಮಿಲಿಟರಿ ಸರಕಾರದ ಜತೆ ಶಾಮೀಲಾಗಿ ಬಾಂಗ್ಲಾದೇಶ ವಿಮೋಚನಾ ಸಮರದಲ್ಲಿ ಜನರ ನರಮೇಧ ಮಾಡಿದ ಜಮಾಯತ್ ಇ ಇಸ್ಲಾಮಿ ಯ 25 ಸದಸ್ಯರಿಗೆ ಬಿಎನ್‌ಪಿ ಸ್ಪರ್ಧಿಸಲು ಅವಕಾಶ ಕೊಟ್ಟಿದ್ದೆ ಅವರ ಹೀನಾಯ ಸೋಲಿಗೆ ಪ್ರಮುಖ ಕಾರಣವೆಂದು ಹಸೀನಾ ತಮ್ಮ ಅಭಿಪ್ರಾಯ ವನ್ನು ಹೇಳಿದ್ದಾರೆ. ಇದಲ್ಲದೆ, ಕಳೆದ ಹತ್ತು ವರ್ಷಗಳಿಂದ ಅನೇಕ ಕ್ಷೇತ್ರಗಳಲ್ಲಿ ಬಾಂಗ್ಲಾದೇಶದ ವನ್ನು ಅಭಿವೃದ್ಧಿ ಪಥದತ್ತ ಕೊಂಡಯ್ಯಲಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕ ದಲ್ಲಿ ಹಲವು ನೆರೆ–ಹೊರೆಯ ದೇಶಗಳಿಗಿಂತ ಬಾಂಗ್ಲಾದೇಶ ಮೇಲಿದೆ. ಬಡತನ, ಹಸಿವು, ನಿರುದ್ಯೋಗದ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದಾಗ್ಯೂ, ಇವರ ಆಡಳಿತವು ಭ್ರಷ್ಟಾಚಾರದಿಂದ ವಿಮುಕ್ತಿ ಗೊಂಡಿಲ್ಲ. ವಿದ್ಯಾರ್ಥಿ–ಯುವ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹತ್ತಿಕ್ಕಲಾಗಿದೆ ಎಂಬ ಆರೋಪಕ್ಕೆ ಇವರು ತುತ್ತಾಗಿದ್ದಾರೆ.

JANASHAKTHI KANNADA VARA PATRIKE JANUARY 14-20, 2019 Price: Rs. 10/- Date of Publication: 11 JANUARY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಕುಂದಾಪುರ


ಯಲ್ಲಾಪುರ


ಹುಣಸೂರು



ಬೆಂಗಳೂರು


ಮಂಗಳೂರು

‘ಕರ್ನಾಟಕದಲ್ಲಿ 50 ಲಕ್ಷ ಕಾರ್ಮಿಕರ ಚಾರಿತ್ರಿಕ 2-ದಿನಗಳ ಮುಷ್ಕರದ ಝುಲಕ್’

ವರದಿ ಪುಟ 4 -5 ರಲ್ಲಿ


ಕಲಬುರಗಿ



ಹಾಸನ


ಹುಬ್ಬಳ್ಳಿ


ಶಿರಾ – ತುಮಕೂರು


ಮಂಡ್ಯ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**